ಸಂಪುಟ 15
ಸಂಚಿಕೆ 44

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
7 ನವಂಬರ್ 1993

ಕಾಶ್ಮೀರ ಸಮಸ್ಯೆ : ಸಂಯಮ, ಜಾಗರೂಕತೆ ಅತ್ಯಗತ್ಯ

ಆತುರದ ಕಾರ್ಯಾಚರಣೆ ದೇಶಕ್ಕೆ ಅಪಾಯಕಾರಿ ಕೇಂದ್ರ ಸರಕಾರಕ್ಕೆ ಸುರ್ಜಿತ್ ಎಚ್ಚರಿಕೆ

ಶ್ರೀ ನಗರದ ಹಜರತ್‌ಬಾಲ್ ದರ್ಗಾದಲ್ಲಿನ ಸನ್ನಿವೇಶವನ್ನು "ಅತ್ಯಂತ ಸಂಯಮ ಹಾಗೂ ಜಾಗರೂಕತೆ"ಯಿಂದ ನಿರ್ವಹಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಭಾರತ ಸರಕಾರವನ್ನು ಆಗ್ರಹಿಸಿದ್ದಾರೆ. ಅಕ್ಟೋಬರ್ 20 ರಂದು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ ಸುರ್ಜಿತ್ ತನ್ನ ಕಾರ್ಯಾಚರಣೆ ಪರಿಸ್ಥಿತಿಯನ್ನು ಉಲ್ಬಣಗೊಳಿಸಿ ಪಾಕಿಸ್ತಾನಕ್ಕೆ ನೆರವಾಗುತ್ತದೋ ಅಥವಾ ಪರಿಸ್ಥಿತಿಯನ್ನು ಸುಧಾರಿಸುತ್ತದೋ ಎಂದು ಸರಕಾರ ಚೆನ್ನಾಗಿ ಯೋಚಿಸಿ ಮುಂದುವರಿಯಬೇಕು ಎನ್ನುತ್ತಾ ಆತುರದಿಂದ ಕೈಗೊಳ್ಳುವ ಪರಿಸ್ಥಿತಿಯನ್ನು ಉಲ್ಬಣಗೊಳಿಸುವ ಯಾವುದೇ ಕ್ರಮ ಅತ್ಯಂತ ಅಪಾಯಕಾರಿ ಎಂದು ಒತ್ತಿ ಹೇಳಿದರು. ಅಕ್ಟೋಬರ್ 21 ರಂದು ದಿಲ್ಲಿಯಲ್ಲಿ ಒಂದು ಪತ್ರಿಕಾ ಸಮ್ಮೇಳನದಲ್ಲಿ ಸುರ್ಜಿತ್ ಈ ಅಂಶ ತಿಳಿಸಿದರು.

ಕಾಶ್ಮೀರ ಪರಿಸ್ಥಿತಿ ಈಗ ಹಿಂದೆಂದೂ ಕಾಣದಷ್ಟು ಗಂಭೀರವಾಗಿದೆ. ಅಕ್ಟೋಬರ್ 15ರ ಶುಕ್ರವಾರದಿಂದ ಸೇನೇ ಹಾಗೂ ಅರೆಸೈನಿಕ ಪಡೆಗಳು ನಮ್ಮ ಉಪಖಂಡದ ಚಾರಿತ್ರಿಕ ಪೂಜಾಸ್ಥಳಗಳಲ್ಲಿ ಪ್ರಮುಖವಾದ ಪ್ರವಾದಿ ಮಹಮ್ಮದ್‌ರ ಒಂದು ಅವಶೇಷ ಇರುವ ಹಜರತ್‌ಬಲ್ ದರ್ಗಾವನ್ನು ಸುತ್ತುವರಿದಿದ್ದಾರೆ. ಸಶಸ್ತ್ರ ಉಗ್ರಗಾಮಿಗಳು ಅಲ್ಲಿ ಆಶ್ರಯ ಪಡೆದಿದ್ದಾರೆಂಬುದು ಈಗ ಸ್ಪಷ್ಟ. ಅಕ್ಟೋಬರ್ 15 ರ ಶುಕ್ರವಾರದ ನಮಾಜಿಗೆ ಅಲ್ಲಿಗೆ ಹೋದ 200-300 ಮಂದಿ ಅಲ್ಲೇ ಸಿಕ್ಕಿಕೊಂಡಿದ್ದರು ಎಂದು ಹೇಳಲಾಗಿದೆ. ಅವರಲ್ಲಿ ಕೆಲವರು ಈಗ ಹೊರಬಂದಿದ್ದಾರೆ. ಇತರರನ್ನು ಉಗ್ರಗಾಮಿಗಳು ಬಂದಿಗಳನ್ನಾಗಿ ಮಾಡಿಕೊಂಡಿದ್ದಾರೆ ಎಂದೂ ಹೇಳಲಾಗುತ್ತಿದೆ. ಉಗ್ರಗಾಮಿಗಳ ಬಳಿ ಶಸ್ತ್ರಾಸ್ತ್ರಗಳಿವೆ ಎಂದೂ ತಿಳಿದುಬಂದಿದೆ. ಸರಕಾರ ಅವರೊಡನೆ ನಡೆಸಿದ ಮಾತುಕತೆ ವಿಫಲಗೊಂಡಿದೆ. ಏಕೆಂದರೆ ಅವರು ತಮಗೆ ಮುಕ್ತವಾಗಿ ಹೋಗಲು ಅವಕಾಶ ನೀಡಬೇಕು ಎಂದು ಒತ್ತಾಯಿಸುತ್ತಿದ್ದಾರೆ.

"ಆಪರೇಶನ್ ಬ್ಲೂ ಸ್ಟಾರ್" ಪುನರಾವರ್ತನೆ ಬೇಡ

ಈ ಮಧ್ಯೆ ದೇಶ ಆತಂಕದಿಂದ ಶ್ರೀನಗರದತ್ತ ನೋಡುತ್ತಿದೆ. ಸಂಘಪರಿವಾರ ಮತ್ತಿತರ ಕೋಮುವಾದಿಗಳು ಮಸೀದಿಗೆ ನುಗ್ಗಿ ಉಗ್ರಗಾಮಿಗಳನ್ನು ಹೊರಗೆಳೆಯಬೇಕು ಎಂದು ಹೇಳುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರೀ ಕ್ರಮ. ಏಕೆಂದರೆ ಇದೊಂದು ಚಾರಿತ್ರಿಕ ದರ್ಗಾ ಆಗಿರುವುದರಿಂದ ಯಾವುದೇ ಕ್ರಮದ ಪರಿಣಾಮ ದೇಶದೊಳಗೆ ಮಾತ್ರವಲ್ಲ, ವಿದೇಶಗಳಲ್ಲೂ ಕಂಡುಬರುತ್ತದೆ. ಉಗ್ರಗಾಮಿಗಳನ್ನು ಹಿಡಿಯುವ ಸಮಯದಲ್ಲಿ ಪ್ರವಾದಿಗಳ ಅವಶೇಷಕ್ಕೆ ಏನಾದರೂ ತೊಂದರೆಯಾದರೆ ಅದರಿಂದ ಗಂಭೀರ ಪರಿಣಾಮಗಳಾಗುವ ಸಂಭವವಿದೆ. ಉಗ್ರಗಾಮಿಗಳೇ ಏನಾದರೂ ಹಾನಿ ಮಾಡಿ ಅದನ್ನು ಸರಕಾರದ ತಲೆಗೆ ಕಟ್ಟುವ ಸಂಭವವೂ ಇದೆ. ಆದ್ದರಿಂದಲೇ ಅತ್ಯಂತ ಸಂಯಮದಿಂದ ಕ್ರಮಕೈಗೊಳ್ಳಬೇಕಾಗಿದೆ ಎಂದು ಸುರ್ಜಿತ್ ಹೇಳಿದ್ದಾರೆ. ಈ ಸಂದರ್ಭದಲ್ಲಿ ಅವರು 1984 ರಲ್ಲಿ ಅಮೃತಸರದ ಸ್ವರ್ಣ ಮಂದಿರದಲ್ಲಿ ಅಡಗಿದ್ದ ಖಾಲಿಸ್ತಾನಿ ಉಗ್ರಗಾಮಿಗಳನ್ನು ಹಿಡಿಯಲು ಸೇನೆ ಒಳನುಗ್ಗಿದ 'ಆಪರೇಷನ್ ಬ್ಲೂಸ್ಟಾರ್' ಕಾರ್ಯಾಚರಣೆಯ ದುಷ್ಪರಿಣಾಮಗಳನ್ನು ನೆನಪಿಸಿದರು. ಕೆಲವೇ ಉಗ್ರಗಾಮಿಗಳನ್ನು ಹಿಡಿಯಲು ಸರಕಾರ ಇಂತಹ ಕಾರ್ಯಾಚರಣೆಗಿಳಿದರೆ ಉಗ್ರಗಾಮಿಗಳು ಜನಗಳ ಧಾರ್ಮಿಕ ಭಾವನೆಯನ್ನು ಉದ್ರೇಕಿಸಿ ಈಗಾಗಲೇ ಕೇಂದ್ರ ಸರಕಾರದಿಂದ ಖಿನ್ನರಾಗಿರುವ ಜನಸಾಮಾನ್ಯರು ಸರಕಾರದ ಬಗ್ಗೆ ಒಟ್ಟು ಭಾರತದ ಬಗ್ಗೆ ಇನ್ನಷ್ಟು ಖಿನ್ನರಾಗಿಸುವ ಅಪಾಯವನ್ನು ಎದುರಿಸಬೇಕಾಗುತ್ತದೆ. ಇದಕ್ಕೆ ದೇಶದ ಹಾಗೂ ಜನತೆ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಸುರ್ಜಿತ್ ಎಚ್ಚರಿಸಿದ್ದಾರೆ.

ಹೀಗೇಕಾಯಿತು?

ಈ ಗಂಭೀರ ಸಮಸ್ಯೆಯ ರಾಜಕೀಯ ಆಯಾಮವನ್ನು ಸರಿಯಾಗಿ ಗಮನಿಸಿದಂತಿಲ್ಲ ಎಂದೂ ಸುರ್ಜಿತ್ ಹೇಳಿದ್ದಾರೆ. ದರ್ಗಾದ ಒಳಗಿರುವ ಉಗ್ರಗಾಮಿಗಳ ಬಗ್ಗೆ ಹಲವು ಕಥೆಗಳು ಕೇಳಬರುತ್ತಿವೆ. ಇವು ನಿಜವಿರಬಹುದು ಅಥವಾ ಸುಳ್ಳಿರಬಹುದು. ಆದರೆ ಪ್ರವಾದಿಗಳ ಅವಶೇಷವಿರುವ ಪವಿತ್ರ ಸ್ಥಳದ ಬೀಗವನ್ನು ಯಾರು ತೆಗೆದರು, ಅದರ ಒಳಗೆ ಹೋಗಲು ಯಾರಿಗಾದರೂ ಹೇಗೆ ಸಾಧ್ಯವಾಯಿತು, ನಮ್ಮ

ಪುಟ 7ಕ್ಕೆ

ಆಕಾಲಿ-ಬಿಜೆಪಿ ಐಕ್ಯತೆ ರಾಷ್ಟ್ರೀಯ ಐಕ್ಯತೆ ಮುರಿಯುವ ಐಕ್ಯತೆ

ಈ ಪತ್ರಿಕಾ ಸಮ್ಮೇಳನದಲ್ಲಿ ನವಂಬರ್‌ನಲ್ಲಿ ಚುನಾವಣೆ ನಡೆಯಲಿರುವ ಐದು ರಾಜ್ಯಗಳ ಮತದಾರರಿಗೆ ಪಕ್ಷದ ಮನವಿಯನ್ನು ಬಿಡುಗಡೆಗೊಳಿಸುತ್ತಾ ಕಾಂ. ಸುರ್ಜಿತ್ ಆಕಾಲಿ ದಳದ ಬಾದಲ್ ಗುಂಪು ಹಾಗೂ ಬಿಜೆಪಿ ನಡುವೆ ಹೊಸದಾಗಿ ಮೂಡಿರುವ ಐಕ್ಯತೆ ಈ ಚುನಾವಣೆಯ ಒಂದು ಕುತೂಹಲಕಾರಿ ಅಂಶ ಎಂದಿದ್ದಾರೆ. ಬಾದಲ್ ಗುಂಪು ಸತತವಾಗಿ ಪ್ರತ್ಯೇಕ ಖಾಲಿಸ್ತಾನವನ್ನು ಪ್ರತಿಪಾದಿಸುತ್ತಾ ಬಂದಿದೆ, ಬಿಜೆಪಿ ಹಿಂದೂ ರಾಷ್ಟ್ರದ ಮಾತಾಡುತ್ತಾ ಬಂದಿದೆ. ಆದ್ದರಿಂದ ಇದು 'ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸಲು ಉದ್ಯುಕ್ತರಾಗಿರುವ ಶಕ್ತಿಗಳ ಐಕ್ಯತೆ' ಎಂದು ಸುರ್ಜಿತ್ ವರ್ಣಿಸಿದರು.

ಓ ಕಾಂಗ್ರೆಸ್ಸಿಗರೇ, ಇನ್ನಾದರೂ ಜಾತೀಯ, ಮತೀಯ ರಾಜಕೀಯವನ್ನು ಬದಿಗಿರಿಸಿರಿ

ದೇಶದಲ್ಲಿ ಇಷ್ಟೊಂದು ಜಾತೀಯತೆ, ಮತೀಯತೆ ಬೆಳೆದು ಇಂದು ಬಿಜೆಪಿ ರೂಪದಲ್ಲಿ ಈ ಶಕ್ತಿಗಳು ದೇಶದ ಐಕ್ಯತೆ ಮತ್ತು ಸಮಗ್ರತೆಗೇ ಸವಾಲು ಹಾಕುವಂತಾದುದರಲ್ಲಿ ಕಾಂಗ್ರೆಸ್(ಐ) ಪಕ್ಷದ ಪಾತ್ರ ಹಿರಿದು ಎಂಬುದರಲ್ಲಿ ಏನೂ ಸಂಶಯವಿಲ್ಲ. ಕಾಂಗ್ರೆಸ್(ಐ) ಮತ್ತು ಬಿಜೆಪಿಗಳೆರಡನ್ನು ಸೋಲಿಸಿ ಎಡ, ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳನ್ನು, ಶಕ್ತಿಗಳನ್ನು ಗೆಲ್ಲಿಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದೇಶದ ಉತ್ತರದ ಆರು ರಾಜ್ಯಗಳಲ್ಲಿ ನಡೆಯುವ ಚುನಾವಣೆಯಲ್ಲಿ ಜನತೆಗೆ ಕರೆ ಕೊಟ್ಟುದುದರಲ್ಲಿ ನೂರಕ್ಕೆ ನೂರು ಸತ್ಯಾಂಶವಿದೆ.

-- ಪಿ. ರಾಮಚಂದ್ರ ರಾವ್

ನಮ್ಮ ರಾಜ್ಯದ ಕಾಂಗ್ರೆಸ್(ಐ) ಈ ನೀತಿಗೆ ಸ್ಪಷ್ಟ ಉದಾಹರಣೆ. ಇತ್ತೀಚೆಗಿನ ರಾಜ್ಯದ ರಾಜಕೀಯ ವಿದ್ಯಮಾನವನ್ನು ಪರಿಶೀಲಿಸೋಣ. ರಾಜಶೇಖರ ಮೂರ್ತಿ ಕಾಂಗ್ರೆಸ್ ಭಿನ್ನಮತೀಯರಲ್ಲಿ ಅಗ್ರಗಣ್ಯ, ಮೊಯಿಲಿಯವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸಬೇಕೆಂದು ಹೋರಾಡುತ್ತಾ ಬಂದ ಭಿನ್ನಮತೀಯ ಕಾಂಗ್ರೆಸ್ಸಿಗರಲ್ಲಿ ಅವರ ಪಾತ್ರ ಹಿರಿದು. ಇದರಲ್ಲಿ ನಮಗೆ ಆತಂಕವೇನೂ ಇಲ್ಲ. ಆದರೆ ಅವರು ಒಬ್ಬ ಜವಾಬ್ದಾರಿ ಮಂತ್ರಿಯಾಗಿದ್ದು ಮಂತ್ರಿಯ ಕೆಲಸ ಮಾಡುವುದರಲ್ಲಿ ಆಸಕ್ತಿ ವಹಿಸುವುದರ ಬದಲು ತಾನು ಯಾವ ಮುಖ್ಯಮಂತ್ರಿಯ ಮಂತ್ರಿಮಂಡಳದಲ್ಲಿ ಮಂತ್ರಿಯಾಗಿದ್ದೇನೋ ಅವರನ್ನೇ ಹಳಿಯುತ್ತಾ ರಾಜ್ಯದಾದ್ಯಂತ ತಿರುಗಾಡುವುದೇ ಇವರ ಹವ್ಯಾಸ. ದಿನನಿತ್ಯ ಪದಚ್ಯುತಿಯ ಕುರಿತು ಹಂಚಿಕೆ ಹಾಕುವುದರಲ್ಲೇ ಅವರು ಸಮಯ ವಿನಿಯೋಗ. ಅದರ ಬಗ್ಗೆ ನಮ್ಮ ಆಕ್ಷೇಪ.

ಪುಟ 8ಕ್ಕೆ

ಅಕ್ಟೋಬರ್ ಕ್ರಾಂತಿಯ 76 ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಪಶ್ಚಿಮಬಂಗಾಳದಲ್ಲಿ ವ್ಯಾಪಕ ರಾಜಕೀಯ-ಸೈದ್ಧಾಂತಿಕ ಪ್ರಚಾರ

ಮಹಾನ್ ಅಕ್ಟೋಬರ್ ಕ್ರಾಂತಿಯ 76ನೇ ವಾರ್ಷಿಕೋತ್ಸವದ ದಿನ ಪ್ರತಿಯೊಂದು ಹಂತದಲ್ಲಿ ರಾಜಕೀಯ ಚರ್ಚೆಗಳನ್ನು ಸಂಘಟಿಸಲು ಸಿಪಿಐ(ಎಂ) ಪಶ್ಚಿಮಬಂಗಾಳ ರಾಜ್ಯ ಸಮಿತಿ ನಿರ್ಧರಿಸಿದೆ. ನವಂಬರ್ ತಿಂಗಳಾದ್ಯಂತ ಪಕ್ಷದೊಳಗೆ ಹಾಗೂ ಹೊರಗೆ ಒಂದು ಚೈತನ್ಯಶಾಲಿ ರಾಜಕೀಯ-ಸೈದ್ಧಾಂತಿಕ ಪ್ರಚಾರ ಪ್ರಕ್ಷೋಭೆ ನಡೆಸಲು ಅದು ನಿರ್ಧರಿಸಿದೆ. ಜಿಲ್ಲಾ ಮಟ್ಟಗಳಲ್ಲಿ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳ ಮುಖ್ಯ ಸಂಗಾತಿಗಳು ಭಾಗವಹಿಸಿದ ಪಾರ್ಟಿ ಶಾಲೆಗಳ, ಇತರ ಮಟ್ಟಗಳಲ್ಲಿ ಹಲವು ರಾಜಕೀಯ ತರಗತಿಗಳು, ಜತೆಗೆ ಸಾರ್ವಜನಿಕ ಉಪನ್ಯಾಸಗಳು, ಗುಂಪು ಸಭೆಗಳು ಇತ್ಯಾದಿಗಳನ್ನು ನಡೆಸಲಾಗುವುದು.

ಈ ಕಾರ್ಯಕ್ರಮವನ್ನು ವಿವರಿಸುತ್ತಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇನ್ ದಾಸ್‌ಗುಪ್ತಾ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ಬೋಧನೆಗಳು, ಅಂತರಾಷ್ಟ್ರೀಯ ಸನ್ನಿವೇಶದಲ್ಲಿ ಮೂಡಿ ಬರುತ್ತಿರುವ ಪ್ರವೃತ್ತಿಯ ಸ್ಥೂಲ ರೂಪ ಹಾಗೂ ದೇಶದ ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚೆ ಹಾಗೂ ಅಧ್ಯಯನಗಳ ಮೇಲೆ ಒತ್ತು ನೀಡಲಾಗುವುದು ಎಂದು ಹೇಳಿದ್ದಾರೆ. ಅಂತರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಒಂದು ಟಿಪ್ಪಣಿಯನ್ನು ಪಕ್ಷದ ಸದಸ್ಯರುಗಳಿಗಾಗಿ ಈಗಾಗಲೇ ತಯಾರಿಸಲಾಗಿದೆ. ರಾಷ್ಟ್ರೀಯ ಸನ್ನಿವೇಶ ಹಾಗೂ ಪಶ್ಚಿಮಬಂಗಾಳದಲ್ಲಿ ಪಕ್ಷದ ಕರ್ತವ್ಯದ ಬಗ್ಗೆ ಇನ್ನೊಂದು ಕಿರುಪುಸ್ತಕ ಸಿದ್ಧಗೊಳ್ಳುತ್ತಿದೆ.

ಅಂತರಾಷ್ಟ್ರೀಯ ಸನ್ನಿವೇಶದಲ್ಲಿ ಪ್ರಮುಖ ವೈರುಧ್ಯಗಳು ತೀವ್ರಗೊಳ್ಳುತ್ತಿರುವುದು, ಬಂಡವಾಳಶಾಹೀ ಜಗತ್ತಿನಲ್ಲಿನ ಬಿಕ್ಕಟ್ಟುಗಳು, ಹಿಂದಿನ ಸಮಾಜವಾದಿ ದೇಶಗಳಲ್ಲಿನ ಪರಿಸ್ಥಿತಿ, ಸಮಕಾಲೀನ ಕಾರ್ಮಿಕ ವರ್ಗದ ಮುಂದಿರುವ ಸಮಸ್ಯೆಗಳು ಇತ್ಯಾದಿಗಳನ್ನು ಸಂಗಾತಿಗಳಿಗೆ ವಿವರಿಸಲು ರಾಜ್ಯ ಸಮಿತಿ ನಿರ್ಧರಿಸಿದೆ. ಇದಲ್ಲದೆ ಒಂದು ಕ್ರಾಂತಿಕಾರಿ ಪಕ್ಷದ ಕಾರ್ಯನಿರ್ವಹಣೆಯ ಬಗ್ಗೆ ಪಶ್ಚಿಮ ಬಂಗಾಳದಲ್ಲಿನ ಅವಕಾಶಗಳು ಹಾಗೂ ಸಮಸ್ಯೆಗಳನ್ನು ಕುರಿತಂತೆ ವಿಶೇಷ ಒತ್ತು ನೀಡಿ ಚರ್ಚಿಸಲಾಗುವುದು.

ವ್ಯಾಪಕ ಜನ ವಿಭಾಗಗಳಿಗೆ ಮಾರ್ಕ್ಸ್‌ವಾದಿ ಸಾಹಿತ್ಯವನ್ನು ಪ್ರಸಾರಗೊಳಿಸಲು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಈಗಾಗಲೇ ಮುತುವರ್ಜಿ ವಹಿಸಿವೆ. ಹಬ್ಬದ ಸಮಯದಲ್ಲಿ ನೂರಾರು ಬುಕ್‌ಸ್ಟಾಲ್‌ಗಳನ್ನು ಹಾಕಲಾಗಿದೆ. 'ಗಣಶಕ್ತಿ' ಹಾಗೂ ಇತರ ಪಕ್ಷದ ಪತ್ರಿಕೆಗಳನ್ನು ಮಾರಲು ಒಂದು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.



ಉತ್ತರ ಭಾರತದ ವಿಧಾನ ಸಭಾ ಚುನಾವಣೆಗಳು

ಆಹಾ! ಬಿಜೆಪಿಯ "ರಾಜಕೀಯ ಸಂಸ್ಕೃತಿ"

"ಧರ್ಮ-ಸಂಸ್ಕೃತಿ" ಎಂದು ಬೊಬ್ಬೆ ಹಾಕುವ ಬಿಜೆಪಿಯ "ರಾಜಕೀಯ ಸಂಸ್ಕೃತಿ" ಜನಗಳ ತುಚ್ಛೀಕಾರಕ್ಕೆ ತುತ್ತಾಗಿ ಮನೆಮಾತಾಗಿರುವ 'ಕಾಂಗ್ರೆಸ್ ಸಂಸ್ಕೃತಿ'ಗಿಂತ ಭಿನ್ನವಾಗಿದೆಯೇ? ಈ ಬಗ್ಗೆ ಇನ್ನೂ ಯಾರಲ್ಲಾದರೂ ಭ್ರಮೆ ಉಳಿದಿದ್ದರೆ ಉತ್ತರ ಭಾರತದ ಐದು ವಿಧಾನಸಭೆ ಚುನಾವಣೆಗಳಿಗೆ ಟಿಕೇಟು ಹಂಚುವಲ್ಲಿ ಗಲಭೆ-ಗೊಂದಲಗಳನ್ನು ಕಂಡ ಮೇಲೆ ಖಂಡಿತಾ ಅಂತವರಿಗೂ ಭ್ರಮೆ ನಿರಸನವಾಗಿರುತ್ತದೆ.

ಅಕ್ಟೋಬರ್ 12 ಹಾಗೂ ಅದರ ಹಿಂದಿನ ದಿನವೂ ದಿಲ್ಲಿಯಲ್ಲಿ ಬಿಜೆಪಿಯ ಕೇಂದ್ರ ಕಚೇರಿ ಗಲಾಟೆಗಳ ಕೇಂದ್ರವೇ ಆಗಿಬಿಟ್ಟಿತ್ತು. ವಿಧಾನಸಭಾ ಚುನಾವಣೆಗಳಿಗೆ ಟಿಕೇಟುಗಳ ಬಗ್ಗೆ ನಿರ್ಧರಿಸಲು ಬಿಜೆಪಿಯ ಪ್ರಮುಖ ಮುಖಂಡರುಗಳ ಸಭೆಯನ್ನು "ಆಮರಣ ಉಪವಾಸ"ಗಳ "ಆತ್ಮಾಹುತಿ"ಗಳ ಬೆದರಿಕೆಗಳ ಗದ್ದಲಗಳನ್ನು ನಡುವೆ ಒಂದು ದಿನ ಮುಂದೂಡಬೇಕಾಗಿ ಬಂತು. ಅಕ್ಟೋಬರ್ 12 ರಂದು ಒಬ್ಬ ಕಾರ್ಯಕರ್ತ ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲು ಸಿದ್ಧನಾಗಿಯೇ ಬಿಟ್ಟ. ಅಡ್ವಾಣಿಯ ರಕ್ಷಣೆಗಿರುವ ಬ್ಲಾಕ್ ಕಮಾಂಡೋಗಳಿಂದಾಗಿ ಈ 'ಆತ್ಮಾಹುತಿ' ನಡೆಯಲಿಲ್ಲ. ಆದರೆ ಇನ್ನೊಂದೆಡೆ ದಿಲ್ಲಿ ಬಿಜೆಪಿ ಅಧ್ಯಕ್ಷ ಓಂ ಪ್ರಕಾಶ್ ಕೋಹ್ಲಿಯನ್ನು ಕಾರ್ಯಕರ್ತರು ಎಳೆದಾಡುವುದನ್ನು ನಿಲ್ಲಿಸಲು ಅವರಿಗೂ ಸಾಧ್ಯವಿರಲಿಲ್ಲ. ಮತ್ತೊಂಡೆಡೆ ಇನ್ನೊಬ್ಬ ಟಿಕೆಟ್ ಆಶಿಸಿ ಬಂದಾತನ ಹತ್ತಾರು ಬೆಂಬಲಿಗರು ಉಪವಾಸ ಕೂತಿದ್ದ ದೃಶ್ಯ, ತಮ್ಮ ಉಪವಾಸ ವ್ಯರ್ಥವೆನಿಸಿದಾಗ ಅವರು ತಮ್ಮ ಅತ್ಯುಚ್ಛ ಮುಖಂಡರಿಗೆ ಸದ್ಯದಲ್ಲೇ ಕೇಂದ್ರದಲ್ಲಿ ಅಧಿಕಾರ ನಡೆಸುತ್ತೇವೆ ಎನ್ನುವ ಮುಖಂಡರಿಗೆ 'ಧಿಕ್ಕಾರ' "ಮುರ್ದಾಬಾದ್" ಕೂಗಲು ಹಿಂಜರಿಯಲಿಲ್ಲ. ಪ್ರಮುಖ ಬಿಜೆಪಿ ಮುಖಂಡ ಮದನ್‌ಲಾಲ್ ಖುರಾನಾರವರ ಕಾರಿನ ಮೇಲೆ ಒಂದು ಹೂದಾನಿ ಬಂದು ದೊಬ್ಬನೆ ಬಿತ್ತು- ಟಿಕೆಟ್ ದೊರೆಯದ ಖಿನ್ನತೆಯ ಪ್ರತೀಕವಾಗಿ!

ಇಂತಹ ಮಂದಿಗಳ ಪಕ್ಷ ಅಧಿಕಾರಕ್ಕೆ ಬಂದರೆ ವಿಧಾನಸೌಧದಲ್ಲಿನ ದೃಶ್ಯ ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕ ಜನತೆ ಕಾಣುತ್ತಿರುವ ಅಸಹ್ಯ ದೃಶ್ಯಗಳಿಗಿಂತ ಭಿನ್ನವಾಗಿರಬಲ್ಲದೇ? ಉತ್ತರದ ಆ ಐದು ರಾಜ್ಯಗಳ ಮತದಾರರು ಯೋಚಿಸಬೇಕಾಗಿದೆ.

ದಿಲ್ಲಿಯಲ್ಲಷ್ಟೇ ಅಲ್ಲ

ಈ ಕಿತ್ತಾಟ, ಬಡಿದಾಟ, ಗಲಾಟೆ ದಿಲ್ಲಿಯಲ್ಲಷ್ಟೇ ಅಲ್ಲ, ಬಿಜೆಪಿ ಅಧಿಕಾರದಲ್ಲಿದ್ದ ನಾಲ್ಕು ರಾಜ್ಯಗಳಲ್ಲಿ ಕಂಡು ಬರುತ್ತಿದೆ. ಮಧ್ಯಪ್ರದೇಶದಲ್ಲಿ ಬಿಜೆಪಿ ಮೇಲಿಂದ ಕೆಳಗಿನವರೆಗೂ ಒಡೆದಿದೆ. ಒಂದೆಡೆ ಮಾಜೀ ಮುಖ್ಯಮಂತ್ರಿ ಪಟ್ವಾ, ಇನ್ನೊಂದು ಕಡೆ ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ವಿ.ಕೆ. ಸಕ್ಲೇಚಾ. ಮತ್ತೊಂದು ಕಡೆ ಪಕ್ಷದ ರಾಜ್ಯ ಅಧ್ಯಕ್ಷ ಖುಶಭಾವೂ ಠಾಕ್ರೆ. ಇವರ ನಡುವಿನ ಎಳೆದಾಟ ಇಡೀ ರಾಜ್ಯವನ್ನು ವ್ಯಾಪಿಸಿದೆ. ರಾಜಸ್ಥಾನದ ರಾಜಧಾನಿ ಜಯಪುರದಲ್ಲಿ ಬಿಜೆಪಿ ಕಛೇರಿ ಮತಪ್ರದರ್ಶನ, ಪ್ರತಿಭಟನೆಗಳ ತಾಣವಾಗಿ ಬಿಟ್ಟಿದೆ. ಮಾಜೀ ಮುಖ್ಯಮಂತ್ರಿ ಶೇಖಾವತ್ ಹಠದಿಂದ ಕೇಂದ್ರ ಮುಖಂಡತ್ವ ವೀಕ್ಷಕರಾಗಿ ಕಳಿಸಿದ್ದ ಪ್ರಮುಖ ಮುಖಂಡ ಎಸ್.ಎಸ್. ಭಂಡಾರಿ ದಿಲ್ಲಿಗೆ ವಾಪಸಾಗಬೇಕಾಯಿತು. ಹಿಂದಿನ ಬಿಜೆಪಿ ಅಖಿಲ ಭಾರತ ಅಧ್ಯಕ್ಷ ಜೋಷಿಯವರು ದಕ್ಷಿಣ ಭಾರತಕ್ಕೆ 'ಗಡಿಪಾರು' ಮಾಡಿದ್ದ ಗೋವಿಂದಾಚಾರ್ಯ ವೀಕ್ಷಕರಾಗಿ ಬಂದು ರಾಜ್ಯಸಭಾ ಚುನಾವಣೆಗಳಲ್ಲಿ ವಿರುದ್ಧ ಮತನೀಡಿ ತಮ್ಮ ಪಕ್ಷದ ಅಭ್ಯರ್ಥಿ ಎಸ್.ಎಸ್.ಭಂಡಾರಿಯವರನ್ನು ಸೋಲಿಸಿದ 'ಅಶಿಸ್ತು' ತೋರಿದ ಇಬ್ಬರು ಮಾಜಿ ಎಂ.ಎಲ್.ಎ.ಗಳಿಗೆ ಸೀಟು ದೊರಕಿಸಿಕೊಟ್ಟರು! ಎಂತಹಾ ಶಿಸ್ತು- ಸಂಸ್ಕೃತಿ! ಹಿಮಾಚಲ ಪ್ರದೇಶದಲ್ಲೂ ಇದೇ ಪರಿಸ್ಥಿತಿ. 'ನೋಡಿ, ಬೇರೆಲ್ಲಾ ಪಕ್ಷಗಳು ತಮ್ಮ ಅಭ್ಯರ್ಥಿಗಳು ಯಾರೆಂದೇ ನಿರ್ಧರಿಸಿಲ್ಲ. ನಾವು ನಿರ್ಧರಿಸಿಬಿಟ್ಟಿದ್ದೇವೆ.' ಎಂದು ಉತ್ತರ ಪ್ರದೇಶದಲ್ಲಿ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದ ದಿನ ಕೊಚ್ಚಿಕೊಂಡ ಬಿಜೆಪಿ ಮುಖಂಡತ್ವ ನಂತರ ತನ್ನ ಅಭ್ಯರ್ಥಿಗಳ ಇನ್ನೊಂದು ಪಟ್ಟಿ ಹೊರಡಿಸಿತು. ನಾಮಪತ್ರ ವಾಪಸು ತೆಗೆದುಕೊಳ್ಳಬೇಕಾದ ಕೊನೆಯ ದಿನದಂದು!

ಕಾಂಗ್ರೆ ಕೂಡಾ ನಾಚಿಕೊಳ್ಳಬೇಕು!

ಈ ಎಲ್ಲಾ ಕಿತ್ತಾಟಗಳ 'ಪರಿಹಾರ' ಹೇಗೆ? ಅದರಲ್ಲೂ ಕಾಂಗ್ರೆ ಕೂಡಾ ನಾಚಿಕೊಳ್ಳಬೇಕಾದ ಸ್ಥಿತಿ! ಅಕ್ಟೋಬರ್ 17 ರಂದು ಪಶ್ಚಿಮ ದಿಲ್ಲಿಯ ಖ್ಯಾಲಾ ಎಂಬಲ್ಲಿ ರಾಜಕುಮಾರ್ ಪರಾಶರ್ ಎಂಬ ಬಿಜೆಪಿ ಕಾರ್ಯಕರ್ತ ಆಂತರಿಕ ಜಗಳದಲ್ಲಿ ಎಂದು ಚಾಕು ಇರಿತಗಳಿಂದ ಆಸ್ಪತ್ರೆ ಸೇರಿದ. ವಿಷ್ಣು ಗಾರ್ಡನ್ ವಿಧಾನಸಭಾ ಸ್ಥಾನದ ಬಿಜೆಪಿ ಅಭ್ಯರ್ಥಿ ಆರ್.ಪಿ. ಸಿಂಗ್ ಮೇಲೆ ಭಿನ್ನಮತೀಯ ಬಿಜೆಪಿ ಗುಂಪಿನ ಜನ ಹಲ್ಲೆ ಮಾಡಿದರೆಂದು ಪೋಲೀಸ್ ಮೂಲಗಳಿಂದ ತಿಳಿದುಬಂದಿದೆ. ಇನ್ನೊಂದು ವಿಧಾನಸಭಾ ಕ್ಷೇತ್ರದಲ್ಲಿ ದಿಲ್ಲಿಯಲ್ಲಿ ಬಿಜೆಪಿಯ ಪ್ರಮುಖ ಮುಖಂಡ ಸಾಹೇಬ್ ಸಿಂಗ್ ವರ್ಮಾ ಮೇಲೂ ಹಲ್ಲೆ ನಡೆಯಿತು. ಆ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಬಿಜೆಪಿಯನ್ನು ಬೆಂಬಲಿಸುವ ಜೈನ ಅಗರ್‌ವಾಲಾ ವ್ಯಾಪಾರಿಗಳು ಈ ಬಾರಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವುದಿಲ್ಲ, ಏಕೆಂದರೆ ಆತ ತಮ್ಮ ಕೋಮಿಗೆ ಹೊರಗಿನವ ಎಂದು ಹೇಳುತ್ತಿದ್ದಾರಂತೆ ಆ ಪ್ರದೇಶದಲ್ಲಿ ಈ ಬಗ್ಗೆ ವ್ಯಾಪಕವಾಗಿ ಪೋಸ್ಟರುಗಳನ್ನು ಹಚ್ಚಲಾಗಿದೆ.

ಇದು ಸಹಜ "ಸಂಸ್ಕೃತಿ"


ಬಿಜೆಪಿಯಂತಹ ಪಕ್ಷದಲ್ಲಿ ಇದೆಲ್ಲಾ ಸಾಧ್ಯವಿಲ್ಲ, ಇವೆಲ್ಲಾ 'ಹೊರಗಿನವರು' ಒಳನುಗ್ಗಿ ಮಾಡುತ್ತಿರುವ ಕೆಲಸ ಎಂದು ದಿಲ್ಲಿಯ ಮುಖ್ಯಮಂತ್ರಿ ಎಂದು ಬಿಜೆಪಿ ಹೇಳುತ್ತಿರುವ ಮದನ್‌ಲಾಲ್ ಖುರಾನಾರವರ ಅಂಬೋಣ. "ಬಿಜೆಪಿಯವರಲ್ಲಿ ಕನಿಷ್ಠ ಸಂಘಟನಾ ಪ್ರಜ್ಞೆಯಿಂದ ಅವರು ತಮ್ಮದೇ ಮುಖಂಡರೊಂದಿಗೆ ಕೆಟ್ಟದಾಗಿ ವರ್ತಿಸುವುದಿಲ್ಲ" ಎಂದರಂತೆ ಖುರಾನಾ. ಆದರೆ ಈಗಿನ ಬಿಜೆಪಿ ಕಾರ್ಯಕರ್ತರಲ್ಲಿ ಇಂತಹ ಪ್ರಜ್ಞೆ ಇಲ್ಲ ಅಥವಾ ತ್ವರಿತವಾಗಿ ಮಾಯವಾಗುತ್ತಿದೆ. ಅವರಿಗೀಗ ಬೇಕಾಗಿರುವುದು ಅಧಿಕಾರದ ಸೀಟುಗಳು ಮಾತ್ರ ಎಂದು ಇಡೀ ಜಗತ್ತಿಗೆ ಗೊತ್ತಾಗಿದೆ. ಅದು ಸಹಜ ಕೂಡಾ. ಜನಗಳ ಭಾವನೆಗಳನ್ನು ಉದ್ರೇಕಿಸಿ ಅಧಿಕಾರ ಪಡೆದ, ಅದಿಕಾರದ ಬಲ ಉಪಯೋಗಿಸಿ ಹಣ ಮಾಡಿದ ಬಿಜೆಪಿ ರಾಜಕೀಯದಲ್ಲಿ ಇಂತಹ ಪ್ರಜ್ಞೆ ಹೇಗೆ ಉಳಿಯಲು ಸಾಧ್ಯ? ಸಂಸತ್ತಿಗೆ, ಸರ್ವೋಚ್ಛ ನ್ಯಾಯಾಲಯಕ್ಕೆ ರಾಷ್ಟ್ರೀಯ ಸಮಗ್ರತಾ ಮಂಡಳಿಗೆ ನೀಡಿದ ವಚನಗಳನ್ನು ಯಾವ ಸಂಕೋಚವೂ ಇಲ್ಲದೆ ಮುರಿದ ಒಂದು ಪಕ್ಷದ ಕಾರ್ಯಕರ್ತರಲ್ಲಿ ವಿಧೇಯತೆ ಎಂಬುದು ಇರಬೇಕೆಂದು ಹೇಗೆ ನಿರೀಕ್ಷಿಸಲು ಸಾಧ್ಯ? ತಮ್ಮ ಜೊತೆ ಕೆಯವರ ಮೇಲೆ ಹಿಂಸಾಚಾರ ನಡೆಸಲು, ಅಧಿಕಾರಗಿಟ್ಟಿಸಲು ಏನು ಬೇಕಾದರೂ ಮಾಡಬಹುದು ಎಂದು ತನ್ನ ಸ್ವಯಂ ಸೇವಕರಿಗೆ ಕುಮ್ಮಕ್ಕು ನೀಡುವ ಮುಖಂಡತ್ವ ಅಂತಹ ಸ್ವಯಂ ಸೇವಕರಿಂದ ಬೇರೆ ಎಂತಹ 'ಸಂಸ್ಕೃತಿ' ನಿರೀಕ್ಷಿಸಲು ಸಾಧ್ಯ!

ಒಂದೇ ವ್ಯತ್ಯಾಸ - ಕೋಮುವಾದ

ನಿಜ. ಇಷ್ಟೆಲ್ಲಾ ಆದರೂ ಕಾಂಗ್ರೆ ಮತ್ತು ಬಿಜೆಪಿ 'ಸಂಸ್ಕೃತಿ'ಗಳ ನಡುವೆ ಒಂದು ವ್ಯತ್ಯಾಸ ಇದೆ. ಅದೆಂದರೆ ಕೋಮುವಾದ. ಬೇರೇನೂ ವಿಷಯಗಳಿಲ್ಲದ ಈ ಪಕ್ಷ ಈ ಬಾರಿಯಾ ಮತ್ತೆ ಕೋಮುವಾದದ ಮೊರೆ ಹೊಕ್ಕಿದೆ. ಆದ್ದರಿಂದ ಈ ಬಾರಿಯೂ ಅದರ ಕೇಂದ್ರ ಚುನಾವಣಾ ಘೋಷಣೆ 'ರಾಮಮಂದಿರ' ಮಾತ್ರ. ಸಂಘಪರಿವಾರದ ಇತರ ಪಡೆಗಳು ಈಗಾಗಲೇ ಚುನಾವಣಾ ಪ್ರಚಾರಕ್ಕೆ ಇಳಿದು ಬಿಟ್ಟಿವೆ. ಅಕ್ಟೋಬರ್ 24 ರಂದು 'ಸಂತಸಮ್ಮೇಳನ' ಕರೆಯುವ ಹಿಂದಿನ ಯೋಜನೆಯನ್ನು ಕೈಬಿಟ್ಟು "ರಾಮಜನ್ಮ ಭೂಮಿ ರಕ್ಷಣೆಗೆ ಚುನಾವಣಾ ಮಾಸಾಚರಣೆ' ' ನಡೆಸಲು ಕಾನಪುರದ ಆರ್.ಎಸ್.ಎಸ್. ಮುಖ್ಯಕಛೇರಿಯಲ್ಲಿ ನಡೆದ ಕಾವಿಪಡೆಗಳ ಸಭೆ ನಿರ್ಧರಿಸಿದೆ. ಸಂತ-ಮಹಾಂತರುಗಳನ್ನು ಬಿಜೆಪಿಯ ಚುನಾವಣಾ ಪ್ರಚಾರಕ್ಕೆ ಈಗಾಗಲೇ ಇಳಿಸಲಾಗಿದೆ. ಆದರೂ ಈ ಬಾರಿ ಈ 'ತಂತ್ರ' ಫಲಿಸುತ್ತದೆ [illegible] ಬಗ್ಗೆ ಕಾವಿಪಡೆಗಳ ಮುಖಂಡರಲ್ಲಿ ತೀವ್ರ ಸಂದೇಹವಿದ್ದಂತಿದೆ. ಏಕೆಂದರೆ ಬಾಬ್ರಿ ಮಸೀದಿ ಒಡೆದ "ವೀರ" ಕಲ್ಯಾಣ್ ಸಿಂಗ್ ಮಂತ್ರಿಮಂಡಳದ ನಾಲ್ಕು ಮಂತ್ರಿಗಳು ಹಾಗೂ ಇತರ 19 ಎಂ.ಎಲ್.ಎ.ಗಳಿಗೆ ಈ ಬಾರಿ ಟಿಕೇಟು ನೀಡಿಲ್ಲ!

ಇತಿಹಾಸದ ಪುಟಗಳಿಂದ

ಚೀನಾದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಉಜ್ವಲ ನಾಯಕತ್ವ ನೀಡಿದ ಮಾವೋ



ನಾವು ಬೀಜಿಂಗ್‌ಗೆ ಹೋದ ದಿನ ಅಥವಾ ಮಾರನೇ ದಿನ ಚೀನಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಪರವಾಗಿ ಪ್ರತಿನಿಧಿಗಳಿಗೆ ಒಂದು ಔತಣಕೂಟ ಏರ್ಪಡಿಸಿದ್ದರು. ಅಲ್ಲಿಯೇ ನಾನು ಮಾವೋ ಅವರನ್ನು ಕಂಡಿದ್ದು.

ಪರಸ್ಪರ ಕೈಕುಲಿಕಿದ್ದು ಬಿಟ್ಟರೆ ಒಂದೇ ಒಂದು ಮಾತನ್ನಾಡಲೂ ಸಹ ಆ ಭೇಟಿಯ ಸಂದರ್ಭದಲ್ಲಿ ಆಗಲಿಲ್ಲ. ನಂತರ ಒಂದು ತಿಂಗಳ ಕಾಲ ಚೀನಾದಲ್ಲಿದ್ದರೂ ಮಾವೋರನ್ನು ನೇರವಾಗಿ ಸಂದರ್ಶಿಸಲು ಆಗಲಿಲ್ಲ. ಆದರೆ ಹತ್ತು ದಿನಗಳ ಕಾಲ ನಡೆದ ಪಕ್ಷದ ಅಧಿವೇಶನದ ಸಂದರ್ಭದಲ್ಲಿ ದೂರದಿಂದಲೇ ದಿನವೂ ಅವರನ್ನು ನೋಡುತ್ತಿದ್ದೆ.

ಚುಟಿಯ ಬರಹಗಳನ್ನು ಓದಿದ್ದರೂ ಅವರೊಂದಿಗೆ ಮಾತನಾಡಿದ್ದರೂ ಇವರಿಗಿಂತಲೂ ಮಾವೋರವರನ್ನು ನಾನು ಹೆಚ್ಚಾಗಿ ತಿಳಿದಿದ್ದೆ; ಅದು ಅವರ ಶಕ್ತಿಯುತ ಲೇಖನಗಳ ಮೂಲಕ. ಸರಳವಾದ ಭಾಷೆಯಲ್ಲಿ, ಅರ್ಥವಾಗುವ ರೀತಿಯಲ್ಲಿ ಲೇಖನಗಳನ್ನು ಪುಸ್ತಕಗಳನ್ನು ಬರೆಯುವುದರಲ್ಲಿ ಇವರಿಗಿದ್ದ ಸಾಮರ್ಥ್ಯ ಅನನ್ಯವಾದುದು. ಆದ್ದರಿಂದ ಅವರ ಬಗ್ಗೆ ನನಗೆ ಆದರವಾದ ಗೌರವ ಭಾವನೆಯಿತ್ತು.

ಅವರು ಬರೆದ ಎಲ್ಲಾ ಕೃತಿಗಿಂತಲೂ ನನ್ನನ್ನು ಹೆಚ್ಚಾಗಿ ಆಕರ್ಷಿಸಿದ್ದು "ನೂತನ ಪ್ರಜಾಪ್ರಭುತ್ವ" ವೆಂಬ ಕೃತಿ. ಈ ಕೃತಿಯಲ್ಲಿ ಕಾರ್ಮಿಕವರ್ಗದ ಪ್ರಜಾಪ್ರಭುತ್ವವೆಂಬ ಪದವನ್ನು ಬಳಸದೆ ಬಂಡವಾಳಶಾಹಿ ಪ್ರಜಾಪ್ರಭುತ್ವ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ವಿಶ್ಲೇಷಿಸಲು ಮಾವೋ ಪ್ರಯತ್ನಿಸಿಲ್ಲ.......

ಆದರೆ ಡಾ. ಸನ್-ಯಾತ್-ಸೆನ್ ಬರೆದ "ಚೀನೀ ಪ್ರಜಾಪ್ರಭುತ್ವ ಒಳ್ಳೆಯ ಅಂಶಗಳನ್ನು ಹೆಕ್ಕಿ ಚೀನಾ ಸಮಾಜದ ಆಧಾರದಲ್ಲಿ ಪುಷ್ಟೀಕರಿಸಿ ಬರೆದ ಕೃತಿಯಾಗಿತ್ತು ಮಾವೋ ಬರೆದ ನೂತನ ಪ್ರಜಾಪ್ರಭುತ್ವ.

ಮಾವೋರವರು, ಸನ್-ಯಾತ್-ಸೆನ್ ಪ್ರತಿಪಾದಿಸಿದ "ಹಳೆ ಪ್ರಜಾಪ್ರಭುತ್ವ" ಅಂಶಗಳನ್ನು ಎತ್ತಿ ಹಿಡಿದು ಅದನ್ನು ಪುಷ್ಟೀಕರಿಸಿ ಹೊಸ ರೂಪ ಕೊಟ್ಟು ಕರೆದದ್ದೇ ಹೊಸ "ಜನತಾ ಪ್ರಜಾಪ್ರಭುತ್ವ" ಅಥವಾ "ಕಾರ್ಮಿಕ ವರ್ಗದ ಪ್ರಜಾಪ್ರಭುತ್ವ".


ಇದೇ ರೀತಿಯಲ್ಲಿ ಭಾರತದಲ್ಲಿ ಕಾಂಗ್ರೆಸ್ ಪ್ರಜಾಪ್ರಭುತ್ವಕ್ಕೆ ಪ್ರಾಯೋಗಿಕ ರೂಪ ಕೊಟ್ಟ ಗಾಂಧಿವಾದದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ವಿಶ್ಲೇಷಣಾತ್ಮಕವಾಗಿ ಬೇರ್ಪಡಿಸಿ ನೋಡಬೇಕೆಂಬುದು ನನ್ನ ಕಣ್ಣೋಟವಾಗಿತ್ತು. ಇದರ ಆಧಾರದಲ್ಲೇ ಮಹಾತ್ಮಾ ಗಾಂಧಿ ಮತ್ತು ನೆಹರೂ ಬಗ್ಗೆ ವಿಮರ್ಶೆ ಮಾಡಿ ನಾನು ಒಂದು ಸಣ್ಣ ಗ್ರಂಥ ಬರೆದದ್ದು.

ಭಾರತದ ರಾಷ್ಟ್ರೀಯ ಹೋರಾಟದ ಪ್ರಾರಂಭ ಹಾಗೂ ಬೆಳೆದು ಬಂದ ರೀತಿಯು ಕಮ್ಯುನಿಸಂ ಎಂಬುದಾಗಿ ಅರ್ಥವಲ್ಲವೇ? ಈ ಕಣ್ಣೋಟದಲ್ಲಿ ರಾಷ್ಟ್ರೀಯ ಹೋರಾಟವನ್ನು ಕಮ್ಯುನಿಸಂ ಜೊತೆ ಸಂಬಂಧ ಕಲ್ಪಿಸಿದರೆ ಚೈನಾಗಿಂತಲೂ ವ್ಯತಿರಿಕ್ತವಾದಂತಹ ನಿಲುವುಗಳನ್ನು ಅಂಗೀಕರಿಸಬೇಕಾಗುತ್ತದೆ.

'ಹಳೇ ಪ್ರಜಾಪ್ರಭುತ್ವ'ವೆಂದು ಮಾವೋ ಕರೆದ ಸನ್-ಯಾತ್-ಸೆನ್‌ರ ವಾದಗಳ ಮತ್ತು ಗಾಂಧಿಯ ವಾದಗಳ ಹೋಲಿಕೆಯಲ್ಲಿ ಮತ್ತು ಭಿನ್ನತೆಯಲ್ಲಿ ಗಾಂಧಿವಾದವು ಹೆಚ್ಚಿನ ಪಾಳೇಗಾರಿ ಸಮಾಜದ ಮೌಲ್ಯಗಳನ್ನು ಒಳಗೊಂಡಿತ್ತು. ಚೀನಾದ ಬಂಡವಾಳಶಾಹಿ ಸ್ವಾತಂತ್ರ್ಯ ಚಳುವಳಿಯಲ್ಲಿ ಊಳಿಗಮಾನ್ಯ ಜನರ ಹಿಡಿತ ಕಡಿಮೆಯಾಯಿತ್ತು. ಆದುದರಿಂದ ಸನ್-ಯಾತ್-ಸೆನ್‌ರವರ ವಾದವು ಒಂದು ರೀತಿಯಲ್ಲಿ ಸಮಗ್ರವಾದ ಪ್ರಜಾಪ್ರಭುತ್ವೀ ವಾದವಾಗಿತ್ತು.

ಆದರೆ ಭಾರತದ ಮಹಾತ್ಮಾಗಾಂಧಿಯ ಚಳುವಳಿಯ ಕಣ್ಣೋಟದಲ್ಲಿ ಊಳಿಗಮಾನ್ಯ ಮೌಲ್ಯಗಳು ವಿಪರೀತವಾಗಿದ್ದವು. ನೆಹರೂವಾದರೋ ಕ್ರಾಂತಿಕಾರಿ ಕಾರ್ಮಿಕ ವರ್ಗಕ್ಕೆ ಎದುರಾದ ಸೋಷಿಯಲ್ ಡೆಮಾಕ್ರಟರ ನಾಯಕನಾಗಿ ಪ್ರತಿನಿಧಿಸುತ್ತಿದ್ದರು. ಆದರೆ ಸನ್-ಯಾತ್-ಸೆನ್‌ರವರ ವಿಷಯದಲ್ಲಿ ಮಾವೋ ಅನುಸರಿಸಿದ ಧೋರಣೆಗೆ ಭಿನ್ನವಾಗಿ ಭಾರತದ ಸಂದರ್ಭದಲ್ಲಿ ನೆಹರೂ ಮತ್ತು ಗಾಂಧಿಯವರಿಗೆ ವಿರುದ್ಧವಾದ ನಿಲುವನ್ನು ನಾನು ಹೊಂದಬೇಕಾಯ್ತು.

ವಿಶ್ವ ಕಮ್ಯೂನಿಸ್ಟ್ ಮುಖಂಡರೊಡನೆ



ಕಾಂ. ಇ.ಎಂ.ಎಸ್. 5

ಮಾವೋರವರ ಹಲವಾರು ಕೃತಿಗಳನ್ನು ಓದಿ ತಿಳಿದುಕೊಂಡ ವಿಷಯಗಳ ಆಧಾರದಲ್ಲಿ, ಚೀನಾದ ಕಮ್ಯುನಿಸ್ಟ್ ಪಕ್ಷದಲ್ಲಿ ಮಾವೋಗೆ ಉನ್ನತ ಸ್ಥಾನವಿರಬಹುದೆಂಬ ನನ್ನ ಕಲ್ಪನೆಯನ್ನು ಬದಲಾಯಿಸುವ ರೀತಿಯಲ್ಲಿ ಚೀನೀ ಕಮ್ಯುನಿಸ್ಟ್ ಪಕ್ಷದ 8ನೇ ಸಮ್ಮೇಳನ ನಡೆಯಿತು.

ಚೀನಾ ಪಕ್ಷದ ಪ್ರಶ್ನಾತೀತ ನಾಯಕರಾದ ಮಾವೋರವರೇ ಸಮ್ಮೇಳನಕ್ಕೆ ವರದಿಯನ್ನು ಮಂಡಿಸುವರೆಂದು ನಾನು ಭಾವಿಸಿಕೊಂಡಿದ್ದೆ. ಆದರೆ ಮುಖ್ಯ ವರದಿಯನ್ನು ಮಂಡಿಸಿದ್ದು ಲಿಯೊ-ಷಾವೋಕಿ. ನಂತರ ಮಂಡಿಸಿದ ಎರಡು ಮುಖ್ಯ ವರದಿಗಳಲ್ಲಿ ಒಂದು ಸರಕಾರದ ಕೆಲಸ ಕಾರ್ಯಗಳಿಗೆ ಸಂಬಂಧಿಸಿದುದಾಗಿತ್ತು. ಇದನ್ನು ಸ್ವಾಭಾವಿಕವಾಗಿಯೇ ಪ್ರಧಾನಮಂತ್ರಿಯಾಗಿದ್ದ ಚೌ-ಎನ್-ಲಾಯ್ ಮಂಡಿಸಿದರು. ಕೊನೆಗೆ ಸಂಘಟನಾ ವರದಿಯನ್ನು ಪ್ರಧಾನ ಕಾರ್ಯದರ್ಶಿ ಡೆಂಗ್-ಜಿಯೊ-ಪಿಂಗ್ ಮಂಡಿಸಿದರು. ಸೌಹಾರ್ದ ಪ್ರತಿನಿಧಿಗಳನ್ನು ಸ್ವಾಗತಿಸಿ ಸಣ್ಣ ಭಾಷಣವನ್ನಷ್ಟೇ ಮಾವೋ ಮಾಡಿದ್ದು.

ಇದೇಕೆ ಹೀಗೆ ಎಂದು ಸ್ವಯಂ ಉತ್ತರ ಕಂಡುಕೊಳ್ಳಲು ನಾನು ಶ್ರಮಿಸಲಿಲ್ಲ. ಆದರೆ ನಂತರದ ಅನುಭವಗಳಿಂದ ಒಂದು ವಿಷಯ ವ್ಯಕ್ತವಾಯಿತು. ಚೀನೀ ಪಕ್ಷದೊಳಗೆ ಪಕ್ಷದ ಧೋರಣೆ ಸಿದ್ಧಾಂತಕ್ಕೆ ಸಂಬಂಧಿಸಿ ತೀವ್ರತರವಾದ ಚರ್ಚೆಗಳು ನಡೆಯುತ್ತಿವೆಯೆಂದು ತಿಳಿಯಿತು. ಮಾವೋ ಒಂದು ಕಡೆ ಲಿಯೋ-ಷಾವೋಕಿ ಸೇರಿದಂತೆ ಇತರೆ ನಾಯಕರು ಒಂದು ಕಡೆಯಾಗಿ, ಈ ಇಬ್ಬರ ನಡುವೆ ಸಿದ್ಧಾಂತ ಮತ್ತು ಪ್ರಾಯೋಗಿಕ ಧೋರಣೆಯ ಬಗ್ಗೆ ತಿಕ್ಕಾಟಗಳು ನಡೆದವು.

ಜನತಾ ಪ್ರಜಾಪ್ರಭುತ್ವ ಕ್ರಾಂತಿಯಾದ ನಂತರ ರೈತ ಕ್ರಾಂತಿಯಾಗುವವರೆಗೂ ಒಂದಾಗಿದ್ದ ನಾಯಕತ್ವದಲ್ಲಿ ಬಹಿರಂಗವಾಗಿ ಅಲ್ಲದಿದ್ದರೂ ಎರಡು ವಿರುದ್ಧ ನಿಲುವುಗಳು ಕಂಡುಬಂದವು. ಈ ರೀತಿಯಾಗಿ ಬೆಳೆದು ಬಂದಂತ ನಿಲುವುಗಳ ಸಾಕ್ಷಿಯೇ ನಂತರ ಪ್ರಸಿದ್ಧವಾದ "ಸಾಂಸ್ಕೃತಿಕ ಕ್ರಾಂತಿ"ಯ ಹುತಾತ್ಮರಾದ ಜೈಲಿನಲ್ಲಿ ನಿಧನರಾದ ಲಿಯೋ-ಷಾವೋಕಿ. ಚೌ-ಎನ್- ಲಾಯ್, ಡೆಂಗ್-ಜಿಯೋ-ಪಿಂಗ್ ಮುಂತಾದವರೋ ಜೀವಂತವಾಗಿದ್ದ ಹುತಾತ್ಮರಾಗಿದ್ದರು.

ಈ ಎರಡೂ ಗುಂಪಿನ ನಡುವಿನ ದ್ವಂತ ಘರ್ಷಣೆ 8ನೇ ಕ್ರಾಂಗ್ರೆಸ್ ಕಣ್ಣೋಟದಲ್ಲಿ ಒಂದು ಚರ್ಚೆಯ ವಿಷಯವಾಗಿತ್ತು. ಆ ಧೋರಣೆ ಬಂಡವಾಳದಾರರ ದಾರಿಯಾಗಿದೆಯೆಂದು ಮಾವೋ ಪರ ವಾದಿಗಳು ವಾದಿಸುತ್ತಿದ್ದರು. ಮೂಲ

ಪುಟ 7ಕ್ಕೆ

'ಆಶ್ರಯ' ಯೋಜನೆಯಲ್ಲಿ ಅವ್ಯವಹಾರ

ಕರ್ನಾಟಕದ ಸರಕಾರದ ಆಶ್ರಯ ಯೋಜನೆ ನಿರಾಶ್ರಿತರಿಗೆ ಸಿಗುತ್ತಿಲ್ಲ ಎಂಬುದನ್ನು ಹಾಗೂ ಈ ಯೋಜನೆಯಲ್ಲಿ ಆದ ಅವ್ಯವಹಾರಗಳನ್ನು ಐಕ್ಯರಂಗ ಈ ಹಿಂದೆ ಪ್ರಕಟಿಸಿತ್ತು. ರಾಜ್ಯದೆಲ್ಲೆಡೆಯಲ್ಲಿ ಈ ಆಶ್ರಯ ಉಳ್ಳವರಿಗೆ ಆಶ್ರಯವಾಗುತ್ತಿರುವುದು ಹಾಗೂ ಇದರಿಂದ ಕೆಲವು ಪುಡಾರಿಗಳು ಹಾಗೂ ಇನ್ನಿತರರ ಜೇಬು ತುಂಬಿಸಿಕೊಳ್ಳುತ್ತಿರುವುದು ಹೊಸದಲ್ಲದ ಸಂಗತಿಯಾಗಿದೆ. ಈ ಸಂಗತಿಗಳು ನಮ್ಮ ದೇಶದ ಆಳುವ ವರ್ಗದ ಆಡಳಿತ ವೈಖರಿ, ಜನಸಾಮಾನ್ಯರ ಬಗೆಗಿನ ಅವರ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಈ ಅವ್ಯವಹಾರದ ವಿರುದ್ಧ ಓದಿ ಇಲ್ಲೊಂದು ಪ್ರತಿಭಟನೆ.

ನೆಲಮಾಕನ ಹಳ್ಳಿ, ಕಾಗೇಪುರ ಹಾಗೂ ಇನ್ನಿತರ ಹಳ್ಳಿಗಳು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿಗೆ ಸೇರಿದೆ. ಇಲ್ಲಿರುವ ನಿರಾಶ್ರಿತರು, ಅಲೆಮಾರಿ ಜನಾಂಗಗಳನ್ನು ಗುರುತಿಸಿ ಅವರಿಗೆ ಆಶ್ರಯ ಯೋಜನೆಯಡಿ ಮನೆ ಕಟ್ಟಿಸಿಕೊಡಲು ಸರಕಾರ ನಿರ್ದೇಶಿಸಿತು. ಮನೆ ಕಟ್ಟಲು ಹಣ ಮಂಜೂರಾದದ್ದನ್ನು ಕಂಡ ಅಲ್ಲಿನ ಕೆಲವು ಪುಡಾರಿಗಳು ಹಾಗೂ ಕಾಂಟ್ರಾಕ್ಟ್‌ದಾರರು ಹಣವನ್ನು ತಮ್ಮ ಜೇಬಿಗಿಳಿಸುವ ಹಂಚಿಕೆ ಹೂಡಿದರು. ಸೀಮೆಂಟ್ ಇಲ್ಲದೆ ಸರಿಯಾದ ಪ್ಲಾನ್ ಇಲ್ಲದೆ ಮನೆ ಕಟ್ಟಲು ತೊಡಗಿದರು. ಅರ್ಧಕ್ಕೆ ಎದ್ದ ಮನೆಗಳು ಇತ್ತೀಚೆಗೆ ನೆಲಸಮವಾಗಿವೆ. ಕಳಪೆ ವಸ್ತುಗಳನ್ನು ಉಪಯೋಗಿಸಿ ಈ ಮನೆಗಳನ್ನು ಕಟ್ಟಿಸುತ್ತಿದ್ದರು.

ಇದರ ಬಗ್ಗೆ ಅಲ್ಲಿನ ಪಕ್ಷದ ಕಾಗೇಪುರದ ಘಟಕವು ಗಮನಿಸಿ ಆ ಮನೆಗಳ ವಾರಸುದಾರರನ್ನು ಸಂಘಟಿಸಿ ಅಕ್ಟೋಬರ್ 20 ರಂದು ಮಳವಳ್ಳಿ ತಾಲೂಕಿನ ಕ್ಷೇತ್ರಾಭಿವೃದ್ಧಿ ಕಛೇರಿಗಳಿಗೆ ಈ ಅವ್ಯವಹಾರವನ್ನು ತಿಳಿಸಲು ಹಾಗೂ ನಿರಾಶ್ರಿತರ ಗೋಳನ್ನು ತಿಳಿಸಲು ರ್‍ಯಾಲಿಯನ್ನು ನಡೆಸಿದರು. ಅಲ್ಲಿನ ಅಧಿಕಾರಿಗಳ ಧಿಮಾಕಿನ ಉಡಾಫೆಯ ಮಾತುಗಳು ಅವ್ಯವಹಾರ ನಡೆದಿದೆ ಎಂಬುದಕ್ಕೆ ಈ ಅಧಿಕಾರಿಯೇ ಶಾಮೀಲಾಗಿದ್ದಾರೆಂಬುದಕ್ಕೆ ಈ ಘಟನೆಗೆ ಕುಮ್ಮಕ್ಕು ನೀಡಿತು.

ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದ "ಜನನಾಯಕರು" ಈ ರ್‍ಯಾಲಿಗೆ ಹೋಗದಂತೆ ಜನಗಳನ್ನು ಬೆದರಿಸಿದರೂ ಕೂಡ ಈ ರ್‍ಯಾಲಿ ಯಶಸ್ವಿಯಾಯಿತು.

ಹೀಗೆ ಆಶ್ರಯ ಯೋಜನೆಯಲ್ಲಿ ಆಶ್ರಯ ಪಡೆಯಬೇಕೆನ್ನುವವರೇನಾದರೂ ಈ ಮನೆಗಳು ಸಂಪೂರ್ಣವಾಗಿ, ಅಲ್ಲಿ ವಾಸವಾಗಿದ್ದರೆ ಅವರು ಇಂದು ಬದುಕುತ್ತಿರಲಿಲ್ಲ. ಈ ಅವ್ಯವಹಾರವನ್ನು ಕಂಡೂ ಕಾಣದಂತಿರುವ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಗೂ ರಾಜಕಾರಣಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ತನಿಖೆ ನಡೆಸಬೇಕೆಂದು ಪಕ್ಷದ ಕಾಗೇಪುರ ಘಟಕವು ಒತ್ತಾಯಿಸಿದೆ.

ಯೆಲ್ಟ್‌ಸಿನ್ ಕೃತ್ಯಕ್ಕೆ ಖಂಡನೆ

ಶಹಾಪುರ : ಯೆಲ್ಟ್‌ಸಿನ್ ಪ್ರತಿಕೃತಿಯನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ, ಆತನ ಕೃತ್ಯಗಳನ್ನು ಖಂಡಿಸುವ ಘೋಷಣೆಗಳನ್ನು ಕೂಗುತ್ತಾ ಬಸ್ ನಿಲ್ದಾಣದಲ್ಲಿ ಆತನನ್ನು ದಹನ ಮಾಡಿದರು.

ಸಿಪಿಐ(ಎಂ) ರಾಜ್ಯ ಸಮಿತಿಯ ಕರೆಯನ್ವಯ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯದರ್ಶಿಯಾದ ಸಿ.ಎಸ್. ಆನೆಗುಂದಿ ಮಾತನಾಡಿ ಸರ್ವಾಧಿಕಾರಿ ಯೆಲ್ಟ್‌ಸಿನ್‌ನ ಕೃತ್ಯಗಳನ್ನು ಖಂಡಿಸಿ ಭಾರತದ ಜನತೆ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡು ರಷ್ಯಾದ ಪ್ರಜಾಪ್ರಭುತ್ವವನ್ನು ರಕ್ಷಿಸಬೇಕೆಂದರು.

ವಿಜಾಪುರ: ಸರ್ವಾಧಿಕಾರಿ ಯೆಲ್ಟ್‌ಸಿನ್ ಕೃತ್ಯವನ್ನು ಖಂಡಿಸಿ ಪ್ರತಿಭಟನಾ ಮೆರವಣಿಗೆ ನಡೆಸಿ, ಆತನ ಪ್ರತಿಕೃತಿಯನ್ನು ದಹಿಸಬೇಕೆಂಬ ಪಕ್ಷದ ರಾಜ್ಯ ಸಮಿತಿಯ ಕರೆಗೆ ವಿಜಾಪುರ ಪಕ್ಷದ ಕಾರ್ಯಕರ್ತರು, ಹಿತೈಷಿಗಳು ಸ್ಪಂದಿಸಿ, ಅಕ್ಟೋಬರ್ 10 ರಂದು ಕಾಂ. ಲಕ್ಷ್ಮಣ ಸಾಲೋಡಗಿ ಅವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಜರುಗಿಸಿತು. ಈ ಸಭೆಯಲ್ಲಿ ಕಾಂ. ಭೀಮಸಿ ಕಲಾದಗಿ, ಕಾಂ. ಮನ್ನೂಸಾಬ ಕಲಾದಗಿ, ಸದಾನಂದ ಮೋದಿ, ಎಂ.ಎ. ಮೊಕಾಶಿ ಇನ್ನಿತರರು ಮಾತನಾಡಿ ಯೆಲ್ಟ್‌ಸಿನ್‌ನ ಕೃತ್ಯವನ್ನು ಖಂಡಿಸಿದರು.

ರಾಜಕೀಯ-ಧರ್ಮ-ಕೋಮುವಾದ -ಭ್ರಷ್ಟಾಚಾರ

ಒಂದು ವಿಚಾರ ಸಂಕಿರಣ

ಮಳವಳ್ಳಿ: ಇಲ್ಲಿನ ಭಕ್ತ ಕನಕದಾಸ ಹಾಸ್ಟೆಲ್ ಆವರಣದಲ್ಲಿ ಅಕ್ಟೋಬರ್ 10 ರಂದು ರಾಜಕೀಯದಿಂದ ಭ್ರಷ್ಟಾಚಾರ, ಕೋಮುವಾದ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಒಂದು ವಿಚಾರ ಸಂಕಿರಣ ನಡೆಯಿತು. ಈ ವಿಚಾರ ಸಂಕಿರಣವನ್ನು ಎಸ್.ಎಫ್.ಐ., ಡಿ.ವೈ.ಎಫ್.ಐ, ಕೆ.ವಿ.ಆರ್. ಹಾಗೂ ಇನ್ನಿತರ ಪ್ರಗತಿಪರ ಸಂಘಟನೆಗಳು ಜಂಟಿಯಾಗಿ ಏರ್ಪಡಿಸಿದ್ದರು.

ಈ ಸಭೆಯ ಅಧ್ಯಕ್ಷತೆಯನ್ನು ಮಾಜಿ ಸಚಿವ, ಜನತಾದಳ ಮುಖಂಡರಾದ ವಿ. ಸೋಮಶೇಖರ್ ವಹಿಸಿದ್ದರು.

ಬಿಜೆವಿಎಸ್‌ನ ರಾಜ್ಯ ಸಮಿತಿಯ ಸದಸ್ಯರಾದ ಅಬ್ದುಲ್ ಲತೀಫ್, ಎಸ್.ಎಫ್.ಐ.ನ ಮಂಡ್ಯ ಜಿಲ್ಲಾಧ್ಯಕ್ಷರಾದ ಪುಟ್ಟಮಾದು, ಸಿಪಿಐ(ಎಂ)ನ ಜಿಲ್ಲಾ ಸಂಚಾಲಕರಾದ ಜಿ. ರಾಮಕೃಷ್ಣ, ಕೆ.ವಿ.ಆರ್.ನ ಉಜ್ಜನಿಗೌಡ ಮುಂತಾದವರು ವಿಚಾರ ಸಂಕಿರಣದಲ್ಲಿ ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು. ಜನತಾದಳದ ತಿಮ್ಮೇಗೌಡ ಮತ್ತು ಶಿವಣ್ಣನವರು ಸಭೆಯಲ್ಲಿ ಹಾಜರಿದ್ದರು.

ಅಧ್ಯಕ್ಷತೆಯನ್ನು ವಹಿಸಿದ್ದ ವಿ. ಸೋಮಶೇಖರ್ ಮಾತನಾಡುತ್ತಾ ಜನರಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ ಬೆಳೆಸುವ ಅವಶ್ಯಕತೆಯನ್ನು ಒತ್ತಿ ಹೇಳುತ್ತಾ, ಈ ರೀತಿಯ ವಿಚಾರ ಸಂಕಿರಣಗಳು ಪ್ರತಿಯೊಂದು ಹಳ್ಳಿಹಳ್ಳಿಯಲ್ಲಿ ನಡೆದಾಗ ಮಾತ್ರವೇ ರಾಜಕೀಯದಲ್ಲಿರುವ ಭ್ರಷ್ಟಚಾರ, ಕೋಮುವಾದ, ಅಪರಾಧಗಳನ್ನು ತಡೆಗಟ್ಟುವಲ್ಲಿ ಜನರು ಸಕ್ರೀಯವಾಗಿ ಭಾಗವಹಿಸುತ್ತಾರೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸಿ ಈ ದಿಕ್ಕಿನಲ್ಲಿ ನಮ್ಮ ಜಿಲ್ಲೆಯ ಈ ಸಂಘಟನೆಗಳ ಕೆಲಸಗಳನ್ನು ಶ್ಲಾಘಿಸಿ, ಇನ್ನೂ ಹೆಚ್ಚು ಹೆಚ್ಚು ಜನಪರ ಕೆಲಸಗಳನ್ನು ಮಾಡಲು ಕರೆ ನೀಡಿದರು.

ಡಿ.ವೈ.ಎಫ್.ಐ ಘಟಕ ರಚನೆ

:ಮಳವಳ್ಳಿ ತಾಲೂಕಿನ ನೆಲಮಾಕನ ಹಳ್ಳಿಯಲ್ಲಿ ಡಿ.ವೈ.ಎಫ್.ಐನ ಎರಡನೇ ಘಟಕವು ಇತ್ತೀಚೆಗೆ ರಚನೆಯಾಯಿತು. ಈ ಸಂದರ್ಭದಲ್ಲಿ ಡಿ.ವೈ.ಎಫ್.ಐನ ಜಿಲ್ಲಾ ಸಂಚಾಲಕರಾದ ಜಿ. ರಾಮಕೃಷ್ಣ, ಟಿ.ಎಂ. ಕಾಳಯ್ಯ, ಒಂದನೇ ಘಟಕದ ಕಾರ್ಯದರ್ಶಿ ಶಿವಣ್ಣ ಮುಂತಾದವರು ಹಾಜರಿದ್ದು ಸಂಘಟನೆಯ ಬೆಳವಣಿಗೆಯ ಬಗ್ಗೆ ಹಾಗೂ ಅದರ ಪ್ರಸ್ತುತತೆಯತ್ತ ಮಾತನಾಡಿದರು. ಎಸ್.ಎಫ್.ಐನ ಹನುಮಂತುರವರು ಸಂಘಟನೆಯ ಬೆಳವಣಿಗೆಯ ಶುಭ ಕೋರಿ ಮಾತನಾಡಿದರು.

ಪ್ರಾಸ್ತಾವಿಕ ಭಾಷಣವನ್ನು ಎಸ್.ಎಫ್.ಐನ ಜಿಲ್ಲಾ ಸಮಿತಿ ಸದಸ್ಯರಾದ ಎನ್.ಎಲ್. ಭರತರಾಜ್ ಮಾಡಿದರು. ಈ ಸಂಘಟನೆಯ ಪದಾಧಿಕಾರಿಗಳನ್ನು ಈ ಕೆಳಗಿನಂತೆ ಆರಿಸಲಾಯಿತು. ಅಧ್ಯಕ್ಷರಾಗಿ ಮರಿಯಪ್ಪ, ಉಪಾಧ್ಯಕ್ಷರಾಗಿ ಕೆ.ಎಂ. ಬಸವರಾಜು, ಕಾರ್ಯದರ್ಶಿ ಪುಟ್ಟರಾಜು, ಸಹ ಕಾರ್ಯದರ್ಶಿಯಾಗಿ ಎಸ್.ಎ. ನಾಗರಾಜು, ಖಜಾಂಚಿಯಾಗಿ ಎಂ.ಬಸವರಾಜು ಹಾಗೂ ಅನಿಲ್ ಕುಮಾರ್, ಶಿವಕುಮಾರ್, ಶಿವಣ್ಣರವರುಗಳನ್ನು ಸದಸ್ಯರನ್ನಾಗಿ ಆರಿಸಲಾಗಿದೆ.

ಈ ಘಟಕದ ರಚನೆಯು ಒಂದು ಪ್ರತಿಜ್ಞೆಯೊಂದಿಗೆ ಪ್ರಾರಂಭವಾದದ್ದು ವಿಶೇಷ ಘಟನೆಯಾಗಿದೆ. ಆ ಪ್ರತಿಜ್ಞೆ ಈ ಕೆಳಗಿನಂತಿದೆ- "ಪ್ರಭುತ್ವವನ್ನು ಕೇಂದ್ರೀಕರಿಸಿಕೊಳ್ಳುವ ಸಲುವಾಗಿ ಜನ ಸಮೂಹದಲ್ಲಿ ಕೋಮು ಭಾವನೆಯನ್ನು ಬಿತ್ತುತ್ತಿರುವಂತಹ ಶಕ್ತಿಗಳ ವಿರುದ್ಧ ಹಾಗೂ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯಲು ನಾವು ಬದ್ಧರಾಗಿದ್ದೇವೆ."

ಅಸಂಘಟಿತ ಕಾರ್ಮಿಕರರ ಹೋರಾಟ ಏಕೆ?

ತಮ್ಮ ಜೀವನವನ್ನು ತಾವೇ ನಿರ್ಧರಿಸಿ ಸುತ್ತಲಿನ ಜಗತ್ತನ್ನು ತಮಗೆ ಅನುಕೂಲವಾಗುವಂತೆ ರೂಪಿಸಿಕೊಳ್ಳಲು ಅನುವು ಮಾಡಿಕೊಡುವ ಜನಸಾಮಾನ್ಯರ ಹೋರಾಟದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಹೋರಾಟ ಒಂದು ಪ್ರಮುಖ ಹೋರಾಟವಾಗಿ ಮೂಡಿ ಬರುತ್ತಿದೆ.

ನಮ್ಮ ರಾಜ್ಯದಲ್ಲಿ ಸಿಐಟಿಯು ಅಸಂಘಟಿತ ವಲಯದ ಕಾರ್ಮಿಕರ ಬೇಡಿಕೆಗಳನ್ನು ಸರಕಾರ ಒಪ್ಪಿಕೊಳ್ಳುವಂತೆ ಒತ್ತಾಯ ತರಲು ಒಂದು ದೊಡ್ಡ ಕಾರ್ಯಾಚರಣೆಗಿಳಿಯಲು ಉದ್ಯುಕ್ತವಾಗಿದೆ. ಈ ಹೋರಾಟ ಜಯಶಾಲಿಯಾಗುವವರೆಗೂ ಅದನ್ನು ನಡೆಸಲು ತಯಾರಿ ನಡೆಸುತ್ತಿದೆ.

ಈ ಹೋರಾಟಕ್ಕೆ ಸಂಬಂಧಪಟ್ಟಂತೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್‌ರವರ ಲೇಖನವನ್ನು ನಮ್ಮ ಸಿಐಟಿಯು ಕಾರ್ಯಕರ್ತರಿಗಾಗಿ ಹಾಗೂ ನಮ್ಮ ಓದುಗರಿಗಾಗಿ ಮುಂದಿನವಾರದಿಂದ 'ಐಕ್ಯರಂಗ' ಪ್ರಕಟಿಸಲಿದೆ.

ಸುದ್ದಿಗಳು

ಡಿ.ವೈ.ಎಫ್.ಐ ಪದಾಧಿಕಾರಿಗಳ ಆಯ್ಕೆ

ಮುಂಡಗೋಡ (ಉ.ಕ.): ನಗರದ ಆದಿಜಾಂಭವ ಪ್ರೌಢಶಾಲೆಯಲ್ಲಿ ಇಲ್ಲಿನ ಡಿ.ವೈ.ಎಫ್.ಐನ ಸಭೆ ನಡೆದು ಪದಾಧಿಕಾರಿಗಳನ್ನು ಆಯ್ಕೆ ಮಾಡಿತು.

ಈ ಸಭೆಗೆ ಆಗಮಿಸಿದ್ದ ಸಿಐಟಿಯು ಉತ್ತರ ಕನ್ನಡ ಜಿಲ್ಲಾ ಕಾರ್ಯದರ್ಶಿ ಸಿ.ಆರ್. ಶ್ಯಾನುಬಾಗ್ ಮಾತನಾಡಿದರು. ಸಂಘಟನೆಯ ಉದ್ದೇಶ, ಧೂಪುರೇಶಗಳನ್ನು ವಿವರಿಸುತ್ತಾ, ಇಂದಿನ ಪರಿಸ್ಥಿತಿಯಲ್ಲಿ ಡಿ.ವೈ.ಎಫ್.ಐ ಅನ್ನು ಬಲಿಷ್ಠ ಸಂಘಟನೆಯನ್ನಾಗಿ ಮಾಡುವುದರ ಅವಶ್ಯಕತೆಯನ್ನು ಒತ್ತಿ ಹೇಳಿ ಇದರಲ್ಲಿ ಯುವಜನರು ಸಕ್ರಿಯ ಪಾತ್ರ ವಹಿಸಬೇಕೆಂದು ಹೇಳಿದರು.

ಈ ಸಭೆಯಲ್ಲಿ ಶಂಕರ ಬಡಿಗೇರ, ಮಂಜುನಾಥ ನೇಸರ್ಗಿ ಅವರುಗಳನ್ನು ಮುಂಡಗೋಡ ಡಿ.ವೈ.ಎಫ್.ಐನ ಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು.

ಈ ಸಭೆಗೆ ಎಸ್.ಎಫ್.ಐನ ಯುವರಾಜ್ ಪಿ. ಕಂಬಾಳಿಮಠ ಸ್ವಾಗತ ಕೋರಿ ಸಭೆಯ ಕಾರ್ಯಕಲಾಪಗಳನ್ನು ನಿರ್ವಹಿಸಿದರು.

ಧರ್ಮರಾಯ ಮುಡಸಾಲಿ, ರಾಮು, ಶೆಟ್ಟೆಪ್ಪ, ಯಲ್ಲಪ್ಪ, ಎಸ್.ಎಫ್.ಐ.ನ ಕೆ.ಎಫ್. ಕುಮಾರ, ಸೋಮಲಿಂಗ ಕಾಳಣ್ಣ, ರಾಮಚಂದ್ರ ಸುತಾರ ಮುಂತಾದವರು ಹಾಜರಿದ್ದರು.

ಮಹಿಳೆಯರ ಅಧ್ಯಯನ ಶಿಬಿರ

ಬೀದರ್: ಅಕ್ಟೋಬರ್ 3 ಹಾಗೂ 4 ರಂದು ಜನವಾದಿ ಮಹಿಳಾ ಸಂಘಟನೆಯ ಬೀದರ್ ಶಾಖೆಯು ಯಶಸ್ವಿ ಅಧ್ಯಯನ ಶಿಬಿರವನ್ನು ಸಂಘಟಿಸಿತ್ತು. ಈ ಶಿಬಿರಕ್ಕೆ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲ, ರಾಜ್ಯ ಪ್ರಧಾನ ಕಾರ್ಯದರ್ಶಿ, ಸಂಗ್ರಾಮಪ್ಪ, ವಕೀಲರು, ಶುಕುಂತಲಾ ತಂಬಾಕೆ, ವಕೀಲರು ಉಪನ್ಯಾಸಗಳನ್ನು ನೀಡಿದರು. ಮಹಿಳೆಯರನ್ನು ಕಾಡುತ್ತಿರುವ ಅನೇಕ ಸಮಸ್ಯೆಗಳನ್ನು ಹಾಗೂ ಅದರ ಪರಿಹಾರಗಳನ್ನು ಎಳೆಎಳೆಯಾಗಿ ಬಿಡಿಸಿ ಶಿಬಿರಾರ್ಥಿಗಳಿಗೆ ತಿಳಿಸಿದರು.

ಜನವಾದಿ ಮಹಿಳಾ ಸಂಘಟನೆಯು ಮಹಿಳೆಯರನ್ನು ಸಂಘಟಿಸುವುದೇ ಅಲ್ಲದೇ ಪ್ರಗತಿಪರ, ಜಾತ್ಯಾತೀತ ಶಕ್ತಿಗಳ ಕೈ ಬಲಪಡಿಸಲು ಮುಂದಾಗಬೇಕೆಂದು ಈ ಸಂದರ್ಭದಲ್ಲಿ ಕರೆ ನೀಡಲಾಯಿತು.

ಯುವಜನರ ತರಬೇತಿ ಶಿಬಿರ

ಬಾಗೆಪಲ್ಲಿ: ಇಲ್ಲಿನ ಡಿ.ವೈ.ಎಫ್.ಐನ ತಾಲೂಕು ಸಮಿತಿಯ ಆಶ್ರಯದಲ್ಲಿ ಲಗುಮದ್ದೇಪಲ್ಲಿಯಲ್ಲಿ ಡಿ.ವೈ.ಎಫ್.ಐ.ನ ತರಬೇತಿ ಶಿಬಿರವನ್ನು ಏರ್ಪಡಿಸಿತ್ತು. ಈ ಶಿಬಿರದಲ್ಲಿ ಸುಮಾರು 60 ಜನ ಯುವಜನರು ಭಾಗವಹಿಸಿದ್ದರು. ಈ ಶಿಬಿರದಲ್ಲಿ ಹೊಸ ಆರ್ಥಿಕ ನೀತಿ ಮತ್ತು ಯುವಜನರು ಎಂಬ ವಿಷಯದ ಬಗ್ಗೆ ಸಿಪಿಐ(ಎಂ) ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ಡಿ.ವೈ.ಎಫ್.ಐನ ಸಂಸ್ಥಾಪಕರಲ್ಲೊಬ್ಬರಾದ ಕಾಂ. ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ ಈಗಿನ ಸರಕಾರದ ಹೊಸ ಆರ್ಥಿಕ ನೀತಿಯು ಯಾವ ರೀತಿ ಯುವಜನರನ್ನು ಹಿಂಡುತ್ತಿವೆ ಎಂಬುದನ್ನು ತಿಳಿಸಿದರು. ಡಿ.ವೈ.ಎಫ್.ಐನ ಸಹಕಾರ್ಯದರ್ಶಿಗಳಾದ ಕಾಂ. ಬಾಲಕೃಷ್ಣ ಶೆಟ್ಟಿಯವರು ನಿರುದ್ಯೋಗ ಮತ್ತು ಅಭಿವೃದ್ಧಿ ಯೋಜನೆಗಳು ಎಂಬ ವಿಷಯದ ಬಗ್ಗೆ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್‌ರವರು 'ಯುವಜನ ಚಳುವಳಿ ಮತ್ತು ಡಿ.ವೈ. ಎಫ್.ಐನ ಚಳುವಳಿ'ಗಳ ಬಗ್ಗೆ ಮಾತನಾಡಿ ಎಲ್ಲಾ ರೀತಿಯ ಯುವಕರನ್ನು ಸಂಘಟಿಸಿ ಕೋಮುವಾದದ ವಿರುದ್ಧ ಹಾಗೂ ಮೌಢ್ಯತೆಯನ್ನು ನಿರ್ಮೂಲನ ಮಾಡುವ ದಿಕ್ಕಿನಲ್ಲಿ ನಮ್ಮ ಸಂಘಟನೆ ಮುಂದುವರಿಯುತ್ತದೆ ಎಂದು ಹೇಳಿದರು.

ತಾಲೂಕಿನ ಸಂಘಟನೆಯ ಬೆಳವಣಿಗೆಯನ್ನು ಕುರಿತು ಕಾಂ. ಭಾಸ್ಕರ ರೆಡ್ಡಿಯವರು ಮಾತನಾಡಿದರು. ಡಿ.ವೈ.ಎಫ್.ಐನ ತಾಲೂಕು ಅಧ್ಯಕ್ಷರಾದ ಮಹಮದ್ ಅಕ್ರಂ ರವರು ಸ್ವಾಗತ ಕೋರಿದರು. ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಪ್ರಜಾನಾಟ್ಯ ಮಂಡಳಿಯ ನಾಯಕರಾದ ಕಾಂ. ಒಬಳರಾಜುರವರು ಉದ್ಘಾಟಿಸಿದರು.

ಬೀಡಿ ಕಾರ್ಮಿಕರ ಪ್ರತಿಭಟನೆ

ತುಮಕೂರು: ಶೇ.20 ರ ಬೋನಸ್‌ಗೆ ಒತ್ತಾಯಿಸಿ ತುಮಕೂರು ಜಿಲ್ಲಾ ಬೀಡಿ ಕೆಲಸಗಾರರ ಸಂಘವು ತುಮಕೂರು ಜ್ಯೋತಿ ಇಂಡಸ್ಟ್ರೀಸ್‌ನ ಎದುರು ಪ್ರತಿಭಟನೆ ನಡೆಸಿತು. ಈಗ ನೀಡುತ್ತಿರುವ ಶೇ. 8.33 ಬೋನಸ್ ಬದಲಿಗೆ, ಶೇ. 20 ರಷ್ಟು ಬೋನಸ್ ನೀಡಬೇಕು, ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಲಾಗ್ ಪುಸ್ತಕ, ಗುರ್ತಿನ ಚೀಟಿ ನೀಡಬೇಕು, ಕನಿಷ್ಠ ವಾರದಲ್ಲಿ 6 ದಿವಸ ಕೆಲಸ ನೀಡಬೇಕೆಂಬ ಬೇಡಿಕೆಗಳನ್ನು ಮುಂದಿಟ್ಟು ಪ್ರತಿಭಟನೆಯನ್ನು ನಡೆಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಕಾಂ. ಮಹಮ್ಮದ್ ದಸ್ತಗೀರ್, ಎಸ್.ಎಫ್.ಐ. ರಾಜ್ಯ ಸಹ ಕಾರ್ಯದರ್ಶಿ ಈ. ಬಸವರಾಜು ಮಾತನಾಡಿದರು.

ಸುಮಾರು 150 ಜನರ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ, ನಂತರ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಅರ್ಪಿಸಲಾಯಿತು. ಈ ಮನವಿಯನ್ನು ನೀಡಲು ಹೋದ ತಂಡದಲ್ಲಿ ನಗರಸಭಾ ಸದಸ್ಯ ಹನುಮಂತರಾಯಪ್ಪ, ವದೂದ್ ಖಾನ್, ಅಲ್ತಾಬ್ ಹುಸೇನ್, ಹಯಾತ್, ಸೈದಾನ, ಭಿ ಯಶೋದಾ ಬಾಯಿ ಇದ್ದರು. ನಂತರ ಕಾರ್ಮಿಕ ಸಮನ್ವಯಾಧಿಕಾರಿಗಳನ್ನು ಸಿಪಿಐ(ಎಂ) ನ ಜಿಲ್ಲಾ ಕಾರ್ಯದರ್ಶಿಗಳಾದ ಹೆಚ್.ಸಿ. ಚನ್ನಪ್ಪ ಹಾಗೂ ಇನ್ನಿತರರ ಒಂದು ನಿಯೋಗ ಭೇಟಿ ಮಾಡಿ, ಮಾಲೀಕರ ಕಾರ್ಮಿಕರ ಜಂಟಿ ಸಭೆಯನ್ನು ಕರೆಯುವ ಭರವಸೆಯನ್ನು ಪಡೆದರು.

ಎಸ್.ಎಫ್.ಐ. -ಡಿ.ವೈ.ಎಫ್‌ಐನ ಉಚಿತ ತರಗತಿಗಳು

ಪಾವಗಡ (ತುಮಕೂರು) : ಇಲ್ಲಿನ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐನ ಸಂಘಟನೆಗಳು ಜಂಟಿಯಾಗಿ ಪಿಯುಸಿಯಲ್ಲಿನ ಪಾಸಾದ ವಿದ್ಯಾರ್ಥಿಗಳಿಗೆ ಇಂಗ್ಲೀಷ್‌ನ ವ್ಯಾಕರಣ ತರಗತಿಗಳನ್ನು ಉಚಿತವಾಗಿ ನಡೆಸಿತು. ಒಂದು ತಿಂಗಳಿಂದ ನಡೆದ ಈ ತರಗತಿಗಳ ಲಾಭವನ್ನು ಸುಮಾರು 30 ರಿಂದ 40 ವಿದ್ಯಾರ್ಥಿಗಳ ಪಡೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಡೆದ ಒಂದು ಸಭೆಯಲ್ಲಿ ಎಸ್.ಎಫ್.ಐ.ನ ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿ ವಿದ್ಯಾರ್ಥಿಗಳು ಚಿಂತನ ಶೀಲತೆಯನ್ನು ಬೆಳೆಸಿಕೊಂಡು ಸತತ ಅಭ್ಯಾಸದಿಂದ ಗುರಿಯನ್ನು ಸಾಧಿಸಬೇಕೆಂದರು. ಇಂಗ್ಲೀಷ್ ಉಪನ್ಯಾಸಕರಾದ ನೀಲಕಂಠ, ಶ್ರೀನಿವಾಸಲು ಮಾತನಾಡಿದರು. ಡಿ.ವೈ.ಎಫ್.ಐನ ಜಿಲ್ಲಾ ಕಾರ್ಯದರ್ಶಿ ಶ್ರೀನಿವಾಸ್ ಗಂಗಸಾಗರ ಸ್ವಾಗತಿಸಿದರು. ಈ ಸಭೆಯಲ್ಲಿ ಡಿ.ವೈ.ಎಫ್.ಐ ಮುಖಂಡರಾದ ಮಾರುತಿ, ನಾಗೇಂದ್ರಪ್ಪ ಹಾಜರಿದ್ದರು.

ಮಳೆಯಿಂದ ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ಕೊಡಲು ಒತ್ತಾಯ

ಮಂಗಳೂರು: ಅಕ್ಟೋಬರ್ 15 ರಂದು ಮಂಗಳೂರು ತಾಲೂಕು ರೈತ ಸಂಘದ ಸಭೆಯು ಸಂಘಧ ಅಧ್ಯಕ್ಷರಾದ ಕಾರಿ ಪಾವ್ಲ್ ಡಿ.ಸೋಜರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದ.ಕ. ಜಿಲ್ಲೆಯಲ್ಲಿ ವಿಪರೀತ ಮಳೆಯಿಂದ ಹಲವಾರು ರೈತರ ಬೆಳೆಗಳು ನಾಶವಾಗಿವೆ ಮತ್ತು ಮುಂದಿನ ಬೆಳೆಗಳಿಗೆ ತುಂಬಾ ತೊಂದರೆ ಕಂಡು ಬಂದಿದೆ. ಆದುದರಿಂದ ರಾಜ್ಯ ಸರಕಾರವು ನಷ್ಟಕ್ಕೊಳಗಾದ ರೈತರಿಗೆ ಕೂಡಲೇ ಪರಿಹಾರ ಒದಗಿಸಬೇಕೆಂದೂ ಹಾಗೂ ರೈತರ ಬ್ಯಾಂಕುಗಳ ಸಾಲಕ್ಕೆ ಬಡ್ಡಿ ವಿನಾಯಿತಿಗೊಳಿಸಬೇಕೆಂಗುದು ಮಂಗಳೂರು ತಾಲೂಕು ರೈತ ಸಂಘವು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯನ್ನು ಒತ್ತಾಯಿಸಿದೆ.

ಮಂಗಳೂರು ತಾಲೂಕಿನಲ್ಲಿ ಹಲವಾರು ವರ್ಷಗಳಿಂದ ಸಾವಿರಗಟ್ಟಲೆ ರೈತರು, ಕೃಷಿ ಕಾರ್ಮಿಕರು ಸರ್ಕಾರಿ ಭೂಮಿಯನ್ನು ಆಕ್ರಮಿಸಿ ಸಾಗುವಳಿ ಮಾಡುತ್ತಾ ಹಾಗೂ ಮನೆ ಕಟ್ಟಿ ವಾಸಿಸುತ್ತಾ ಬಂದಿದ್ದಾರೆ. ಇದೀಗ ಸರ್ಕಾರದವರು ಮಂಗಳೂರು ನಗರ ಪಾಲಿಕೆಯಿಂದ ಹತ್ತು ಕಿ.ಮಿ ಒಳಗಿನವರೆಗೆ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವುದಿಲ್ಲ ಎಂದು ಪ್ರಕಟಿಸಿರುತ್ತಾರೆ. ಕೃಷಿ ಕಾರ್ಮಿಕರು ಹತ್ತು ಸೆಂಟ್ಸ್ ಹದಿನೈದು ಸೆಂಟ್ಸ್ ಸ್ಥಳದಲ್ಲಿ ಮನೆ ಕಟ್ಟಿ ವಾಸಿಸುತ್ತಾ ಇದ್ದಾರೆ. ಇದೀಗ ಇವರ ಭೂಮಿಯನ್ನು ಆಶ್ರಯ ಯೋಜನೆಯಲ್ಲಿ ಬರೇ ಎರಡು ಮುಕ್ಕಾಲು ಸೆಂಟ್ಸ್ ಕೊಟ್ಟು ಉಳಿದ ಭೂಮಿಯನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳುವ ಯೋಜನೆಯಲ್ಲಿದೆ. ಇದು ಈ ಬಡವರಿಗೆ ತೀವ್ರ ಅನ್ಯಾಯವಾಗುತ್ತದೆ. ಈ ಕಾಯ್ದೆಯನ್ನು ತಿದ್ದುಪಡಿ ಮಾಡಿ ಸರ್ಕಾರಿ ಭೂಮಿ ಎಲ್ಲೇ ಇದ್ದರೂ ಗಡಿ ಗುರ್ತಿಸಿ. ಅವರವರ ಸ್ವಾಧೀನವಿರುವ ಭೂಮಿಯನ್ನು ಸಕ್ರಮಗೊಳಿಸಿ ಧರ್ಮಾರ್ತವಾಗಿ ಪಟ್ಟಿ ಕೊಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಮೇಲಿನ ಬೇಡಿಕೆಯನ್ನು ಪಡೆಯಲು ರೈತರು ಹಾಗೂ ದರ್ಖಾಸ್ತುದಾರರು ಸಂಘಟಿತರಾಗಿ ಹೋರಾಟಕ್ಕೆ ತಯಾರಾಗಬೇಕೆಂದು ಮಂಗಳೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಬ್ಬೆಲ್ ವಿನಂತಿಸಿದರು. ನಂತರ ಕಾರ್ಯದರ್ಶಿಯವರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.



ಮೂವತ್ತು ಸಾವಿರ ಜನರ ಬಲಿತಪ್ಪಿಸಲು ಸಾಧ್ಯವಿರಲಿಲ್ಲವೇ?

ಭೂಮಿ ಬಾಯಿ ಬಿಟ್ಟಾಗ........

ಸೆಪ್ಟೆಂಬರ್ 30ರ ನಸುಕು. ಪ್ರತಿವರ್ಷದಂತೆ ಗಣೇಶನ ಹಬ್ಬ ಮಾಡಿ 'ಗಣಪತಿ ಬಪ್ಪಾ ಮೋರ್‍ಯಾ' ಎಂದು ಮೆರವಣಿಗೆಯಲ್ಲಿ ಗಣೇಶನನ್ನು ನೀರಿಗೆ ಹಾಕಿ ಬಂದು ಮಲಗಿದ್ದವರಿಗೆ ಬೆಳಕು ಹರಿಯಲೇ ಇಲ್ಲ. ಮಹಾರಾಷ್ಟ್ರದ ಲಾತೂರು ಹಾಗೂ ಉಸ್ಮಾನಾಬಾದ್ ಜಿಲ್ಲೆಗಳಲ್ಲಿ 25ಕ್ಕಿಂತಲೂ ಹೆಚ್ಚು ಗ್ರಾಮಗಳಲ್ಲಿ ಭೂಕಂಪ ಸಂಭವಿಸಿ ಮೂವತ್ತು ಸಾವಿರ ಜನ ಬಲಿಯಾದರು. ಸಾವಿರಾರು ಮನೆಗಳು ಕುಸಿದುಬಿದ್ದವು. ಭೂಕಂಪದ ಕೇಂದ್ರ ಕಿಲ್ಲಾರಿ ಎಂಬ ಊರಾದರೂ ದೂರದ ಬೆಂಗಳೂರಲ್ಲೂ ಜನಗಳಿಗೆ ಭೂಮಿ ಅದುರಿದ ಅನುಭವ ಆಯಿತು. ಇದು ಈ ಶತಮಾನದ ಹತ್ತು ಅತ್ಯಂತ ಭೀಕರ ಭೂಕಂಪಗಳಲ್ಲಿ ಒಂದು. ಭೂಕಂಪ ಪ್ರಾಕೃತಿಕ ವಿಕೋಪ ನಿಜ. ಆದರೆ ಸಾಮಯಿಕ ಮುನ್ಸೂಚನೆ, ಮನೆಗಳನ್ನು ಭೂಕಂಪ ನಿರೋಧಕ ರೀತಿಯಲ್ಲಿ ಕಟ್ಟಿಕೊಳ್ಳುವುದರಿಂದ ಜೀವ ಹಾನಿಯನ್ನು ದೊಡ್ಡ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯ ಎಂಬುದು ಅಷ್ಟೇ ನಿಜ. ಈ ಭೂಕಂಪ ಇನ್ನೂ ಹಲವಾರು ಪ್ರಶ್ನೆಗಳನ್ನು ಮುಂದಿಟ್ಟಿದೆ.

ಲಾತೂರ್, ಉಸ್ಮಾನಾಬಾದ್ ಜಿಲ್ಲೆಗಳು ದಕ್ಷಿಣ ಪ್ರಸ್ಥಭೂಮಿಯಲ್ಲಿ ಇರುವುವು. ಭೂಕಂಪದ ಸಾಧ್ಯತೆ ದೃಷ್ಟಿಯಿಂದ ತಯಾರಿಸಿದ ಭೂ ವೈಜ್ಞಾನಿಕ ನಕ್ಷೆಗಳ ಪ್ರಕಾರ ಭೂಕಂಪ ಸಾಧ್ಯತೆ ತೀರಾ ವಿರಳವಿರುವ ಪ್ರದೇಶ. ಈ ಭೂಕಂಪ ನಮ್ಮ ದೇಶದ ಭೂವೈಜ್ಞಾನಿಕ ಅಧ್ಯಯನದಲ್ಲಿ ಕೊರತೆಗಳನ್ನು ಎತ್ತಿತೋರಿಸಿದೆ. ಕೊಯ್ನಾ ಅಣೆಕಟ್ಟು ಭೂಕಂಪದ ಕೇಂದ್ರದಿಂದ ಸಾಕಷ್ಟು ದೂರವಿದ್ದರೂ, ದೊಡ್ಡ ಅಣೆಕಟ್ಟುಗಳಿಗೂ ಭೂಕಂಪಕ್ಕೂ ಸಂಬಂಧವಿದೆಯೇ ಎಂಬ ಬಗ್ಗೆ ಜಿಜ್ಞಾಸೆ ಪುನಃ ತಲೆಎತ್ತಿದೆ ಇಂತಹ ಭೀಕರ ದುರಂತದ ನಂತರ ಪರಿಹಾರ ಹಾಗೂ ಪುನರ್ವಸತಿ ನಡೆಯುತ್ತಿರುವ ರೀತಿ ಅಸಮಾನ ಹಾಗೂ ಇನ್ನೂ ಹೆಚ್ಚು ಕಡಿಮೆ ಪಾಳೆಯಗಾರಿ ಸಮಾಜದಲ್ಲಿ ಸಾಮಾನ್ಯ ಜನತೆಯ ಸಂಕಟಗಳನ್ನು ಕಣ್ಣಿಗೆ ರಾಚುವಂತೆ ತೋರಿಸುತ್ತದೆ.

ಭೂಕಂಪ ಎಬ್ಬಿಸಿರುವ ಹಲವು ಪ್ರಶ್ನೆಗಳನ್ನು ಚರ್ಚಿಸುವ ಲೇಖನ.

ಭೂಕಂಪದ ಕೇಂದ್ರ ಮಹಾರಾಷ್ಟ್ರದ ಲಾತೂರ್ ಹಾಗೂ ಉಸ್ಮಾನಾಬಾದ್ ಜಿಲ್ಲೆಗಳಲ್ಲಿತ್ತು. ಇವು ಕರ್ನಾಟಕದ ಗಡಿಯಲ್ಲಿದ್ದು ಫಲವತ್ತಾದ ಭೂಮಿ ಹಾಗೂ ಸಮೃದ್ಧ ನೀರಿನ ಮೂಲಗಳನ್ನು ಹೊಂದಿರುವ ಜಿಲ್ಲೆಗಳು. ಲಾತೂರ್ ಜಿಲ್ಲೆಯ 24 ಹಳ್ಳಿಗಳಲ್ಲಿ ಹಾಗೂ ಉಸ್ಮಾನಾಬಾದ್ ಜಿಲ್ಲೆಯ 35 ಹಳ್ಳಿಗಳು ಹೆಚ್ಚು ಕಡಿಮೆ ಸಂಪೂರ್ಣ ನಾಶವಾಗಿವೆ. ಭೂಕಂಪ ಈ ಎರಡು ಜಿಲ್ಲೆಗಳ ಸುಮಾರು 50 ಕಿ.ಮೀ. ಪ್ರದೇಶದಲ್ಲಿರುವ ಹಳ್ಳಿಗಳನ್ನು ತೀವ್ರವಾಗಿ ತಟ್ಟಿದೆ. ಮನೆಗಳೆಲ್ಲಾ ನೆಲಕಚ್ಚಿವೆ. ಲಾತೂರ್ ಜಿಲ್ಲೆಯ ಕಿಲಾರಿ ಹಾಗೂ ಉಸ್ಮಾನಾಬಾದ್ ಜಿಲ್ಲೆಯ ಉಮರ್ಗಾಗಳೆರಡರಲ್ಲಿಯೇ 21 ಸಾವಿರ ಜನರು ಸತ್ತಿದ್ದಾರಂತೆ. ಇದನ್ನು ಬಿಟ್ಟರೆ ಭೂಕಂಪ ಕೇಂದ್ರಕ್ಕೆ ಹತ್ತಿರದ ಕರ್ನಾಟಕದ ಗಡಿ ಜಿಲ್ಲೆಗಳಾದ ಬಿಜಾಪುರ, ಗುಲ್ಬರ್ಗಾಗಳಲ್ಲಿ ಪ್ರಾಣಹಾನಿ ಕಡಿಮೆಯಾದರೂ, ಎರಡು ಸಾವಿರಕ್ಕೂ ಹೆಚ್ಚು ಮನೆಗಳಲ್ಲಿ ತೀವ್ರ ಬಿರುಕುಬಿಟ್ಟಿದೆ. ವಾಸಕ್ಕೆಯೋಗ್ಯವಾಗಿಲ್ಲ.

ಅಲ್ಲಲ್ಲಿ ಅದೃಷ್ಟವಶಾತ್ ಬದುಕಿಕೊಂಡವರು ಬಿಟ್ಟರೆ, ಹಲವಾರು ಇಡೀ ಕುಟುಂಬಗಳೇ ನಾಶವಾಗಿವೆ. ಇಂತಹ ಕೆಲವು ಕುಟುಂಬಗಳಲ್ಲಿ ಉಳಿದ ಒಬ್ಬರು ಯಾರಾದರೂ ಉಳಿದುಕೊಂಡೆವೊ ಎನ್ನುವ ಕರುಳು ಕಿವುಚುವ ಕೂಗು. ನಿಮ್ಮ ಕುಟುಂಬದಲ್ಲಿ ಎಷ್ಟು ಜನ ಉಳಿದರು? ಎಂಬುದು ಭೂಕಂಪಕ್ಕೆ ತೀವ್ರವಾಗಿ ಈಡಾದ ಹಳ್ಳಿಗಳಲ್ಲಿ ಬದುಕುಳಿದವರು ಇತರರಿಗೆ ಕೇಳುವ ಪ್ರಶ್ನೆ.

ಭೂಕಂಪದಲ್ಲಿ ಮಡಿದವರ ಸಂಖ್ಯೆ ಯಾರೂ ನಿಖರವಾಗಿ ಹೇಳಲಾಗದ ಪರಿಸ್ಥಿತಿ. ಯಾಕೆಂದರೆ ಸಂಘಟಿತ ಪರಿಹಾರ ಕ್ರಮ ಆರಂಭವಾಗುವ ಮೊದಲೇ ಹಲವಾರು ಹೆಣಗಳನ್ನು ಸುಡಲಾಗಿತ್ತು. ಕುಸಿದ ಸಾವಿರಾರು ಮನೆಗಳಡಿಯಲ್ಲಿ ಹೂತು ಹೋದ ಎಲ್ಲಾ ಜೀವಗಳನ್ನು ತೆಗೆಯಲು ಸಾಧ್ಯವಾಗಿಲ್ಲ. ಎಷ್ಟೋ ಜನರು ಕಾಣೆಯಾಗಿದ್ದಾರೆ. ಸುದ್ದಿ ಮಾಧ್ಯಮಗಳ ಪ್ರಕಾರ 30 ಸಾವಿರಕ್ಕೂ ಮೀರಿರಬೇಕು. ಆದರೆ ಮಹಾರಾಷ್ಟ್ರದ ಮುಖ್ಯಮಂತ್ರಿ ಶರದ್ ಪವಾರ್ ಪ್ರಕಾರ ಸತ್ತವರ ಸಂಖ್ಯೆ 9,748 ಅಂತೆ!

ಅರಾಜಕ ಪರಿಹಾರ ಕಾರ್ಯ

ಭೀಕರ ದುರಂತದ ಸುದ್ದಿ ಕೇಳುತ್ತಲೇ ಇಡೀ ದೇಶದಿಂದ ಹಾಗೂ ಜಗತ್ತಿನ ಹಲವಾರು ಇತರ ದೇಶಗಳಿಂದ ಸಹಾಯದ ಪೂರವೇ ಹರಿಯಿತು. ಬಟ್ಟೆ ಆಹಾರ ಸಾಮಗ್ರಿ, ಔಷಧಿ, ತಾತ್ಕಾಲಿಕ ವಸತಿ ಟೆಂಟ್ ಇತರ ಉಪಕರಣಗಳು, ಸ್ವಯಂ ಸೇವಕರು ಹಾಗೂ ಧನಸಹಾಯದ ಮಹಾಪೂರ ಮಾನವೀಯ ದುರಂತಕ್ಕೆ ತಕ್ಕ ಪ್ರತಿಕ್ರಿಯೆಯಾಗಿತ್ತು. ಆದರೆ ಇವೆಲ್ಲವನ್ನು ಸಮರ್ಥ, ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಳ್ಳುವ ಸಂಘಟನಾ ಚಾತುರ್ಯ ಮಹಾರಾಷ್ಟ್ರ ರಾಜ್ಯ ಸರ್ಕಾರ, ಹಾಗೂ ಜಿಲ್ಲಾ ಆಡಳಿತದಲ್ಲಿ ಇಲ್ಲದ್ದು ಸ್ಪಷ್ಟವಾಗಿ ಕಂಡು ಬಂತು. ಮೊದಲು ನಾಲ್ಕೈದು ದಿನಗಳಂತೂ ಪೂರ್ಣ ಅರಾಜಕತೆ ಇತ್ತು. ಅದರಲ್ಲೂ ಪೋಲೀಸರ ಪಾತ್ರವನ್ನು ಜನ ತೀವ್ರವಾಗಿ ಖಂಡಿಸಿದ್ದಾರೆ. ಭೂಕಂಪ ಪೀಡಿತ ಪ್ರದೇಶಗಳನ್ನು ನೋಡಲು ಬಂದ ಪ್ರವಾಸಿಗರನ್ನು ನಿಯಂತ್ರಿಸುವ ಹೆಸರಿನಲ್ಲಿ ಸ್ವಯಂ ಸೇವಕರು, ಇಂತಹ ಸಂಘಟನೆಗಳು ತಂದಿದ್ದ ಪರಿಹಾರ ಸಾಮಾಗ್ರಿಗಳನ್ನು ಊರಾಚೆಯಲ್ಲೇ ತಡೆಹಿಡಿಯಲಾಯಿತಂತೆ. ನಾಲ್ಕೈದು ದಿನಗಳವರೆಗೆ ಬದುಕುಳಿದವರಿಗೆ ಪ್ರಾಥಮಿಕ ಪರಿಹಾರ ತಾತ್ಕಾಲಿಕ ವಸತಿ, ಕುಡಿಯುವ ನೀರು, ಆಹಾರದ ವ್ಯವಸ್ಥೆ ಇನ್ನೂ ಆಗಿರಲಿಲ್ಲ. ಸ್ವಯಂ ಸೇವ ಸಂಘಟನೆಗಳು ತಂದಿದ್ದ ಆಹಾರ ಸಾಮಗ್ರಿ, ಹಣ್ಣು ತರಕಾರಿಗಳು, ಇತ್ಯಾದಿಗಳನ್ನು ಪೋಲೀಸರ ಈ ಕಾರ್ಯಾಚರಣೆಯಿಂದ ಬಿಸಾಕಬೇಕಾಯಿತಂತೆ. ಸ್ವಯಂ ಸೇವಕರನ್ನು ಪ್ರಾಥಮಿಕ ಪರಿಹಾರ ಕಾರ್ಯದಲ್ಲಿ ತೊಡಗಲು ಬಿಡಲಿಲ್ಲ. ಎಲ್ಲಾ ನೆರವನ್ನು ಸರಿಯಾಗಿ ವ್ಯವಸ್ಥಿತವಾಗಿ ಬಳಸಿದ್ದರೆ ಇನ್ನಷ್ಟು ಜೀವಗಳನ್ನು ಸಂಕಟಗಳನ್ನು ತಪ್ಪಿಸಬಹುದಾಗಿತ್ತು.

ಇದಕ್ಕೆ ವ್ಯತಿರಿಕ್ತವಾಗಿ ಸೈನ್ಯವು ತನ್ನ ಕೆಲಸವನ್ನು ಅತ್ಯಂತ ಸಮರ್ಥವಾಗಿ, ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. 'ಆಪರೇಷನ್ ಸಹಾಯತಾ' ಎಂಬ ಹೆಸರಿನಲ್ಲಿ ಆರಂಭಿಸಲಾದ ಈ ಕಾರ್ಯಾಚರಣೆ ಸ್ವತಂತ್ರ ಭಾರತದಲ್ಲಿ ಭಾರತದ ಸೈನ್ಯ ನಡೆಸಿದ ಇಂತಹ ಅತಿ ದೊಡ್ಡ ಪರಿಹಾರ ಕ್ರಮ. ಕುಸಿದ ಮನೆಗಳಡಿಯಿಂದ ಬದುಕುಳಿದವರ ಹೆಣಗಳನ್ನು ಹೊರಗೆ ತೆಗೆಯುವುದು, ತಾತ್ಕಾಲಿಕ ವಸತಿ ಟೆಂಟ್‌ಗಳ ನಿರ್ಮಾಣ, ನೆಲಸಮವಾದ ಹಳ್ಳಿಗಳ ಕುಸಿದ ಕಟ್ಟಡಗಳ ಅವಶೇಷಗಳನ್ನು ಸಾಗಿಸುವುದು ಹಾಗೂ ಆಡಳಿತಕ್ಕೆ ಪರಿಹಾರದ ಕೆಲಸದಲ್ಲಿ ಸಹಾಯ-ಇವು ಸೈನ್ಯದ ಜವಾಬ್ದಾರಿಯಾಗಿತ್ತು.

ಪರಿಹಾರ ಕಾರ್ಯದ ಪರಿ ನೋಡಿ ಬದುಕುಳಿದವರು ತಾವು ಯಾಕೆ ಸಾಯಲಿಲ್ಲ ಎಂದು ಹಲುಬುವಂತೆ ಆಯಿತು. ಹಲವಾರು ಪರಿಹಾರ ಸಾಮಗ್ರಿಗಳು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದ್ದವಂತೆ. ಕಂಬಳಿಗಳು, ಮಕ್ಕಳ ಹಾಲಿನ ಪುಡಿ ಡಬ್ಬಿಗಳು, ಆಹಾರ ಸಾಮಗ್ರಿಗಳು, ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಿದ್ದುದು ಪರಿಹಾರ ಕಾರ್ಯ ಅವ್ಯವಸ್ಥೆ ತೋರುತ್ತಿತ್ತು. ನೊಂದ ಜನ ಜಿಲ್ಲಾ ಆಡಳಿತದ ಕಾರ್ಯಕರ್ತರು, ಮಧ್ಯವರ್ತಿಗಳು ಪರಿಹಾರ ಸಾಮಗ್ರಿಗಳನ್ನು ಈ ರೀತಿ ಮಾರಾಟ ಮಾಡುತ್ತಿದ್ದಾರೆಂದು ಆಪಾದಿಸುತ್ತಿದ್ದರು. ಸರ್ಕಾರದ ವಕ್ತಾರರು ಯಥಾ ಪ್ರಕಾರ ಪರಿಹಾರದ ಸಾಮಗ್ರಿ ಪಡೆದ ಭೂಕಂಪ ಪೀಡಿತ ಜನರೇ ಅತಿಯಾಸೆಯಿಂದ ಮಾರಾಟ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಅದನೇ ಇರಲಿ, ಇಂತಹ ಭೀಕರ ದುರಂತಕ್ಕೆ ಪರಿಹಾರ ಕಾರ್ಯ ನಿರ್ವಹಿಸುವ ಯೋಜನೆ, ಸಾಮರ್ಥ್ಯ ಆಡಳಿತದಲ್ಲಿಲ್ಲ ಎಂಬುದು ಸ್ಪಷ್ಟ.

ಭೂಕಂಪ ತೀರಾ ಆಕಸ್ಮಿಕವಾಗಿರಲಿಲ್ಲ

ಮಹಾರಾಷ್ಟ್ರದ ಹಾಗೂ ಭಾರತ ಸರ್ಕಾರ, ಭೂವಿಜ್ಞಾನ ಇಲಾಖೆ ದಕ್ಷಿಣ ಪ್ರಸ್ಥಭೂಮಿ ಅತ್ಯಂತ ಸುಭದ್ರ ರಚನೆಯುಳ್ಳದ್ದು, ಭೂಕಂಪ ಸಾಧ್ಯತೆ ಇಲ್ಲವೆನ್ನುವಷ್ಟು ಕಡಿಮೆ ಇದ್ದದ್ದರಿಂದ ಆಡಳಿತ ಇಂತಹ ದುರಂತಕ್ಕೆ ಸಿದ್ಧವಿರಲಿಲ್ಲ ಎನ್ನುತ್ತಾರೆ. ಆದರೆ ಇದು ನಿಜವಲ್ಲ. ಸೆಪ್ಟೆಂಬರ್ 30 ರಂದು ಭೂಕಂಪ ಬಂದಿದ್ದು ಏಕಾಏಕಿಯೂ ಅಲ್ಲ. ಈ ವರ್ಷವೇ ಲಾತೂರಿನಲ್ಲಿ 125 ಬಾರಿ ಲಘು ಭೂಕಂಪಗಳಾಗಿದ್ದುವೆಂದು ವರದಿಯಾಗಿದೆ. ಹಳ್ಳಿಯ ಜನರು ಸರ್ಕಾರಿ ಅಧಿಕಾರಿಗಳಿಗೆ ಈ ಬಗ್ಗೆ ದೂರುಕೊಟ್ಟಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದನ್ನು ಸರ್ಕಾರ ನಿರ್ಲಕ್ಷಿಸಿತ್ತು. ಈ ಬಗ್ಗೆ ಮಹಾರಾಷ್ಟ್ರ ವಿಧಾನಸಭೆಯಲ್ಲೂ, ಪತ್ರಿಕೆಗಳಲ್ಲೂ ಚರ್ಚೆಯಾಗಿತ್ತು. ಹವಾಮಾನ ಇಲಾಖೆಯ ತಜ್ಞರು ಈ ಪ್ರದೇಶಕ್ಕೆ ಭೇಟಿ ನೀಡಿ ಇಲ್ಲಿ ತೀವ್ರ ಭೂಕಂಪ ಆಗದು ಎಂದು ಭರವಸೆ ಕೊಟ್ಟಿದ್ದರಂತೆ.


ನಮ್ಮ ದೇಶದಲ್ಲಿ ಸರ್ಕಾರ ಜನರ ಅಹವಾಲುಗಳನ್ನು ನಿರ್ಲಕ್ಷಿಸುವುದು ಸಾಮಾನ್ಯವಾದರೂ, ಈ ಸಂದರ್ಭದಲ್ಲಿ ಇದಕ್ಕೆ ಇನ್ನೊಂದು ಕಾರಣವಿತ್ತು. ಇದು ಇಲ್ಲಿ


ಐತಿಹಾಸಿಕ ಕಟ್ಟಡಗಳಿಗೆ ಅಪಾಯ?

ಕರ್ನಾಟಕದ ಹಲವು ಐತಿಹಾಸಿಕ ಕಟ್ಟಡಗಳಿಗೆ ಈ ಭೂಕಂಪ ಅಪಾಯ ಒಡ್ಡಿದೆ. ಬಿಜಾಪುರ ಚಾರಿತ್ರಿಕ ಗೋಲ್‌ಗುಂಬಜ್‌ನಲ್ಲಿ ಅರ್ಧ ಇಂಚು ಅಗಲ 6 ಮೀಟರ್ ಉದ್ದದ ಬಿರುಕು ಕಂಡುಬಂದಿದೆ. ಆದರೆ ಕಟ್ಟಡದ ಭದ್ರತೆಗೆ ಅಪಾಯವಿಲ್ಲ ಎನ್ನಲಾಗಿದೆ. ಜಿಲ್ಲಾ ಪರಿಷತ್ ಕಾರ್ಯಾಲಯ ಇರುವ ಆನಂದ ಮಹಲ್‌ನಲ್ಲಿ (ಆದಿಲ್ ಶಾಹಿ ಅರಮನೆ) ತೀವ್ರ ಬಿರುಕುಗಳು ಕಂಡುಬಂದಿವೆ. ಇಬ್ರಾಹಿಂ ರೋಜಾರ ಗೋಪುರದ ಕಂಬ ವಾಲಿದೆ. ಬಡಾ ಕಮಾನ್ ದ್ವಾರದಲ್ಲೂ ತೀವ್ರ ಬಿರುಕುಗಳು ಬಂದಿವೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಗುಲ್ಬರ್ಗಾ ಕೋಟೆ, ಶರಣ ಬಸವೇಶ್ವರ ದೇವಸ್ಥಾನ, ಗದ್ದುಗೆ ಮಠ ಮತ್ತು ಇತರ ವಿಳು ಪ್ರಮುಖ ಪ್ರಾಚೀನ ದೇವಸ್ಥಾನಗಳಲ್ಲಿ ಬಿರುಕುಗಳು ಕಂಡುಬಂದಿವೆ.

ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಭೂಕಂಪ ಪೀಡಿತ ಪ್ರದೇಶಗಳು





ಭಾರತದ ಭೂ

ಈ ಅಧಿಕೃತ ನಕ್ಷೆಯ ಪ್ರಕಾರ ಲಾ

1ನೇ ವಲಯ: ಇಲ್ಲಿ
ಕೇತು.

2ನೇ ವಲಯ: ರಿಕ್ಟರ್
ಕ್ಷೇತ್ರ

3ನೇ ವಲಯ: ಇಲ್ಲಿ
ರಿಂದ 6.5 ರಷ್ಟು ತೀವ್ರತೆ

4ನೇ ವಲಯ: ಪದೇ

5ನೇ ವಲಯ: ಚಲನ
ಸಂಭವಿಸುವ ಕ್ಷೇತ್ರ

ಯನದ ಆಧಾರದ ಮೇಲೆ ತಯಾರಿಸ
ದ ಭೂಕಂಪ ವಲಯಗಳ ನಕ್ಷೆಯಲ್ಲಿ,
ಗೂ ಉಸ್ಮಾನಾಬಾದ್, ಭೂಕಂಪದ
ಕಡಿಮೆ ಇರುವ ಮೊದಲನೆಯ ವಲ
ಆದ್ದರಿಂದ ಈ ಭೂಕಂಪಕ್ಕೆ ಕಾರಣಗ
ವುದು ಭೂ ವೈಜ್ಞಾನಿಕರಿಗೆ ಸವಾಲಾ
ವೈಜ್ಞಾನಿಕರಲ್ಲಿ ಈ ಬಗ್ಗೆ ತೀವ್ರ ಭಿನ್ನಾಭಿ
ಕೆಲವು ಭೂ ವೈಜ್ಞಾನಿಕರು 20 ವರ್ಷ
'ಕುರ್ದ್‌ವಾಡಿ ಬಿರುಕು' ಎಂದು ಕರೆದ
ರ್ ಪ್ರದೇಶದಲ್ಲಿ ಇದೆ. ಇದು ತೀವ್ರ
ರಣವಾಗಬಹುದು ಎಂದು ಹೇಳಿದ್ದರು.
ಮುಖ್ಯಧಾರೆಯ- ಭೂವೈಜ್ಞಾನಿಕರು
ಗಲೂ ಒಪ್ಪುತ್ತಿಲ್ಲ. ಈ ಪ್ರದೇಶ ಮೊದ
ರುದಲ್ಲಿದ್ದುದರಿಂದ ಭೂಕಂಪ ಮಾಪ
ೂ ಇತರ ಅಧ್ಯಯನ ಅತಿ ಕಡಿಮೆ
ಈ ಗೊಂದಲಕ್ಕೆ ಕಾರಣ. ಕರ್ನಾಟಕದ
ಈ ಪ್ರದೇಶದಲ್ಲಿರುವುದರಿಂದ ಇದು
ಅತ್ಯಂತ ಪ್ರಸ್ತುತವಾದ ವಿಷಯ.

ಪುನರ್ವಸತಿ ಸಮರ್ಪಕವಾಗಿ ಆಗುತ್ತಿದೆಯೇ?

ರ ಕಾರ್ಯದಲ್ಲಿ ಸಾಕಷ್ಟು ಗೊಂದಲ,
ಡು ಬಂದಿದ್ದು ಪುನರ್ವಸತಿ ಕಾರ್ಯ
...ದೆಯೇ? ಎಂದರೆ ಅಲ್ಲಿಯೂ
ಪುನರ್ವಸತಿ ಕಾರ್ಯ ಅಗಾಧ ಪ್ರಮಾ
ಬಗ್ಗೆ ಅನುಮಾನವಿಲ್ಲ. ಮನೆಗಳ ಪುನ
ಡೀ ಕುಟುಂಬದ ಕಳೆದ ನಿರ್ಗತಿಕರಿಗೆ
ಯಕ್ಕ ಅವಕಾಶ, ನಾಶವಾದ ವಿದ್ಯುತ್
ಪೂರೈಕೆ, ಸಂಪರ್ಕ ಇತ್ಯಾದಿಗಳ ಪುನಃ
ಸ್ತವಾದ ಕೃಷಿ, ಕೈಗಾರಿಕೆ ಮುಂತಾದ
ಟಿಕೆ ಪುನಃ ಆರಂಭವಾಗುವ ಸನ್ನಿವೇಶ
ಸ- ಇಷ್ಟೆಲ್ಲಾ ಪುನರ್ವಸತಿ ಕಾರ್ಯಕ್ರ
ಗಬೇಕು. ಒಂದು ಅಂದಾಜಿನ ಪ್ರಕಾರ
ದುಸಾವಿರ ಕೋಟಿ ರೂ.ಇದಕ್ಕೆ ದೇಶಾ
ವರೆಗೆ ಪ್ರದಾನ ಮಂತ್ರಿಗಳು ಹಾಗೂ
ಳ ಪರಿಹಾರ ನಿಧಿ ಪ್ರಾಕೃತಿಕ ದುರಂ
ೂ ವಿದೇಶಿ ಧನಸಹಾಯ ಎಲ್ಲಾ ಸೇರಿ
ರೂ ಸಂಗ್ರಹ ಸಾಧ್ಯವಾಗಿದೆ ಅಷ್ಟೇ.
ಬ್ಯಾಂಕ್‌ಗೆ ಬಡ್ಡಿ ರಹಿತ 30 ಕೋಟಿ
...ಸು 900 ಕೋಟಿ ರೂ) ಸಾಲ

ಇವರೆಗೆ ಸರ್ಕಾರ ಪುನರ್ವಸತಿ ಬಗ್ಗೆ
ೋಜಿಸಿದಂತಿಲ್ಲ. ಇದರಲ್ಲಿ ಸ್ವಯಂ
ಗಳು, ಅದೇ ಪ್ರದೇಶದ ನೊಂದ ಜನ
ಗಿಸಿಕೊಂಡು ಮಾಡುವುದು ಹೇಗೆ?
ಸಿಕೊಂತಿಲ್ಲ. ಅಪ್ಪಟ ಅಧಿಕಾರಶಾಹಿ
ಯಲ್ಲಿ ಈ ಬಗ್ಗೆ ಯೋಜನೆ ಇದ್ದಂ
ತ್ಯಂತ ಪ್ರಮುಖ ಹಾಗೂ ಪ್ರಾಥಮಿಕ
ರ್ಣವಾದ ಮನೆಗಳ ಪುನರ್ನಿಮಾಣದ
ಸರ್ಕಾರ ಆರಂಭಿಸಿರುವ ಕಾರ್ಯಾ
ಷ್ಟವಾಗುತ್ತದೆ.

...ಯಗಳು

ತ್ರ ಭೂಕಂಪ ಅಸಂಭವ

ಪಕ್ಕೆ ಅತ್ಯಲ್ಪ ಪ್ರಮಾಣದ ಭೂಕಂಪ ಸಂಭವಿ

ಿಂದ 4 ರಷ್ಟು ತೀವ್ರತೆಯ ಲಘು ಭೂಕಂಪ

ು ಅಥವಾ ಅಣೆಕಟ್ಟು ಇದ್ದರೆ ಮಾತ್ರ 4.
ಂಭವಿಸಬಹುದು.

ತೀವ್ರತೆ 7 ವರೆಗಿನ ಸದಾ ಜಾಗೃತ ವಲಯ

8 ಕ್ಕೂ ಹೆಚ್ಚು ತೀವ್ರತೆಯ ಭೂಕಂಪ ಆಗಾಗ

ಅಣೆಕಟ್ಟುಗಳಿಗೂ ಭೂಕಂಪಗಳಿಗೂ ಸಂಬಂಧವಿದೆಯೇ?

ಕೊಯ್ನಾ ಅಣೆಕಟ್ಟು 1967ರ ಕೊಯ್ನಾ ಭೂಕಂಪಕ್ಕೆ ಕಾರಣವಾಯಿತೆ? ಎಂಬ ಬಗ್ಗೆ ಭೂ ವೈಜ್ಞಾನಿಕರಲ್ಲಿ ಒಮ್ಮತವಿಲ್ಲ. ಲಾತೂರ್ ಭೂಕಂಪ ಕೇಂದ್ರದಿಂದ ಕೊಯ್ನಾ ಸಾಕಷ್ಟು ದೂರದಲ್ಲಿದೆ. ಕೆಲವು ವಿಜ್ಞಾನಿಗಳು 100 ಮೀಟರ್‌ಗಿಂತ ಹೆಚ್ಚು ಎತ್ತರದ ಅಣೆ ಕಟ್ಟುಗಳು ಲಘು ಭೂಕಂಪಕ್ಕೆ ಕಾರಣವಾಗಬಹುದು ಎಂದು ಅಭಿಪ್ರಾಯಪಡುತ್ತಾರೆ. ದೇಶದ ಧನಕ್ಕಿಂತಲೂ ಹೆಚ್ಚು ಅಣೆಕಟ್ಟುಗಳು ಮಹಾರಾಷ್ಟ್ರದಲ್ಲಿರುವುದರ ಬಗ್ಗೆ ಅವರು ಬೊಟ್ಟುಮಾಡುತ್ತಾರೆ. ಆದರೆ ಜಗತ್ತಿನ ಎಲ್ಲಾ ಅಣೆಕಟ್ಟುಗಳಿರುವ ಪ್ರದೇಶಗಳ ಅಧ್ಯಯನದಿಂದ, ಅಣೆಕಟ್ಟುಗಳಿಗೂ ಭೂಕಂಪಕ್ಕೂ ನೇರ ಸಂಬಂಧವಿರುವುದು ಕಂಡು ಬರುವುದಿಲ್ಲ ಎಂಬುದು ಇತರ ವಿಜ್ಞಾನಿಗಳ ವಾದ. ಆದರೂ ಭೂಕಂಪವಾದಾಗ ಅಣೆಕಟ್ಟುಗಳ ಭದ್ರತೆ ಬಗೆಗಂತೂ ಯೋಜನೆ ಇರಬೇಕು ಎಂಬುದು ನಿರ್ವಿವಾದಿತ. 145 ಮೀಟರ್ ಎತ್ತರದ ನರ್ಮದಾ ಅಣೆಕಟ್ಟು ಭದ್ರತೆ ಬಗ್ಗೆ ಅದರ ವಿರೋಧಿಗಳು ಹೊಸದಾಗಿ ಪ್ರಶ್ನೆ ಎತ್ತಿದ್ದಾರೆ.

ತಿಮಿಂಗಿಲ ಕಾಂಟ್ರಾಕ್ಟರುಗಳನ್ನು ಕೊಬ್ಬಿಸಲು ಸಾಧನ

ಸುಮಾರು 19 ಸಾವಿರ ಭೂಕಂಪ-ನಿರೋಧಕ ಮನೆಗಳ ನಿರ್ಮಾಣ ಅವಶ್ಯಕವಿದೆ. ಇದನ್ನು ಜನವರಿ 26 ರೊಳಗೆ ಮುಗಿಸಬೇಕೆಂದು ಮಹಾರಾಷ್ಟ್ರ ಮುಖ್ಯಮಂತ್ರಿ ಶರದ್ ಪವಾರ್ ಆಜ್ಞೆ ಮಾಡಿದ್ದಾರಂತೆ. ಈ ಕೆಲಸವನ್ನು ಬಾಂಬೆ- ಪುಣೆ ಹಾಗೂ ಇತರ ಹನ್ನೊಂದು ಪ್ರಮುಖ ಕಟ್ಟಡ ಕಂಟ್ರಾಕ್ಟರುಗಳಿಗೆ ಒಪ್ಪಿಸುವುದು ಎಂದು ಸರ್ಕಾರ ಆಗಲೇ ನಿರ್ಧರಿಸಿದೆಯೆಂದು ಸುದ್ದಿ, ಚದರ ಅಡಿಗೆ 350 ರೂ. ನಂತೆ ಖರ್ಚು ಇಟ್ಟುಕೊಂಡರೂ 220 ಕೋಟಿ ರೂಗಿಂತ ಹೆಚ್ಚು ವೆಚ್ಚವಾಗಬಾರದು. ಆದರೆ 550 ಕೋಟಿರೂ. 750 ಕೋಟಿರೂ. 1,300 ಕೋಟಿ ರೂ ಬೇಕಾಗಬಹುದೆಂದು ವಿವಿಧ ಸರ್ಕಾರಿ ಅಂದಾಜುಗಳ ಪ್ರಕಾರ ಹೇಳಲಾಗುತ್ತಿದೆ. ಇದು ತಿಮಿಂಗಿಲ ಕಂಟ್ರಾಕ್ಟರುಗಳನ್ನು ಸರ್ಕಾರಿ ಹಣದಿಂದ ಕೊಬ್ಬಿಸುವ ಇನ್ನೊಂದು ಯೋಜನೆಯಾಗಿ ಉಳಿದುಬಿಡುವ ಅಪಾಯ ಹೆಚ್ಚು. ಕೆಲಸಕ್ಕೆ ಬಾರದ ದುಬಾರಿ ಪೂರ್ವಭಾವಿಯಾಗಿ ಕಟ್ಟಿದ ಕಟ್ಟಡಗಳು ಹಲವಾರು 'ಬಡವರಿಗೆ ವಸತಿ' ಕಾರ್ಯಕ್ರಮದಲ್ಲಿ ಹಣ ಪೋಲುಮಾಡಿದಂತೆ ಇಲ್ಲೂ ಆಗಬಹುದು.

ಇದಲ್ಲದೆ ಪುನರ್ವಸತಿಗೆ ಹಲವಾರು ಬದಲಿ ಯೋಜನೆಗಳು ಕೇಳಬಂದಿವೆ. ಸ್ಥಳೀಯ ಸಾಮಗ್ರಿ, ಜನರ ಶ್ರಮ ಹಾಗೂ ಜಾಣ್ಮೆ ಬಳಸುವ ಕಡಿಮೆ ವೆಚ್ಚದ ಭೂಕಂಪ ನಿರೋಧಕ ಮನೆಗಳ ವಿನ್ಯಾಸಗಳು ಲಭ್ಯವಿವೆ. ಇಂತಹ ಇನ್ನಷ್ಟು ವಿನ್ಯಾಸಗಳನ್ನು ತಯಾರಿಸಲು ಹಲವು ವಾಸ್ತುಶಿಲ್ಪಿಗಳು ಮುಂದೆ ಬಂದಿದ್ದಾರೆ. ಇದರ ವೆಚ್ಚ ಚದರ ಅಡಿಗೆ 110-120 ರೂಗಿಂತ ಹೆಚ್ಚು ಆಗಲಿಕ್ಕಿಲ್ಲ. ಆದರೆ ಶರದ್ ಪವಾರ್ ಸರ್ಕಾರ ಈ ಬದಲಿಯ ಬಗ್ಗೆ ಯೋಚಿಸುವುದೇ?

ಇಂತಹ ದುರಂತ ತಪ್ಪಿಸುವುದು ಹೇಗೆ?

ಈ ಪ್ರಶ್ನೆ ಉಳಿದೇ ಇದೆ. ಇದಕ್ಕೆ ಉತ್ತರವೆಂದರೆ ಭೂಕಂಪದ ಮುನ್ಸೂಚನೆ(ಅದರ ಸ್ಥಳ ಹಾಗೂ ಸಮಯ) ಸಾಧ್ಯವಾದರೆ ಜೀವಹಾನಿಯನ್ನು ಉಳಿಸಲು ಸಾಧ್ಯ. ಭೂಕಂಪ ಮುನ್ಸೂಚನೆ ನೀಡುವ ಬಗ್ಗೆ ತೀವ್ರ ಅಧ್ಯಯನ, ಸಂಶೋಧನೆ ನಡೆಯುತ್ತಿದ್ದರೂ ನಿಖರ ಮುನ್ಸೂಚನೆ ಇನ್ನೂ ಕಷ್ಟ ಸಾಧ್ಯ. ಭೂಕಂಪದ ಮೊದಲು ಇದರ ಪೂರ್ವಭಾವಿಯಾಗಿ ಭೂಮಿಯ ಒಳಗೆ ನಡೆಯುವ ಹಲವಾರು ಬದಲಾವಣೆಗಳಿಗೆ ಮುನ್ಸೂಚಕಗಳ ಬಗ್ಗೆ ಹೆಚ್ಚೆಚ್ಚು ಈಗ ತಿಳಿದಿದೆ. ಭೂಕಂಪ ಮಾಪಕಗಳು, ಇತರ ಉಪಕರಣಗಳು, ಉಪಗ್ರಹದಿಂದ ಭೂಮಿಯ ಮೇಲ್ಮೈಯ ಮೇಲಾಗುತ್ತಿರುವ ಬದಲಾವಣೆಗಳ ವಿವರವಾದ ಅಧ್ಯಯನಗಳಿಂದ-ಭೂಕಂಪ ಸಾಧ್ಯತೆ ಹೆಚ್ಚಿರುವ ಪ್ರದೇಶಗಳಲ್ಲಿ ಈಗಾಗಲೇ ಈ ರೀತಿ ಮುನ್ಸೂಚನೆ ಕೊಡಲು ಸಾಧ್ಯವಾಗಿದೆ. ಈ ಬಗ್ಗೆ ಹೊಸ ಸಾಧ್ಯತೆಗಳು ಮುಂದೆ ಇರಬಹುದು.

ಇದನ್ನು ಪರಿಣಾಮಕಾರಿಯಾಗಿ ಬಳಸಿದ್ದು

ಪುಟ 8ಕ್ಕೆ

'ಸ್ವದೇಶಿ' ಎಂಬ ಸುಳ್ಳಿಗೂ ನಡುಗುವವರು



ನರಸಿಂಹರಾವ್ ಸರಕಾರದ 28ನೇ ತಿಂಗಳಲ್ಲಿ

ಬಿಜೆಪಿಯ ಸೂತ್ರದಾರನಾದ ಆರ್.ಎಸ್.ಎಸ್. ಎಂಬ ಸಂಘಟನೆ ಈ 'ಸ್ವದೇಶಿ' ಎಂಬ ಕೂಗನ್ನು ಕೂಗುತ್ತಿದೆ. ಅಂತರಾಳದಲ್ಲಿ ಸಾಮ್ರಾಜ್ಯಶಾಹಿಗಳಿಗೆ ಅನುಕೂಲ ಮಾಡುವ ಉದಾರೀಕರಣವೆಂಬ ದೇಶದ ಹರಾಜಿನ ಕ್ರಮಗಳನ್ನು ಬೆಂಬಲಿಸುವ ಬಿಜೆಪಿ ಮತ್ತು ಅದರ ಅಂಗ, ಪಿತೃ ಸಂಘಟನೆಗಳು ಈಗ ಚುನಾವಣಾ ಹಿನ್ನೆಲೆಯಲ್ಲಿ ಮತ್ತು ಆಗಾಗ ಅದು ಹರಡುವ ಪ್ರಚಾರದ ಅಲೆಗಳಿಗಾಗಿ 'ಸ್ವದೇಶಿ' ಘೋಷಣೆ ಕೂಗುತ್ತದೆ.

ಈಗಿನ ತಮಾಷೆಯೆಂದರೆ ಅಂತರಾಳದಲ್ಲಿ ಬಿಜೆಪಿಯನ್ನು ಬೆಂಬಲಿಸುವ ಹಲವು ಉದ್ಯಮಪತಿಗಳು ಬಿಜೆಪಿಯ ಈ ಘೋಷಣೆಗೆ ನಡುಗುತ್ತಿದ್ದಾರಂತೆ. ಎಲ್ಲಿ ಉದಾರೀಕರಣ ನಿಂತಿತೊ' ಎಂದು. ಬಿಜೆಪಿ ಆಗಲೇ ಈ ನಿಲುವಿಗೆ ವಿವರಣೆ ನೀಡುತ್ತಿದೆ. 'ನಾವು ಎಂದೂ ಉದಾರೀಕರಮವನ್ನು ಬೆಂಬಲಿಸುವವರು. ಆದರೆ ಮೊದಲು ಆಂತರಿಕ ಉದಾರೀಕರಣ ಆಗಬೇಕು. ಅನಂತರ ಹೊರ ವ್ಯವಹಾರಗಳ ಉದಾರೀಕರಣ' ಎಂದು.

ಬಂಡವಾಳಿಗರ ನಿಜವಾದ ಭಯ ಅದಲ್ಲ. ನರಸಿಂಹರಾಯರ ಸರ್ಕಾರದ ಅವ ಕೃಪೆಗೆ ತಾವು ಎಲ್ಲಿ ಗುರಿಯಾದೇವು ಎಂಬುದು ಅವರ ಭಯ. ಯಾಕೆಂದರೆ ಉದಾರೀಕರಣದ ವಿಷಯದಲ್ಲಿ ನರಸಿಂಹರಾಯರ ಕಾಂಗ್ರೆಸ್ ಮತ್ತು ಬಿಜೆಪಿ ಇವೆರಡೂ ಒಂದೇ ಎಂಬುದು ಬಂಡವಾಳಿಗರಿಗೆ ಸ್ಪಷ್ಟವಾಗಿ ಗೊತ್ತಿದೆ. ಅಲ್ಲವೆ?

ಬ್ರಿಟಿಷ್ ಉದ್ಯಮಿಗಳ ಕಾತರ

ಶತಮಾನಗಳ ಕಾಲ ಭಾರತವನ್ನು ತಮ್ಮ ವಸಾಹತನ್ನಾಗಿ ಮಾಡಿಕೊಂಡು ನಮ್ಮ ಆರ್ಥಿಕ ಬೆಳೆಯದಂತೆ ಮಾಡಿ ಹೋದ ಬ್ರಿಟಿಷರಿಗೆ ಈ ದೇಶವನ್ನು ಕೊಳ್ಳೆಹೊಡೆವ ಹೊಸ ಕಾತರ. ಆರ್ಥಿಕ ಸುಧಾರಣೆ ಮತ್ತು ಉದಾರೀಕರಣದ ಹಿನ್ನೆಲೆಯಲ್ಲಿ 'ಇಲ್ಲಿ ಅವರು ಬಂಡವಾಳ ಹೂಡಿ ದೇಶವನ್ನೇ ಕೊಳ್ಳೆ ಹೊಡೆಯಲು ಕಾತರಾಗಿದ್ದಾರೆ.

ಬ್ರಿಟನ್ನಿನ ಹೈಕಮಿಷನರ್ ನವದೆಹಲಿಯಲ್ಲಿ ಈ ಸುಧಾರಣೆಗಳು ನಿಧಾನಗತಿಯಲ್ಲಿ ನಡೆಯುತ್ತಿರುವುದರಿಂದ ತಮಗೆ ಚಿಂತೆಯಾಗಿದೆ ಎಂದಿದ್ದಾರೆ. ಅವರ ಪ್ರಕಾರ ಭಾರತ ಇಂದು ಅತ್ಯಂತ ಮುಖ್ಯ ಘಟ್ಟದಲ್ಲಿದೆಯಂತೆ. ಈಗ ಕೂಡಲೇ ತ್ವರಿತಗತಿಯಲ್ಲಿ ಸುಧಾರಣೆ ಆಗಬೇಕಂತೆ. ಇದು ಐತಿಹಾಸಿಕವಾಗಿ ಮುಖ್ಯ ಘಟ್ಟ, ಆದ್ದರಿಂದಲೇ ನಮಗೆ ಈ ಕಾತರ ಎಂದಿದ್ದಾರೆ. ಲಾಭಕೋರರಿಗೆ ಎಂದೂ ಈ ಆತುರ ಇದ್ದೇ ಇರುತ್ತದೆ ಅಲ್ಲವೇ? ತಮ್ಮ ಅವಕಾಶಗಳನ್ನು ಬೇರೆಯವರು ಕಸಿದುಕೊಂಡಾರೆಂಬ ಭಯ ಒಂದು ಕಡೆ ಜೊತೆಗೇ ದೇಶದೊಳಗೆ ಆಂತರಿಕ ಪ್ರತಿರೋಧ ಹೆಚ್ಚಾದೀತೆಂಬ ಭಯ ಇನ್ನೊಂದೆಡೆಗೆ. ಈ ಎರಡೂ ಭಯಗಳ ನಡುವೆ ಅವರ ಈ ಕಾತುರ ಚಿಂತೆ ಅರ್ಥವಾಗುವಂತಹದ್ದೇ ಅಲ್ಲವೆ?

ಹಣಕಾಸು ವಲಯ: ಸುಧಾರಣೆಗೆ ಮಂಡಳಿ

ಹಣಕಾಸು ವಲಯದ ಮೇಲ್ವಿಚಾರಣೆಗೆ ಒಂದು ಮಂಡಳಿ ನೇಮಿಸುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಡಾ. ರಂಗರಾಜನ್ ಹೇಳಿದ್ದಾರೆ. ರಾಷ್ಟ್ರೀಕರಣ ನಂತರ ದಶಕಗಳ ಕಾಲ ಬ್ಯಾಂಕುಗಳು ಈ ಸರ್ಕಾರದ ಸ್ವಾಮ್ಯದಲ್ಲಿದ್ದವು. ಆಗ ಸರ್ಕಾರವಾಗಲೀ ಭಾರತೀಯ ರಿಸರ್ವ್ ಬ್ಯಾಂಕ್ ಆಗಲಿ ಇಂತಹ ಮಂಡಳಿಯ ನೇಮಕಕ್ಕೆ ಪ್ರಯತ್ನಿಸಲಿಲ್ಲ. ಪರಿಣಾಮವಾಗಿ ಪ್ರಭಾವಶಾಲಿ ರಾಜಕಾರಣಿಗಳ, ಬಂಡವಾಳಿಗರ ತೀವ್ರ ಹಸ್ತಕ್ಷೇಪದಿಂದ ಬ್ಯಾಂಕುಗಳು ನರಳಿದವು. ಸಾರ್ವಜನಿಕ ವಲಯದ ಬ್ಯಾಂಕುಗಳ ಇಂದಿನ ಸ್ಥಿತಿಗೆ ಇದೇ ಕಾರಣ.

ಈಗ ಹಣಕಾಸು ವಲಯದ ಸುಧಾರಣೆಗಳ ನೆಪದಲ್ಲಿ ಬ್ಯಾಂಕುಗಳನ್ನು ಇನ್ನೂ ಹದಗೆಡಿಸಿ ದಿವಾಳಿಯೆಬ್ಬಿಸುವ ಪ್ರಯತ್ನ ನಡೆದಿರುವಾಗ ಇಂತಹ ಮಂಡಳಿಯ ನೇಮಕ ಈ ಸುಧಾರಣೆಗಳ ಮೇಲ್ವಿಚಾರಣೆಗಾಗಿ ಮಾತ್ರ ಇದ್ದೀತು. ಅಲ್ಲವೇ?

ಅಪರಾಧ ಮಾಡಿದವರು ಸುರಕ್ಷಿತ ಮನೆಗೆ

ಸೆಂಟ್ರಲ್ ಬ್ಯಾಂಕ್‌ನ ಚೇರ್‌ಮನ್-ಮ್ಯಾನೇಜಿಂಗ್ ಡೈರೆಕ್ಟರ್ ಎಸ್. ಸುಬ್ರಮಣಿಯನ್ ನಿವೃತ್ತರಾಗಿದ್ದಾರೆ. ಸಕಲ ವೈಭವದಿಂದ ಅವರನ್ನು ಬೀಳ್ಕೊಡಲಾಗಿದೆ. ಈತ ಹಲವು ಸಾಲಗಳನ್ನು ತನ್ನ ಅಧಿಕಾರ ವ್ಯಾಪ್ತಿಯ ಹೊರಗಿದ್ದರೂ ಮಂಜೂರು ಮಾಡಿದ್ದರು. ಹಲವು ಅಕ್ರಮಗಳನ್ನು ನಡೆಸಿದ್ದರು. ಇವುಗಳಲ್ಲಿ ಕೆಲವನ್ನು ಆಡಳಿತ ಮಂಡಳಿಯ ಮುಂದಿಟ್ಟು ಅದರ ಅನುಮೋದನೆ ಪಡೆಯಿರಿ ಎಂದು ಭಾರತೀಯ ರಿಸರ್ವ್‌ಬ್ಯಾಂಕ್ ನಿರ್ದೇಶಿಸಿದರೂ ಆತ ಅದನ್ನು ಲಕ್ಷಿಸಲಿಲ್ಲ.

ವ್ಯಕ್ತಿ ಅಧಿಕಾರದಲ್ಲಿದ್ದಾಗ ಸೇವೆಯಲ್ಲಿದ್ದಾಗ ಆತನನ್ನು ಶಿಕ್ಷಿಸುವುದು ಸಾಧ್ಯ, ಆದರೆ ಆತ ನಿವೃತ್ತಿ ಹೊಂದಿದ ಮೇಲೆ? ಕಠಿಣ ಸಾಧ್ಯ

ಈ ಉನ್ನತಾಧಿಕಾರಿ ಇಷ್ಟೊಂದು ಅಕ್ರಮಗಳನ್ನು ನಡೆಸಿದ್ದರೂ ಅವರನ್ನು ಸುರಕ್ಷಿತ ಮನೆಗೆ ಕಳಿಸಿದ್ದರ ಮರ್ಮ? ಕಾಂಗ್ರೆಸ್ ಸರ್ಕಾರದಲ್ಲಿ ಇವರ ಈ ಅಧಿಕಾರದ ಲಾಭ ಪಡೆದ ಇವರ ಹಿತಕಾಯುವ ಯಾರೋ ಇರಬೇಕಲ್ಲವೆ?

ಮುಂದೆ ಸೆಂಟ್ರಲ್ ಬ್ಯಾಂಕ್ ಈ ಅಕ್ರಮಗಳಿಂದಾಗಿ ತೀವ್ರ ಹಾನಿ ಅನುಭವಿಸಿತೆಂದು ಕೊಳ್ಳಿ "ಸರ್ಕಾರದ ಸಮರ್ಥನೆ ಹೀಗಿರುತ್ತದೆ" 'ರಾಷ್ಟ್ರೀಕರಣದಿಂದಾಗಿ ಅತಿಯಾದ ನಿಯಂತ್ರವಿದ್ದುದರಿಂದ ಹೀಗಾಯಿತು' ಎಂದು ಒಳ್ಳೆಯ ತಂತ್ರಗಾರಿಕೆ ಅಲ್ಲವೆ?

ವ್ಯಾಪಾರದಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಮಾಡಿ ಗ್ಯಾಟಣ್ಣನ ಸಲಹೆ

ಅಂತರ್ರಾಷ್ಟ್ರೀಯ ವ್ಯಾಪಾರದ ಬಗೆಗೆ ಒಪ್ಪಂದಗಳನ್ನು ಮಾಡುವ ಗ್ಯಾಟ್ ಸಂಸ್ಥೆ ಭಾರತದ ಸುಧಾರಣೆಗಳ ಸಮೀಕ್ಷೆ ಮಾಡಿ ವ್ಯಾಪಾರ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳಾಗಬೇಕು ಎಂದಿದೆ.

ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಗಳನ್ನು ಕಾಯುವ ಈ ಸಂಸ್ಥೆ ಅವರ ವಿಚಾರಗಳನ್ನೇ ಪ್ರತಿನಿಧಿಸುತ್ತದೆ. ಈ ಗ್ಯಾಟ್‌ನ ಹಿಂದಿನ ನಿರ್ದೇಶಕ ಡಂಕೆಲ್ ಮಹಾಶಯ ಡಂಕೆಲ್ ಪ್ರಸ್ತಾಪಗಳೆಂದು ಹೆಸರಾಗಿರುವ ಪ್ರಸ್ತಾಪಗಳನ್ನು ಮಾಡಿದ್ದ ಗ್ಯಾಟ್‌ನ ಈ ಸಲಹೆಯ ಹಿನ್ನೆಲೆಯಲ್ಲಿ ಡಂಕೆಲ್ ಪ್ರಸ್ತಾಪಗಳನ್ನು ಭಾರತ ಪೂರ್ಣವಾಗಿ ಒಪ್ಪಿಕೊಳ್ಳಬೇಕು ಎಂಬ ಆಶಯ ಇರಬಹುದು ಅಲ್ಲವೆ?

ಖಾಸಗೀಕರಣದ ಭಯದಲ್ಲಿ ವಿಮಾ ಕ್ಷೇತ್ರ

ಸದ್ಯಕ್ಕೆ ಸಾರ್ವಜನಿಕ ವಲಯದಲ್ಲಿರುವ ವಿಮಾ ಕ್ಷೇತ್ರವನ್ನು ಖಾಸಗೀಕರಣದ ಛಾಯೆ ಕಾಡುತ್ತಿದೆ. ಕಳೆದ ಏಪ್ರಿಲ್‌ನಲ್ಲಿ ಆರ್.ಎನ್. ಮಲ್ಹೋತ್ರ ಸಮಿತಿ ನೇಮಕವಾಗಿದ್ದು ಇಷ್ಟು ಹೊತ್ತಿಗೆ ಅದು ತನ್ನ ವರದಿ ಸಲ್ಲಿಸಬೇಕಾಗಿತ್ತು. ಹಲವು ಬಹುರಾಷ್ಟ್ರೀಯ ಕಂಪನಿಗಳು ಇದಕ್ಕಾಗಿ ಕಾದು ನಿಂತಿದ್ದಾರೆ. ಈ ಸಮಿತಿಯ ವರದಿಯಲ್ಲೂ ವಿಶ್ವಬ್ಯಾಂಕ್, ಐ.ಎಂ.ಎಫ್.ಗಳ ಕರಾಳ ಕೈಗಳು ಕೆಲಸ ಮಾಡುತ್ತಿವೆ.

ವಿಶ್ವಬ್ಯಾಂಕ್ ಬೆದರಿಕೆ

ವಿದ್ಯುತ್ ವಲಯಕ್ಕೆ ತಾನು ನೀಡಲಿರುವ 1.2 ಮಿಲಿಯನ್ ಡಾಲರುಗಳ ಸಾಲವನ್ನು ರದ್ದುಮಾಡುವ ಬೆದರಿಕೆಯನ್ನು ವಿಶ್ವಬ್ಯಾಂಕ್ ಭಾರತ ಸರ್ಕಾರಕ್ಕೆ ಹಾಕಿದೆ. ದೇಶದಲ್ಲಿ ಸಾರ್ವಜನಿಕ ವಲಯದಲ್ಲಿರುವ ವಿದ್ಯುತ್ ನಿಗಮಗಳು ತಮ್ಮ ಬಾಕಿಗಳನ್ನು ಡಿಸೆಂಬರ್ ಒಳಗೆ ತೀರಿಸಲೇಬೇಕೆಂದು ವಿಶ್ವಬ್ಯಾಂಕ್ ಹಠ ಹಿಡಿದಿದೆ.

ರಾಜ್ಯ ವಿದ್ಯುತ್ ಮಂಡಳಿಗಳು ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ, ಮತ್ತು ರಾಷ್ಟ್ರೀಯ ಜಲವಿದ್ಯುತ್ ನಿಗಮಗಳಿಗೆ ಕೊಡಬೇಕಾದ ಬಾಕಿ 4,300 ಕೋಟಿ ರೂಪಾಯಿಗಳು.

ಈ ಒತ್ತಡದ ಪರಿಣಾಮವಾಗಿ ರಾಜ್ಯ ವಿದ್ಯುತ್ ನಿಗಮಗಳು ವಿದ್ಯುತ್ ಬೆಲೆಯನ್ನು ಬಹಳ ಹೆಚ್ಚಿಸಬೇಕಾಗುತ್ತದೆ. ಈ ಹೆಚ್ಚಳ ಖಾಸಗಿ ವಲಯಕ್ಕೆ ಲಾಭದಾಯಕವಾಗಿ ಪರಿಣಮಿಸುತ್ತದೆ ಇದು ವಿಶ್ವಬ್ಯಾಂಕ್‌ನ ಉದ್ದೇಶ.

ಒಳ್ಳೆಯ (ಕು)ತಂತ್ರ ಅಲ್ಲವೆ?

ದೊಡ್ಡವರಿಗಾಗಿ ಕಾನೂನನ್ನೇ ಮುರಿವ ಸರ್ಕಾರ

ಲಾಭದ ವಿಷಯ ಬಂದಾಗ ಬಂಡವಾಳಿಗರು ಕಾನೂನುಗಳನ್ನೆಲ್ಲ ಗಾಳಿಗೆ ತೂರುತ್ತಾರೆ. ಸಾಮ್ರಾಜ್ಯಶಾಹಿಗಳನ್ನೇ ಪ್ರತಿನಿಧಿಸುವ ಬಹುರಾಷ್ಟ್ರೀಯ ಕಂಪನಿಗಳು ಕಾನೂನು ಪಾಲಕರನ್ನೇ ಕೊಂಡು ಎಲ್ಲ ತರಹದ ಅಕ್ರಮಗಳನ್ನು ನಡೆಸುತ್ತಾರೆ ಅಂತಹ ಒಂದು ನಿದರ್ಶನ ಇಲ್ಲಿದೆ.

ನೆಸ್ಲೆ ಎಂಬ ಬಹುರಾಷ್ಟ್ರೀಯ ಕಂಪನಿಯೊಂದಿಗೆ ಎಲ್ಲಕಡೆ ಈ ಕಂಪನಿಯ ದಿಢೀರ್ ಕಾಫಿಯ ಪ್ರಚಾರದ ಅಬ್ಬರಗಳನ್ನು ನೀವು ನೋಡಿರಬಹುದು. ಈ ಕಂಪನಿ ಒಂದು ಅಕ್ರಮ ನಡೆಸಿ ಅದನ್ನು ನಮ್ಮ ಕೇಂದ್ರ ಸರ್ಕಾರದ ಮೂಲಕ ದಕ್ಕಿಸಿಕೊಂಡಿದೆ. ಮುಂಬರುವ ದಿನಗಳಲ್ಲಿ ಕಾನೂನುಗಳ ಕೈಗಳನ್ನು ಹೇಗೆ ಕತ್ತರಿಸಲಾಗುತ್ತದೆ ಎಂಬುದಕ್ಕೂ ಸೂಚಿಯಾಗಬಲ್ಲದು ಇದು.

ನಮ್ಮ ಕಾಫಿ ಮಂಡಳಿ ಎರಡು ತರಹದ ಹರಾಜುಗಳನ್ನು ನಡೆಸುತ್ತದೆ. ಆಂತರಿಕ ಮಾರುಕಟ್ಟೆಗೆ ಕಾಫಿ ಪೂರೈಸಲು ಒಂದು ಹರಾಜು ರಫ್ತು ಮಾಡಲು ಇನ್ನೊಂದು ತರಹದ್ದು. ಇಲ್ಲಿ ರಫ್ತಿಗಾಗಿ ಕಾಫಿ ಕೊಂಡವರು ಅದನ್ನು ರಫ್ತು ಮಾಡಬೇಕೆ ಹೊರತು ಆಂತರಿಕ ಮಾರುಕಟ್ಟೆಗೆ ಬಿಡುಗಡೆ ಮಾಡಬಾರದು. ಆದರೆ ನೆಸ್ಲೆ ಎಂಬ ಬಹುರಾಷ್ಟ್ರೀಯ ಕಂಪನಿ ಹಾಗೆ ಮಾಡಲಿಲ್ಲ. ರಫ್ತಿಗಾಗಿ ಅದು ಹರಾಜಿನಲ್ಲಿ ಕಾಫಿಯನ್ನು ಕೊಂಡಿತು. ರಫ್ತು ಮಾಡುವ ಬದಲು ಆಂತರಿಕ ಮಾರುಕಟ್ಟೆಗೆ ಅದನ್ನು ಬಿಡುಗಡೆ ಮಾಡಿತು.

ಇಂತಹ ಕಾನೂನು ಉಲ್ಲಂಘನೆಯಾದಾಗ ಕಾಫಿ ಮಂಡಳಿ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಯಾಕೆಂದರೆ ಒಂದು ಉಲ್ಲಂಘನೆಯನ್ನು ಹಾಗೇ ಬಿಟ್ಟರೆ ಉಳಿದವರೂ ಕಾನೂನು ಉಲ್ಲಂಘನೆ ಮಾಡುತ್ತಾರೆ. ಕಾಫಿ ಮಂಡಳಿ ನೆಸ್ಲೆ ಮುಂದೆ ಕಾಫಿ ಹರಾಜುಗಳಲ್ಲಿ ಭಾಗವಹಿಸುವಂತೆ ನಿರ್ಬಂಧ ಹೇರಿತ್ತು ಮತ್ತು ಅದರ ಈ ಅವ್ಯವಹಾರದ ವಿಚಾರಣೆಯನ್ನು ಕೈಗೆತ್ತಿಕೊಂಡಿತು. ಆದರೆ ಕೇಂದ್ರ ವಾಣಿಜ್ಯ ಮಂತ್ರಾಲಯ ಈ ಕ್ರಮಗಳನ್ನು ತಳ್ಳಿಹಾಕಿ ಆಜ್ಞೆ ಹೊರಡಿಸಿತು. 1942 ರ ಕಾಫಿ ಕಾಯಿದೆಯ 42(1) ಸೆಕ್ಷನ್ನಿನ ಪ್ರಕಾರ ಕಾಫಿ ಮಂಡಳಿಯ ಯಾವುದೇ ನಿರ್ಧಾರವನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕಿದೆ. ಸರ್ಕಾರ ಈ ಕಾಯಿದೆಯ ಸೆಕ್ಷನ್ನಿನ ಅವಕಾಶವನ್ನು ಬಳಸಿಕೊಂಡಿತು.

ಕಾಫಿ ಮಂಡಳಿಯ ಸದಸ್ಯರು ಇದನ್ನು ವಿರೋಧಿಸುತ್ತಾರೆ. "ನಿಯಮಗಳಿರುವಾಗ ಅವು ಎಲ್ಲರಿಗೂ ಒಂದೇ ತೆರನಾಗಿರಬೇಕು ಚಿಕ್ಕವರಿಗೊಂದು ದೊಡ್ಡವರಿಗೊಂದು ನೀತಿ ಸರಿಯಲ್ಲ" ಎಂಬುದು ಇವರ ನಿಲುವು. ಕಾಫಿ ಮಂಡಳಿಯ ಉಪಾಧ್ಯಕ್ಷ ವಿಜಯನ್ ರಾಜೆಸ್ ಇಂತಹ ನಿಲುವು ತಳೆಯುತ್ತಾರೆ.

ನೆಸ್ಲೆ ತಾನು ಅತ್ಯಂತ ದೊಡ್ಡ ರಫ್ತುದಾರ, ಆದ್ದರಿಂದ ತನಗೆ ಇಂತಹ ರಿಯಾಯಿತಿಯನ್ನು ಸರ್ಕಾರ ತೋರಿಸುವುದು ಸಮರ್ಥನೀಯ ಎನ್ನುತ್ತದೆ.

ಹಿಂದೆ ಬೊಡಾಯ್‌ಯ ಚಿಕ್ಕ ರಫ್ತುದಾರರೊಬ್ಬರು ಇಂತಹ ಅಕ್ರಮ ನಡೆಸಿದಾಗ ಕಾಫಿ ಮಂಡಳಿ ಅದನ್ನು ಹರಾಜುಗಳಿಂದ ಹೊರ ಹಾಕಿ ಅವರ ದಾಸ್ತಾನನ್ನು ವಶಪಡಿಸಿಕೊಂಡಿತ್ತು.

ಈಗ ನೆಸ್ಲೆಯ ವಿಷಯದಲ್ಲೂ ದಾಸ್ತಾನು ವಶಪಡಿಸಿಕೊಳ್ಳುವ ಬಗ್ಗೆ ಕಾಫಿ ಮಂಡಳಿ ವಿಚಾರ ಮಾಡುತ್ತಿದೆ? ನೆಸ್ಲೆಯ ಬಳಿ 3000 ಟನ್ನುಗಳಷ್ಟು ಕಾಫಿ ದಾಸ್ತಾನಿದೆ. ಆದರೆ ಹಾಗೆ ಕಾಫಿ ಮಂಡಳಿ ಮುಂದುವರಿದರೆ ಮತ್ತೆ ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಾಲಯ ಹಸ್ತಕ್ಷೇಪ ಮಾಡುತ್ತದೆಯೇ ಎಂಬುದನ್ನು ಕಾದು ನೋಡಬೇಕು.

ಹೇಗಿದೆ ಉದಾರೀಕರಣದ ನ್ಯಾಯ?

ತ್ರಿಪುರಾ: ಹುತಾತ್ಮರಿಗೆ ವೀರ ನಮನ

-- ವಿಶ್ವ

ವೀರಚಂದ್ರಮಾನು-ಇದು ದಕ್ಷಿಣ ತ್ರಿಪುರಾದ ಒಂದು ಪುಟ್ಟ ಹಳ್ಳಿ. ಇದೇ ಅಕ್ಟೋಬರ್ 12 ರಂದು ಅಲ್ಲಿ ಅಪೂರ್ವ ಸನ್ನಿವೇಶವೊಂದು ಸೃಷ್ಟಿಯಾಗಿತ್ತು. ಸಾವಿರಾರು ಜನರು ನೆರೆದಿದ್ದರು. ಬುಡಕಟ್ಟು-ಬುಡಕಟ್ಟೇತರ ಜನರಿದ್ದರು. ಹೆಂಗಸರಿದ್ದರು. ಮಕ್ಕಳಿದ್ದರು. ಯುವಕ ಯುವತಿಯರಿದ್ದರು. ಐದು ವರ್ಷಗಳ ಹಿಂದೆ ಹತರಾದ 13 ಮಂದಿ ಹುತಾತ್ಮರಿಗೆ ನಮನ ಸಲ್ಲಿಸಲೆಂದೇ ಅವರೆಲ್ಲ ಅಲ್ಲಿ ಸೇರಿದ್ದರು.

1988 ರ ಅಕ್ಟೋಬರ್ 12 ರಂದು ಈ ಹಳ್ಳಿಯಲ್ಲಿ ರಕ್ತಪಾತದ ಒಂದು ಘೋರ ಪ್ರಕರಣ ನಡೆದಿತ್ತು. ಸಿಪಿಐ(ಎಂ) ಕಚೇರಿ ಎದುರು ಕೆಂಪು ಧ್ವಜವನ್ನು ಹಾರಿಸುವ ಸಂದರ್ಭದಲ್ಲಿ 11 ಮಂದಿ ಸಿಪಿಐ(ಎಂ) ಕಾರ್ಯಕರ್ತರು ಮತ್ತು ಭದ್ರತಾ ಪಡೆಯ ಇಬ್ಬರು ಸಿಬ್ಬಂದಿಗಳು ಕಾಂಗ್ರೆಸ್ (ಐ) ನೇತೃತ್ವದ ಸಮಾಜ ವಿರೋಧಿ ಶಕ್ತಿಗಳ ದುಷ್ಕೃತ್ಯಕ್ಕೆ ಬಲಿಯಾಗಿದ್ದರು. ಬಹುಶಃ ಇಂಥ ಒಂದು ದುರಂತ ನಮ್ಮ ದೇಶದಲ್ಲಿ ನಡೆದದ್ದು ಅದೇ ಮೊದಲ ಸಲವಾಗಿತ್ತು. ಅಂದಿನಿಂದಲೂ ಮೊನ್ನೆ ಮೊನ್ನೆಯವರೆಗೂ ಕಾಂಗ್ರೆ-ಟಿಯುಜೆಎಸ್ ಮೈತ್ರಿಕೂಟದ ದುರಾಡಳಿತ ನಡೆದಿತ್ತು. ಇದೇ ಎಪ್ರಿಲ್‌ನಲ್ಲಿ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಪ್ರಜಾಸತ್ತಾತ್ಮಕ ಜನರು ಅದಕ್ಕೆ ಗತಿ ಕಾಣಿಸಿದರು.

60 ತಿಂಗಳ ಹಿಂದೆ ಪ್ರಾಣ ತೆತ್ತ ಜನರಿಗೆ ಗೌರವ ಸಲ್ಲಿಸಲು ವ್ಯವಸ್ಥೆಗೊಂಡಿದ್ದ ಬೃಹತ್ ಸಭೆಗೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದರು.

1988ರ ಆ ಕರಾಳದಿನ ಧ್ವಜಾರೋಹಣ ಮಾಡಲು ಆಗದಿದ್ದ ಹಿರಿಯ ಬುಡಕಟ್ಟು ನಾಯಕ ಹಾಗೂ ಪಕ್ಷದ ತ್ರಿಪುರಾ ರಾಜ್ಯ ಸಮಿತಿ ಸದಸ್ಯ ಬ್ರಜಾ ಮೋಹನ್ ಜಮಾತಿಯಾ ಸಭೆಯಲ್ಲಿ ಧ್ವಜಾರೋಹಣ ಮಾಡಿದರು. ಕಾಮ್ರೇಡ್ ಜಮಾತಿಯಾ 1988 ರ ಆ ಘೋರ ಹತ್ಯಾಕಾಂಡದ ವೇಳೆ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದರು.

ಇಡೀ ಪ್ರದೇಶ ಕೆಂಬಾವುಟಗಳ ಹಾಗೂ ಬಂಟಿಂಗ್‌ಗಳಿಂದ ಕಂಗೊಳಿಸುತ್ತಿತ್ತು. ಘೋಷಣೆ ಮುಗಿಲು ಮುಟ್ಟುವಂತಿತ್ತು. ಪ್ರಕಾಶ್ ಕಾರಟ್ ಹುತಾತ್ಮ ಸ್ಮಾರಕ ಮೇಲೆ ಪುಷ್ಪಗುಚ್ಛ ಇರಿಸಿದರು. ರಾಜ್ಯ ಸಮಿತಿ ಕಾರ್ಯದರ್ಶಿ ಮಾಣಿಕ್ ಸರ್ಕಾರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ದಿನೇಶ್ ದೇವ್ ವರ್ಮಾ, ಬಾನು ಘೋಷ್, ಬಾದಲ್ ಚೌಧರಿ, ಅನಿಲ್ ಸರ್ಕಾರ್, 13 ಹುತಾತ್ಮರ ಕುಟುಂಬದ ಸದಸ್ಯರು ಮತ್ತು ಇತರ ನಾಯಕರು ಉಪಸ್ಥಿತರಿದ್ದರು.

ಹುತಾತ್ಮರ ಸ್ಮರಣಾರ್ಥವಾಗಿ 13 ಗಿಡಗಳನ್ನು ನೆಡಲಾಯಿತು.

ಎಚ್ಚರಿಕೆ : ತ್ರಿಪುರಾದಲ್ಲಿ ಬುಡಕಟ್ಟು ಮತ್ತು ಬುಡಕಟ್ಟೇತರ ಜನರನ್ನು ಪ್ರತಿಯೊಂದು ವಿಷಯದಲ್ಲಿ ಒಡೆಯಲು ಕಾಂಗ್ರೆಸ್ (ಐ) ಪ್ರಯತ್ನಿಸುತ್ತಿದೆ ಈ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಪ್ರಕಾಶ್ ಕಾರಟ್ ಕರೆ ನೀಡಿದರು. ಆದರೆ ಜನರನ್ನು ವಿಭಜಿಸುವುದು ಅಷ್ಟು ಸುಲಭವಲ್ಲ ಎನ್ನುವುದನ್ನು ವೀರ ಚಂದ್ರಮಾನು ಘಟನೆಯ ಪಾಠ ತೋರಿಸಿಕೊಟ್ಟಿದೆ ಎಂದು ಹೇಳಿದರು.

ಮೃತಪಟ್ಟ ಸಂಗಾತಿಗಳಿಗಾಗಿ ಕಣ್ಣೀರು ಕರೆಯಲಷ್ಟೇ ಜನರು ಇಲ್ಲಿ ಸೇರಿಲ್ಲ. ಬದಲಿಗೆ ಅವರು ಬಿಟ್ಟು ಹೋದ ಗುರಿಯನ್ನು ಸಾಧಿಸಲಿಕ್ಕಾಗಿ ಇಲ್ಲಿ ಬಂದಿದ್ದಾರೆ ಹೀಗೆಂದು ಹೇಳಿದರು ಮಾಣಿಕ್ ಸರ್ಕಾರ್.

ವಿಜ್ಞಾನೋತ್ಸವ

ಕೇರಳ ರಾಜ್ಯಾದಾದ್ಯಂತ 'ವಿಜ್ಞಾನೋತ್ಸವ'ವನ್ನು ನಡೆಸಲು ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ನಿರ್ಧರಿಸಿದೆ. ಇದರ ಅಂಗವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಒಟ್ಟು 3,000 ಶೈಕ್ಷಣಿಕ ಶಿಬಿರಗಳನ್ನು ನಡೆಸಲಾಗುತ್ತದೆ. ಔಪಚಾರಿಕ ಶಿಕ್ಷಣ ಕೊಡಲು ವಿಫಲವಾದ ಶಿಕ್ಷಣದ ಅಂಶಗಳನ್ನು ಈ ಶಿಬಿರಗಳು ನೀಡಲಿವೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಹಾಗೂ ಪಠ್ಯಕ್ರಮವನ್ನು ಮೀರಿದ ಸ್ವಯಂ ಶಿಕ್ಷಣವನ್ನು ಒದಗಿಸುವುದು ಉದ್ದೇಶವಾಗಿದೆ.

ಕೇರಳ ಅಸೆಂಬ್ಲಿ ಅಧಿವೇಶನ ಕರೆಯಲು ಒತ್ತಾಯ

ಪಂಚಾಯತ್ ರಾಜ್ ಕಾನೂನನ್ನು ಅಂಗೀಕರಿಸಬೇಕಾಗಿದೆ. ಅದಕ್ಕಾಗಿ ತುರ್ತಾಗಿ ವಿಧಾನಸಭೆಯ ಅಧಿವೇಶನವನ್ನು ವ್ಯವಸ್ಥೆಗೊಳಿಸಿ ಎಂದು ಕೇರಳ ವಿಧಾನಸಭೆಯ ಪ್ರತಿಪಕ್ಷ ನಾಯಕ ವಿ.ಎಸ್. ಅಚ್ಯುತಾನಂದ ಆಗ್ರಹಪಡಿಸಿದ್ದಾರೆ.

ಪಾಲಕ್ಕಾಡ್‌ನಲ್ಲಿ ಪಂಚಾಯತ್ ರಾಜ್ಯ್ ಬಗ್ಗೆ ನಡೆದ ವಿಚಾರ ಸಂಕಿರಣವೊಂದರಲ್ಲಿ ಮಾತನಾಡಿದ ವಿ.ಎಸ್. ಸಿಪಿಐ(ಎಂ) ನಿಲುವನ್ನು ಸ್ಪಷ್ಟಪಡಿಸಿದರು.

ಪಂಚಾಯತ್ ರಾಜ್ ಕಾನೂನನ್ನು ಅಂಗೀಕರಿಸಲು ಸುಗ್ರೀವಾಜ್ಞೆಯ ಮೊರೆ ಹೊಕ್ಕರೆ ಯು.ಡಿ.ಎಫ್. ಸರಕಾರಕ್ಕೆ ಸರಿಯಾದ ಹಾಗೂ ಪರಿಪೂರ್ಣವಾದ ಅಧಿಕಾರ ವಿಕೇಂದ್ರೀಕರಣದಲ್ಲಿ ಆಸಕ್ತಿಯಿಲ್ಲ ಎಂದಾಗುತ್ತದೆ ಎಂದು ಅಚ್ಯುತಾನಂದ ಹೇಳಿದರು.

ಕಾಂಗ್ರೆ ಶಾಸಕನ ವಿಷಾಧ

ಹಿಂದಿನ ಎಲ್.ಡಿ.ಎಫ್. ಸರಕಾರ ರಚಿಸಿದ್ದ ಜಿಲ್ಲಾ ಮಂಡಳಿಗಳ ಅಧಿಕಾರಗಳನ್ನು ಯು.ಡಿ.ಎಫ್. ಸರಕಾರ ಕಿತ್ತುಕೊಂಡಿರುವುದಕ್ಕೆ ಕಾಂಗ್ರೆ ಶಾಸಕ ಪಿ.ಬಾಲನ್ ಸಂಕಿರಣದಲ್ಲಿ ವಿಷಾದ ವ್ಯಕ್ತಪಡಿಸಿದರು. ಸರಕಾರ ಜಿಲ್ಲಾ ಮಂಡಳಿ ಬಗ್ಗೆ ಇಷ್ಟೊಂದು ಕ್ರೂರ ರೀತಿಯಲ್ಲಿ ವರ್ತಿಸಬಾರದಿತ್ತು ಎಂದೂ ಬಾಲನ್ ಹೇಳಿದರು.

ಆಂಧ್ರಪ್ರದೇಶ ಡಿ.ವೈ.ಎಫ್.ಐ ಸಮ್ಮೇಳನ

ಅಕ್ಟೋಬರ್ ಎಂಟರಂದು ಆಂಧ್ರಪ್ರದೇಶ ಕರ್ನೂಲಿನಲ್ಲಿ ಯುವಜನರ ಬೃಹತ್ ಮೆರವಣಿಗೆಯೊಂದು ನಡೆಯಿತು. ಸುಮಾರು 5,000 ಮಹಿಳೆಯರ ಸಹಿತ 25,000 ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಡಿ.ವೈ.ಎಫ್.ಐ 7ನೇ ರಾಜ್ಯ ಸಮ್ಮೇಳನದಲ್ಲಿ ಅಂಗವಾಗಿ ಇದು ನಡೆಯಿತು. ಸಮ್ಮೇಳನ ನಡೆದದ್ದು 8 ರಿಂದ 10 ರವರೆಗೆ.

ತುಂಗಾಭದ್ರಾ ದಡದ ಮೇಲಿರುವ ಈ ಪುಟ್ಟ ಹಿಂದುಳಿದ ಪಟ್ಟಣದ ಇತಿಹಾಸದಲ್ಲೇ ಇದು ಅತ್ಯಂತ ದೊಡ್ಡ ರ್‍ಯಾಲಿಯಾಗಿತ್ತು. ಡಿ.ವೈ.ಎಫ್.ಐ ಪ್ರಧಾನ ಕಾರ್ಯದರ್ಶಿ ಮಹಮದ್ ಸಲೀಂ ಮತ್ತು ಎಸ್.ಎಫ್.ಐ ಕೇಂದ್ರ ಸಮಿತಿ ಅಧ್ಯಕ್ಷ ವೈ. ವೆಂಕಟೇಶ್ವರರಾವ್ ಮೊದಲಾದವರು ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದರು.

ಕೇರಳದ ಮಾಜಿ ಮುಖ್ಯಮಂತ್ರಿ ಇ.ಕೆ. ನಾಯನಾರ್ ರ್‍ಯಾಲಿಯಲ್ಲಿ ಮುಖ್ಯ ಭಾಷಣ ಮಾಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ವಿ. ರಾಘವಲು, ಸಲೀಂ ಮತ್ತು ತ್ರಿಪುರಾದ ಯುವಜನ ಹಾಗೂ ಕ್ರೀಡಾಖಾತೆ ಸಚಿವ ಜಿತೇಂದ್ರ ಚೌಧರಿ ಕೂಡ ಮಾತನಾಡಿದರು.



ವೀರ ಚಂದ್ರಮಾನುವಿನಲ್ಲಿ ನಡೆದ ಹುತಾತ್ಮರ ನಮನಕ್ಕೆ ಸೇರಿದ್ದ ಜನಸಮೂಹದ ಒಂದು ನೋಟ. ಬೃಹತ್ ಜನರನ್ನುದ್ದೇಶಿಸಿ ಮಾತನಾಡುತ್ತಿರುವವರು ಕಾಂ. ಪ್ರಕಾಶ್ ಕಾರಟ್.

ಇನ್ನಾದರೂ ಜಾತೀಯ, ಮತೀಯ ರಾಜಕೀಯವನ್ನು ಬದಿಗಿರಿಸಿರಿ............

ಪುಟ 1ರಿಂದ

ರಾಜಕೀಯವನ್ನು ಬದಿಗಿರಿಸಿರಿ

ಈಗಂತೂ ಅವರು ಮಂತ್ರಿಯಾಗಿಲ್ಲ. ಮೊಯಿಲಿಯವರು ಅವರನ್ನು ಮಂತ್ರಿ ಸ್ಥಾನದಿಂದ ಉಚ್ಚಾಟಿಸಿದ್ದಾರೆ. ಈಗ ಅವರು ಮೊಯಿಲಿಯವರನ್ನು ವಿರೋಧ ಮಾಡಲು ನಮ್ಮ ಅಡ್ಡಿಯಿಲ್ಲ.

ಅವರು, ತಮ್ಮ ಜಾತಿಯವರಿಗೆ ಲಿಂಗಾಯಿತ ಮತಕ್ಕೇನೇ ತನ್ನನ್ನು ಮಂತ್ರಿ ಮಂಡಳದಿಂದ ವಜಾ ಮಾಡಿ ಮೊಯಿಲಿಯವರು 'ಮಾನಹಾನಿ' ಮಾಡಿದ್ದಾರೆ ಎಂದು ಕೂಗುತ್ತಿರುವುದಕ್ಕೆ ನಮ್ಮ ವಿರೋಧ ಇದು ತೀರಾ ಬೇಜವಾಬ್ದಾರಿ ಮತ್ತು ತತ್ವರಹಿತ ರಾಜಕೀಯ.

ಎಂತಹ ರಾಜಕೀಯ? ಯಾವ ತತ್ವ ಇಲ್ಲಿ ಒಳಗೊಂಡಿದೆ? ರಾಜಶೇಖರ ಮೂರ್ತಿಯವರು ಲಿಂಗಾಯಿತ ಮತದವರಾಗಿರಬಹುದು. ಆದರೆ ಅವರು ಭಿನ್ನ ಮತೀಯ ಕಾಂಗ್ರೆಸ್ಸಿಗರಾಗಿ ಕೆಲಸ ಮಾಡುವುದರ ಬದಲು ತಮ್ಮ ಜಾತಿಯವರನ್ನು ಎಬ್ಬಿಸಿ, ಮೊಯಿಲಿಯವರ ವಿರುದ್ಧ ಅವರ ಕ್ರಮದ ವಿರುದ್ಧ ಅವರ ಜಾತಿಯವರು ಧರಣಿ ಕೂತುಕೊಳ್ಳುವುದೆಂದರೆ....... ಇದು ತೀರಾ ....ಂದ ಕೀಳು. ಇದು ಮತೀಯ ರಾಜಕೀಯವಲ್ಲದೆ ಬೇರೆಯಲ್ಲ. ಇಂತಹ ರಾಜಕೀಯವನ್ನು ಮಾಡಿಯೇ ರಾಜ್ಯದಲ್ಲಿ ಕಾಂಗ್ರೆಸ್ಸಿಗರು ಬಿಜೆಪಿಯಂತಹ ಕಟ್ಟಾ ಮತೀಯ ರಾಜಕೀಯಕ್ಕೆ ಎಡೆಕೊಟ್ಟಿರು.

ಹಿಂದೆ, ಕೇರಳದಲ್ಲಿ ಇ.ಎಂ.ಎಸ್. ನೇತೃತ್ವದ ಕಮ್ಯುನಿಸ್ಟ್ ಸರಕಾರ ಅಧಿಕಾರದಲ್ಲಿದ್ದಾಗ ಅವರ ಸರಕಾರದ ಶಿಕ್ಷಣ ಮಂತ್ರಿ ಪ್ರೊಫೆಸರ್ ಮುಂಡಶೇರಿಯವರು ಕೆಥೋಲಿಕ್ ಚರ್ಚಿನ ಹಿಡಿತದಲ್ಲಿ ಶಾಲಾ ಕಾಲೇಜುಗಳ ಖಾಸಗಿ ಮೇನೇಜುಮೆಂಟು ಮುಂದುವರಿದರೆ ಅದು ದೇಶದಲ್ಲಿ ಜಾತ್ಯಾತೀತ ರಾಜಕೀಯಕ್ಕೆ ವೈಜ್ಞಾನಿಕ ವಿದ್ಯಾಭ್ಯಾಸಕ್ಕೆ ಅಪಾಯವೆಂದು ಸ್ವತಃ ಅನುಭವದಲ್ಲಿ ಕಂಡು "ಅವುಗಳ ಮೇಲೆ ಸರಕಾರದ ಹೆಚ್ಚಿನ ಹಿಡಿತ" ಕ್ಕಾಗಿ ಶಿಕ್ಷಣ ಮಸೂದೆಯನ್ನು ತಂದಾಗ, ಇಡೀ ಕಾಂಗ್ರೆಸ್ಸಿಗರು ವಿರೋಧಿಸಿದರು. ಮುಂದಕ್ಕೆ ಎಲ್ಲಾ ಜಾತೀಯ ಮತೀಯ ಶಕ್ತಿಗಳ ಜತೆ ಸೇರಿ "ವಿಮೋಚನಾ ಸಮರ" ಹೂಡಿ, ಆ ನೆಪದಲ್ಲಿ ಆ ಸರಕಾರವನ್ನು ನೆಹರೂ ವಜಾ ಮಾಡುವಂತೆ ಮಾಡಿದರು. ಅದರ ಫಲ ಇಂದು ನಾವು ಕೇರಳದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನುಭವಿಸುತ್ತಿದ್ದೇವೆ.

ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ವೃತ್ತಿಪರ (ಪ್ರೊಫೆಶನಲ್) ಕಾಲೇಜುಗಳಲ್ಲಿ ಸುಪ್ರೀಂಕೋರ್ಟಿನ ನ್ಯಾಯಸಮ್ಮತವಾದ ತೀರ್ಪನ್ನು ಜ್ಯಾರಿ ಮಾಡುವುದಕ್ಕೆ ಅಡ್ಡಿಯಾಗಿ ಬಂಡೆ ಕಲ್ಲಿನಂತೆ ನಿಂತದ್ದು ಯಾರು - ಮಠಾಧಿಪತಿಗಳಲ್ಲವೇ?

ಜಾತಿ, ಮತ, ಧರ್ಮ ಇವೆಲ್ಲಾ ಒಂದು ಕಾಲದಲ್ಲಿ ಮನುಷ್ಯರನ್ನು ಒಟ್ಟುಗೂಡಿಸುವುದಕ್ಕೆ ಸಹಾಯಕವಾಗಿದ್ದರೆ, ಇಂದು ವೈಜ್ಞಾನಿಕವಾಗಿ ಪ್ರಭುತ್ವವಾಗಿ ವಿಶ್ವ ಮಾನವನಾಗಿ ಬೆಳೆಯುವ ಅವಕಾಶ ದೊರೆತಾಗ ಇವೆಲ್ಲವೂ 'ವಿಭಜಕ' ಶಕ್ತಿಗಳಾಗಿವೆ ಎಂಬುದನ್ನು ನಾವು ಕಂಡುಕೊಳ್ಳದಿದ್ದರೆ ಬಲಿಷ್ಟ ಐಕ್ಯ ಸಮಗ್ರ ಭಾರತವನ್ನು ಕಟ್ಟುವುದು ಕನಸೇ ಎಂದು ಎಣಿಸಬೇಕಾಗುತ್ತದೆ. ಅದೊಂದು ವೈಜ್ಞಾನಿಕ ಕರ್ತವ್ಯವೆಂದು ಪರಿಗಣಿಸಿ ಕೆಲಸ ಮಾಡಿದರೆ ಮಾತ್ರ ನಾವು ಅಂತಹ ಸಮಗ್ರ ಭಾರತವನ್ನು ಕಟ್ಟಬಹುದು.

ದೇಶದಲ್ಲಿ ಹಾಗೂ ರಾಜ್ಯದಲ್ಲಿ ತತ್ವಭ್ರಷ್ಟರಾಗಿ ತಮ್ಮ ಸ್ವಾರ್ಥ ರಾಜಕೀಯಕ್ಕೆ ಜಾತಿ, ಮತ, ಧರ್ಮವನ್ನು ಉಪಯೋಗಿಸುತ್ತಾ ಬಂದರು. ಅದನ್ನು ವಿರಾಟ ರೂಪದಲ್ಲಿ ಇಂದು "ಕಪ್ಪು" ಹಣದ ಸಹಾಯದಿಂದ, ಸಾಮ್ರಾಜ್ಯಶಾಹಿಗಳ ಬಹಿರಂಗ ಬೆಂಬಲದಿಂದ ಬಿಜೆಪಿಯಂತಹ ಪಕ್ಷವು ಅದೇ ಆಟವನ್ನು ಆಡಲು ಹೊರಟಿದೆ.

ಆದ್ದರಿಂದ, ಕಾಂಗ್ರೆಸ್ಸಿಗರೇ, ಇನ್ನಾದರೂ ದೇಶದ ಹಿತದ ದೃಷ್ಟಿಯಿಂದ ರಾಜಕೀಯ ನಡೆಸಿ. ನಿಮ್ಮ ರಾಜಕೀಯಕ್ಕೆ ಜಾತಿ ಮತದ ಸೋಗು ಹಾಕಬೇಡಿ.

ಶೋಷಣೆ ದಬ್ಬಾಳಿಕೆಗಳ ವಿರುದ್ಧ ಹೋರಾಡಲು ಪ್ರೆಸ್ ಕಾರ್ಮಿಕರ ನಿರ್ಧಾರ

ಉಡುಪಿ: ತಾಲೂಕಿನ ಪ್ರೆಸ್ ವರ್ಕರ್ಸ್ ಯೂನಿಯನ್‌ನ ಸರ್ವ ಸದಸ್ಯರ ಸಭೆಯು ಅಕ್ಟೋಬರ್ 15 ರಂದು ಕಾಂ. ಪಿ. ವಿಶ್ವನಾಥ ರೈಯವರ ಅಧ್ಯಕ್ಷತೆಯಲ್ಲಿ ಉಡುಪಿಯಲ್ಲಿ ಜರುಗಿತು. ಈ ಸಭೆಯಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಮೇಲೆ ಆಗುತ್ತಿರುವ ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಮಾನವೀಯ ನೆಲೆಯಲ್ಲಿ ಹೋರಾಡುವ ನಿರ್ಣಯ ಕೈಗೊಳ್ಳಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದ.ಕ. ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಕಾಂ. ಕೆ. ಶಂಕರ್‌ರವರು ಮಾತನಾಡುತ್ತಾ ಕೇಂದ್ರ ಸರಕಾರದ ಐ.ಎಂ.ಎಫ್. ಆದೇಶಿತ ನೂತನ ಕೈಗಾರಿಕಾ ನೀತಿ ಮತ್ತು ನೂತನ ಆರ್ಥಿಕ ನೀತಿಗಳಿಂದ ಖಾಸಗಿ ಬಂಡವಾಳ ಶಾಹಿಗಳಿಗೆ ಪ್ರಯೋಜನವಾಗುತ್ತಿದೆ. ಈ ವಲಯದಲ್ಲಿ ಆರ್ಥಿಕ ವ್ಯವಹಾರಗಳು ಹೆಚ್ಚಿದಂತೆಲ್ಲಾ ಶೋಷಣೆ, ವಂಚನೆ, ದಬ್ಬಾಳಿಕೆಗಳು ಬೆಳೆಯುತ್ತವೆ. ಇದರಿಂದ ದುಡಿಯುವ ವರ್ಗ ಕಷ್ಟಗಳಿಗೆ ಗುರಿಯಾಗುತ್ತಾರೆ. ಇಂತಹ ಪರಿಸ್ಥಿತಿಗಳ ವಿರುದ್ಧ ಪ್ರೆಸ್ ಕಾರ್ಮಿಕರು ಸಂಘಟಿತರಾಗಿ ಹೋರಾಡಬೇಕೆಂದು ಕರೆ ನೀಡಿದರು.

ಈ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ. ಪಿ. ವಿಶ್ವನಾಥ ರೈಯವರು ಮಾತನಾಡುತ್ತಾ ಮಣಿಪಾಲದ ಪ್ರೆಸ್ ಕಾರ್ಮಿಕರು ಉತ್ಪಾದನೆ ಹೆಚ್ಚು ಮಾಡುವಲ್ಲಿ ಶ್ರಮವಹಿಸಿ ಆ ಮೂಲಕ ಬೇಡಿಕೆಗಳನ್ನು ಪಡೆಯಲು ಸಂಧಾನ, ಮಾತುಕತೆ, ಹೋರಾಟದಂತಹ ಕ್ರಮಗಳನ್ನು ಅನುಸರಿಸಬೇಕು ಮತ್ತು ಶಿಸ್ತು ಸಂಯಮವನ್ನು ಪಾಲಿಸಬೇಕೆಂದು ಕರೆ ನೀಡಿದರು.

ಆರಂಭದಲ್ಲಿ ಯೂನಿಯನ್‌ನ ಕಾರ್ಯದರ್ಶಿ ರಮೇಶ್ ಮೆಂಡನ್ ಸ್ವಾಗತಿಸಿ ಸಭೆಯ ಉದ್ದೇಶವನ್ನು ವಿವರಿಸಿದರು. ಕೊನೆಗೆ ಸಹ ಕಾರ್ಯದರ್ಶಿ ಚಂದ್ರ ಶೇಖರ ಸೇರಿಗಾರ ವಂದನಾರ್ಪಣೆ ಮಾಡಿದರು.

ಲೋಕ ಸಂಚಾರ

-- ಶರತ್ ಚಂದ್ರ

ಶೆವರ್‌ನಾದ್‌ಝೆ ಗದ್ದುಗೆ ಉಳಿಸಲು ಮಾಸ್ಕೊಗೆ ಶರಣು

ಸೋವಿಯೆತ್ ಒಕ್ಕೂಟ ಒಡೆದವನಿಂದ ಜಾರ್ಜಿಯ ಉಳಿಸಲು ಮೊರೆ!

ಶೆವರ್‌ನಾದ್‌ಝೆ ಸೋವಿಯೆತ್ ಒಕ್ಕೂಟದ ಕೊನೆಯ ವಿದೇಶಮಂತ್ರಿಯಾಗಿದ್ದಾತ. ಆತನನ್ನು ಅಮೇರಿಕನ್ನರು 'ಮಾಸ್ಕೋದಲ್ಲಿ ನಮ್ಮವ' ಎನ್ನುತ್ತಿದ್ದರಂತೆ. ಕೊಲ್ಲಿ ಬಿಕ್ಕಟ್ಟು ಹಾಗೂ ಇತರ ಪ್ರಮುಖ ಅಂತರ್‍ರಾಷ್ಟ್ರೀಯ ವಿಚಾರಗಳಲ್ಲಿ ಸೋವಿಯೆತ್ ಒಕ್ಕೂಟವನ್ನು ಅಮೇರಿಕದ ಬಾಲಂಗೋಚಿ ಮಾಡಿದ ವಿದೇಶಿ ನೀತಿಯ ತಂದೆ ಈತ. ಸೋವಿಯೆತ್ ಒಕ್ಕೂಟವನ್ನು ಜಗತ್ತಿನ (ಅದರಲ್ಲೂ ಮೂರನೇ ಜಗತ್ತಿನ) ಕಣ್ಣಲ್ಲಿ ನಿರ್ವೀರ್ಯಗೊಳಿಸಿ ಅದರ ವಿಘಟನೆಗೆ ನೇರ ಸಹಾಯ ಮಾಡಿದಾತ. ಸೋವಿಯೆತ್ ಒಕ್ಕೂಟ ಒಡೆದು ಹೋದ ನಂತರ ಯಾವುದೇ ಗಾದಿ ಇಲ್ಲದೆ ಜಾರ್ಜಿಯಕ್ಕೆ ಓಡಿ ಹೋದಾತ. ಅಲ್ಲಿ ಚುನಾಯಿತ ಅಧ್ಯಕ್ಷ ಗಮ್‌ಸುಖುರ್ದಿಯವರನ್ನು ಸಶಸ್ತ್ರ ವಿರೋಧಿಗಳು ಅಧಿಕಾರದಿಂದ ಉರುಳಿಸಿದಾಗ ಆ ಗದ್ದುಗೆಯನ್ನು ಆಕ್ರಮಿಸಿಕೊಂಡಾತ. ಇದರಲ್ಲಿ ಆತನಿಗೆ ಪಾಶ್ಚಿಮಾತ್ಯ ನೆರವು ಸಿಕ್ಕಿತಂತೆ. ಇತ್ತೀಚೆಗೆ ಆತನ ಬೇಹುಗಾರಿಕೆ ಪಡೆಯ ಮುಖ್ಯಸ್ಥನ ಜತೆ ಪ್ರಯಾಣ ಮಾಡುತ್ತಿದ್ದ ಒಬ್ಬ ಅಮೇರಿಕನ್ನನ ಕೊಲೆಯಾಯಿತು.ಆತ ಪ್ರಮುಖ ಸಿಐಎ ಏಜೆಂಟನಾಗಿದ್ದನೆಂದು ಆ ಮೇಲೆ ತಿಳಿದುಬಂದಿದೆ. ಇಂತಹ ಕುಖ್ಯಾತಿ ಈತನದು.

ಈಗ ಆ ಗದ್ದುಗೆ ಅಲುಗಾಡುತ್ತಿದೆ. ಜಾರ್ಜಿಯಾದಲ್ಲಿ ಅಬ್‌ಕಾಝಿಯನ್ನರು ಒಂದು ಅಲ್ಪಸಂಖ್ಯಾತ ಗುಂಪು. ಅವರು ಹೆಚ್ಚಾಗಿ ವಾಸಿಸುವ ಪ್ರಾಂತ್ಯದಲ್ಲಿ ಅವರು ಅತಿದೊಡ್ಡ ಅಲ್ಪಸಂಖ್ಯಾತ ಗುಂಪು. ಶೇಕಡಾ 17 ರಷ್ಟು ಇವರು ಮಾಜಿ ಸೊವಿಯೆತ್ ಒಕ್ಕೂಟದ ಎಲ್ಲೆಡೆ ನಡೆಯುತ್ತಿರುವಂತೆ ಸ್ವಾತಂತ್ರ್ಯ ಕೇಳುತ್ತಾ ಸಶಸ್ತ್ರ ಹೋರಾಟದಲ್ಲಿ ತೊಡಗಿದ್ದಾರೆ. ಆ ಪ್ರದೇಶವನ್ನು ಹೆಚ್ಚು ಕಡಿಮೆ ವಶಕ್ಕೆ ತೆಗೆದುಕೊಂಡಿದ್ದಾರೆ. ಜಾರ್ಜಿಯನ್ ಸೈನ್ಯಕ್ಕೂ ಅಬ್‌ಕಾಝಿಯನ್ ದಂಗೆಕೋರರಿಗೂ ಭೀಕರ ಯುದ್ಧ ನಡೆಯುತ್ತಲೇ ಇದೆ. ಜಾರ್ಜಿಯನ್ನರನ್ನು ಈ ಪ್ರದೇಶದಿಂದ ಓಡಿಸಲಾಗುತ್ತಿದೆ. ಸಾವಿರಾರು ಜನ ನಿರಾಶ್ರಿತರಾಗಿ ಬರುತ್ತಿದ್ದಾರೆ.

ಈ ಯುದ್ಧ ಸಾಲದೆಂಬಂತೆ ಮಾಜಿ ಅಧ್ಯಕ್ಷ ಗಮ್‌ಸುಖುರ್ದಿಯರ ನಾಯಕತ್ವದಲ್ಲಿ ಗೆರಿಲ್ಲಾ ಪಡೆಗಳು ದಂಗೆ ಎದ್ದು, ಗೆರಿಲ್ಲಾ ಹೋರಾಟದಲ್ಲಿ ತೊಡಗಿವೆ. ಪಶ್ಚಿಮದ ಪ್ರಾಂತ್ಯವೊಂದನ್ನು ವಿಮೋಚನೆಗೊಳಿಸುವುದರಲ್ಲಿ ಅವರು ತೊಡಗಿದ್ದಾರೆ. ಕಪ್ಪು ಸಮುದ್ರದ ಪ್ರಮುಖ ಬಂದರು ಪಟ್ಟಣವೊಂದನ್ನು ಹಾಗೂ ರಶ್ಯನ್ ಹೆದ್ದಾರಿ ಬರುವ ಇನ್ನೂ ಹಲವು ಪಟ್ಟಣಗಳನ್ನು ವಶಪಡಿಸಿಕೊಳ್ಳುವ ಮೂಲಕ, ಜಾರ್ಜಿಯಾದ ಅಧ್ಯಕ್ಷ ಶೆವರ್‌ನಾದ್‌ಝೆ ಸರ್ಕಾರ ಅಲುಗಾಡತೊಡಗಿದೆ. ಅಧ್ಯಕ್ಷ ಗಮ್‌ಸುಖುರ್ದಿಯರ ಜನಪ್ರಿಯತೆ ದಿನೇ ದಿನೇ ಹೆಚ್ಚುತ್ತಿದೆ.

ತನ್ನ ಗದ್ದುಗೆ ಉಳಿಸಿಕೊಳ್ಳಲು ಶೆವರ್‌ನಾದ್‌ಝೆ ರಶ್ಯನ್ ಸರ್ಕಾರಕ್ಕೆ ಸೈನ್ಯ ಕಳಿಸುವಂತೆ ಮೊರೆ ಹೊಕ್ಕಿದ್ದಾನೆ. ಆದರೆ ರಶ್ಯ ಸೈನ್ಯ ಕಳಿಸಲು ಸ್ಪಷ್ಟವಾಗಿ ನಿರಾಕರಿಸಿದೆ. ತನ್ನದೇ ಸಮಸ್ಯೆಗಳು ಮೈತುಂಬ ಇರುವ ರಶ್ಯನ್ ಸರ್ಕಾರ ಇನ್ನೊಂದು ಗಣರಾಜ್ಯದ ಆಂತರಿಕ ಸಮಸ್ಯೆಗಳಲ್ಲಿ ಮಧ್ಯಪ್ರವೇಶಿಸಲು ತಯಾರಿಲ್ಲ. ಅಲ್ಲದೆ ಸೋವಿಯೆತ್ ಒಕ್ಕೂಟವನ್ನು ಒಡೆದಾತನ ಮೇಲೆ ರಶ್ಯನ್ ಸೈನ್ಯದ ಕೋಪದಿಂದಾಗಿಯೂ ರಶ್ಯನ್ ಸರ್ಕಾರ ನಿರಾಕರಿಸಿರಬಹುದು. ಇಂದಲ್ಲ ನಾಳೆ ಯಾವುದೇ ರೀತಿಯ ಜನಬೆಂಬಲವಿಲ್ಲದೆ ಬರಿಯ ಪಾಶ್ಚಿಮಾತ್ಯರ ಬೆಂಬಲದ ಗೊಂಬೆ ಶೆವರ್‌ನಾದ್‌ಝೆ ಉರುಳುವುದು ಖಚಿತ. ಯೆಲ್ಟ್‌ಸಿನ್ ಇದರಿಂದ ಪಾಠ ಕಲಿಯುವವರೇ.

ಬೆನಜಿರ್ ಪಾಕ್ ಪ್ರಧಾನಿ

ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ನಾಯಕಿ ಬೆನಜಿರ್ ಭುಟ್ಟೋ ಪ್ರಧಾನ ಮಂತ್ರಿಯಾಗಿ ಆಯ್ಕೆಗೊಂಡಿದ್ದಾರೆ. ದೊಡ್ಡ ಸಂಖ್ಯೆಯ ಪಕ್ಷೇತರರು, ಹಾಗೂ ಅಲ್ಪ ಮತದ ವ್ಯತ್ಯಾಸವಿದ್ದರೂ ಪ್ರಧಾನಿಯಾಗಿ ಪಡೆದ ವಿಶ್ವಾಸಮತದಲ್ಲಿ ಬೆನಜಿರ್ ಭುಟ್ಟೊ 49 ಮತಗಳ ಅಂತರದಿಂದ ಪ್ರಧಾನಿಯಾಗಿ ಆಯ್ಕೆಯಾದರು. ಪಕ್ಷೇತರರು ಹಾಗೂ ಅಲ್ಪಸಂಖ್ಯಾತ ಮೀಸಲು ಸೀಟುಗಳ ಸದಸ್ಯರು ಆಕೆಗೆ ದೊಡ್ಡ ಪ್ರಮಾಣದಲ್ಲಿ ಬೆಂಬಲ ಕೊಟ್ಟಿದ್ದು ಕಂಡುಬರುತ್ತದೆ.

ಇದರ ಮೊದಲು ಡೆಪ್ಯುಟಿ ಸ್ಪೀಕರ್, ಸ್ಪೀಕರ್ ಚುನಾವಣೆಗಳಲ್ಲಿ ಪಿಪಿಪಿ ಅಭ್ಯರ್ಥಿಗಳು ಬಹುಮತಗಳಿಗೆ ಆಯ್ಕೆಯಾಗಿದ್ದರೂ ಪ್ರತಿ ಚುನಾವಣೆಯಲ್ಲೂ ಪಿ.ಪಿ.ಪಿ. ಅಭ್ಯರ್ಥಿಗಳಿಸಿದ ಮತ ಹೆಚ್ಚಾಗುತ್ತಾ ನಡೆದಿತ್ತು. ಸ್ಪೀಕರ್ ಚುನಾವಣೆಯಲ್ಲಿ 16 ಬಹುಮತ ದೊರಕಿದರೆ, ಡೆಪ್ಯುಟಿ ಸ್ಪೀಕರ್ ಚುನಾವಣೆಯಲ್ಲಿ ಅಂತರ 35 ಕ್ಕೇರಿತು. ಈ ಚುನಾವಣೆಗಳ ಮೊದಲು ಪಕ್ಷೇತರರ ಹಾಗೂ ಚಿಕ್ಕ ಪಕ್ಷಗಳ ಸದಸ್ಯರ ಬೆಂಬಲಕ್ಕಾಗಿ ಭಾರಿ 'ಬಿರುಸಿನ ವ್ಯಾಪಾರ' ನಡೆದಿತ್ತು ಎನ್ನಲಾಗಿದೆ.

ಪಾಕಿಸ್ತಾನದ ಅತಿದೊಡ್ಡ ಜನಸಂಖ್ಯೆಯಲ್ಲಿರುವ ರಾಜ್ಯ ಪಂಜಾಬ್‌ನಲ್ಲಿ ಸರ್ಕಾರ ರಚಿಸಲು ನಡೆದ ಹಣಾಹಣೆಯಲ್ಲೂ ಪಿಪಿಪಿ ಅಭ್ಯರ್ಥಿ ಮುಖ್ಯಮಂತ್ರಿಯಾಗಿ ಚುನಾಯಿತರಾಗಿದ್ದಾರೆ. ಈ ರೀತಿ ಪಾಕಿಸ್ತಾನ ಮುಸ್ಲಿಂ ಲೀಗ್ (ನವಾಜ್ ಶರೀಫ್ ಗುಂಪು) ರಾಷ್ಟ್ರಮಟ್ಟದಲ್ಲೂ ಸರ್ಕಾರ ರಚಿಸಲಾಗದೆ, ವಿರೋಧಪಕ್ಷವಾಗಿದೆ.

ಬೆನಜಿರ್ ಹಿಂದಿನ ಪ್ರಧಾನಿಯಾಗಿದ್ದ ಅವಧಿಗಿಂತ ಹೆಚ್ಚಿನ ತಾಳ್ಮೆ, ರಾಜಕೀಯ ಜಾಣ್ಮೆ ಮುತ್ಸದ್ದಿತನ ತೋರಿಸುವ ಅಗತ್ಯ ಇದೆ. ಯಾಕೆಂದರೆ ಇದು ಸಮ್ಮಿಶ್ರ ಸರಕಾರ. ಅಧ್ಯಕ್ಷ, ಸೈನ್ಯ ಹಾಗೂ ಅಮೇರಿಕನ್ ಸರ್ಕಾರದ ತ್ರಿವಳಿಗಳ ಜತೆ ಯಾವುದೇ ಪಾಕಿಸ್ತಾನದ ಪ್ರಧಾನಿ ಉತ್ತಮ ಸಂಬಂಧವಿಟ್ಟುಕೊಂಡಿರಬೇಕು. ಅವರ 'ಕೃಪಾಕಟಾಕ್ಷ'ವಿಲ್ಲದೆ ಪಾಕಿಸ್ತಾನ ಆಳಲು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಪಾಕಿಸ್ತಾನದಲ್ಲಿ ರಾಜಕೀಯ ಭದ್ರತೆ, ಪ್ರಜಾಪ್ರಭುತ್ವ ಸ್ಥಾಪನೆಗೆ ಇದು ನಾಂದಿಯಾಗುವುದೋ ಎಂದು ಕಾದು ನೋಡಬೇಕಾಗಿದೆ. ಪಾಕಿಸ್ತಾನದಲ್ಲಿ ಸುಭದ್ರ ಸರಕಾರ ಭಾರತದ ಹಿತಾಸಕ್ತಿಗೆ ಅನುಗುಣವಾದದ್ದು. ಕಾಶ್ಮೀರ ಹಾಗೂ ಅಣ್ವಸ್ತ್ರಗಳ ಬಗ್ಗೆ ವಿವಾದಗಳನ್ನು ಪರಸ್ಪರ ಮಾತುಕತೆಯಿಂದ ಪರಿಹಾರದತ್ತ ಹೆಜ್ಜೆಯಿಡಲು ಸಾಧ್ಯ

ಚುನಾವಣಾ ಫಲಿತಾಂಶಗಳ ಒಂದು ಸಕಾರಾತ್ಮಕ ಅಂಶವೆಂದರೆ ಪ್ರಮುಖ ಪಕ್ಷಗಳಾಗಿ ಬಂದ ಎರಡೂ ಪಕ್ಷಗಳು. ಮಧ್ಯವರ್ತಿ ಪಕ್ಷಗಳು ಮುಸ್ಲಿಂ ಮೂಲಭೂತವಾದಿ ಬಲಪಂಥೀಯ ಪಕ್ಷಗಳು ಚುನಾವಣೆಯಲ್ಲಿ ಹೆಚ್ಚು ಕಡಿಮೆ ಮೂಲೆ ಗುಂಪಾಗಿವೆ.

ಸೋಮಾಲಿಯಾ ಆಕ್ರಮಣದ ವಿರುದ್ಧ ಅಮೇರಿಕದಲ್ಲಿ ಪ್ರದರ್ಶನ

'ಸೋಮಾಲಿಯಾದಿಂದ ವಿಶ್ವಸಂಸ್ಥೆ/ ಅಮೇರಿಕಾ ತೊಲಗಿರಿ' ಇದು ಸೋಮಾಲಿಯನ್ನರ ಘೋಷಣೆ ಮಾತ್ರವಲ್ಲ ನ್ಯೂಯಾರ್ಕ್‌ನ ಅಂತರ್‍ರಾಷ್ಟ್ರೀಯ ಕಾರ್ಯಾಚರಣೆ ಕೇಂದ್ರ ಎಂಬ ಸಂಘಟನೆ ಅಮೇರಿಕದ 30 ನಗರಗಳಲ್ಲಿ ಪ್ರತಿಭಟನಾ ಪ್ರದರ್ಶನದ ಪ್ರಧಾನ ಘೋಷಣೆ ಇದಾಗಿರುತ್ತದೆ. ಈ ಪ್ರದರ್ಶನವನ್ನು ಅಕ್ಟೋಬರ್ 29, 30 ರಂದು ಏರ್ಪಡಿಸಲಾಗಿದೆ.

ಈಗಾಗಲೇ ಸೋಮಾಲಿಯಾದಲ್ಲಿ ಅಮೇರಿಕ ಯುದ್ಧ ಹೂಡುವುದರ ಬಗ್ಗೆ ಸಾರ್ವತ್ರಿಕ ಅತೃಪ್ತಿ ವ್ಯಕ್ತವಾಗಿದೆ. ವಿಶ್ವಸಂಸ್ಥೆ/ ಅಮೇರಿಕನ್ ಪಡೆಗಳ ಕ್ರೌರ್ಯ ಈ ಕಾರ್ಯಾಚರಣೆ 'ಮಾನವೀಯ' ಎಂಬ ಬೊಗಳೆಯನ್ನು ಈಗಾಗಲೇ ಬಯಲು ಮಾಡಿದೆ. ಸೊಮಾಲಿಯಾದ ಅತ್ಯಂತ ಕ್ರೂರ ಸರ್ವಾಧಿಕಾರಿ ಸಿಯಾರ್ ಬಾರೆಯನ್ನು ಬೆಂಬಲಿಸುತ್ತಿದ್ದ ಅಮೇರಿಕ ಸೊಮಾಲಿಯಾದಲ್ಲಿ ಆ ಸರ್ವಾಧಿಕಾರಿಯ ಪದಚ್ಯುತಿ ನಂತರ ಆದ ಅರಾಜಕತೆಗೆ ನೇರ ಕಾರಣ. ಈ ಅರಾಜಕತೆ ಬಳಸಿ ಸೋಮಾಲಿಯಾದಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸಿ ಪುನಃ ವಸಾಹತು ಆಗಿ ಪರಿವರ್ತಿಸುವುದು ಅಮೇರಿಕನ್ ಸರ್ಕಾರದ ನಿಜವಾದ ಉದ್ದೇಶ. ಇದು ಅಷ್ಟು ಸುಲಭ ಸಾಧ್ಯವಲ್ಲ ಎಂದು ಸೊಮಾಲಿಯನ್ನರು ಈಗಾಗಲೇ ತೋರಿಸಿ ಕೊಟ್ಟಿದ್ದಾರೆ. ಸೊಮಾಲಿಯಾ ಕೊಲ್ಲಿದೇಶಗಳಿಗೆ ಹೆಬ್ಬಾಗಿಲು ಇದ್ದಹಾಗೆ. ಆದ್ದರಿಂದ ಅಮೇರಿಕ ಹಾಗೂ ಇತರ ಸಾಮ್ರಾಜ್ಯಶಾಹಿ ದೇಶಗಳ ಆಸಕ್ತಿ. ಈ ಆಕ್ರಮಣವನ್ನು ಪ್ರತಿಭಟಿಸಲು ಬಲವಾದ ಚಳುವಳಿ ರೂಪಿಸಬೇಕು ಎಂದು ಐ.ಎ.ಸಿ. ಪ್ರಕಟಣೆ ಹೇಳಿದೆ. ಇಂದು ಸೋಮಾಲಿಯಾಕ್ಕೆ ಆದದ್ದು, ಇಡೀ ಆಫ್ರಿಕಾಕ್ಕೆ ಮೂರನೇ ಜಗತ್ತಿನ ದೇಶಗಳಿಗೆ ಆಗಲಿದೆ. ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಅಪಾಯ ಎಂದು ಐ.ಎ.ಸಿ. ಮನವಿ ಮಾಡಿದೆ.

ಜರ್ಮನ್ ಕಮ್ಯುನಿಸ್ಟರ ಬೇಟೆ

ಜರ್ಮನಿಯ ಸರ್ಕಾರ ಮಾಜಿ ಪೂರ್ವ ಜರ್ಮನ್ ಸಮಾಜವಾದಿ ಸರ್ಕಾರ, ಹಾಗೂ ಕಮ್ಯುನಿಸ್ಟ್ ಪಕ್ಷದ ಪ್ರಮುಖರ ಬಗ್ಗೆ 'ಅಪರಾಧಿಗಳು' 'ರಾಕ್ಷಸೀಕೃತ್ಯ ಮಾಡಿದವರು' ಎಂದೆಲ್ಲಾ ಪ್ರಚಾರ ಮಾಡುವುದಲ್ಲದೆ, ಅವರನ್ನು 'ಕಾನೂನು' ರೀತ್ಯ ಶಿಕ್ಷಿಸಲು ಪ್ರಯತ್ನಗಳನ್ನು ಮಾಡುತ್ತಿದೆ.

ಪೂರ್ವ ಜರ್ಮನ್ ಸರ್ಕಾರದ ಮುಖ್ಯಸ್ಥ ಹಾಗೂ ಹಿರಿಯ ಕಮ್ಯುನಿಸ್ಟ್ ನಾಯಕ ಎರಿಕ್ ಹೊನೆ ಕರ್‌ರನ್ನೂ ಇವರು ಬಿಟ್ಟಿಲ್ಲ. ಅವರ ಮೇಲೆ 'ಬರ್ಲಿನ್ ಗೋಡೆ' ದಾಟಿ ಪಶ್ಚಿಮಕ್ಕೆ ಓಡಿಹೋಗುತ್ತಿದ್ದವರ ಮೇಲೆ 'ಕಂಡಲ್ಲಿ ಗುಂಡು' ಹಾರಿಸುವ ಆಜ್ಞೆಕೊಟ್ಟು 'ಸಾವಿರಾರು' ನಾಗರಿಕರ ಸಾವಿಗೆ ಕಾರಣ ಎಂದು ಅವರ ಮೇಲೆ ಆಪಾದನೆ ಹೊರಿಸಲಾಗಿದೆ. ಆದರೆ ಬರ್ಲಿನ್ ಕೋರ್ಟ್ ಈ ಆಪಾದನೆಗಳನ್ನು ತಳ್ಳಿಹಾಕಿತ್ತು. ಅನಾರೋಗ್ಯ ಹಾಗೂ ವಯಸ್ಸಿನ ಕಾರಣದಿಂದ ಈ ಕೇಸ್‌ಗಳನ್ನು ಹಿಂತೆಗೆದುಕೊಳ್ಳಲಾಯಿತು ಎನ್ನಲಾಗಿದೆ. ಎರಿಕ್ ಹೊನೆಕರ್ ಈಗ ಚಿಲಿಯ ರಾಜಧಾನಿ ಸ್ಯಾಂಟಿಯಾಗೋದಲ್ಲಿ ವಾಸವಾಗಿದ್ದಾರೆ.

ಅಲೆಂದೆ ಸರ್ಕಾರದ ಪತನದ ನಂತರ ಪಿನೋಚೆ ಮಿಲಿಟರಿ ಸರ್ವಾಧಿಕಾರದ ದಮನದಿಂದ ದೇಶಬಿಟ್ಟು ಹೋದ ದೇಶಪ್ರೇಮಿಗಳು, ಸೋಶಲಿಸ್ಟರು ಹಾಗೂ ಕಮ್ಯುನಿಸ್ಟರಿಗೆ ಪೂರ್ವ ಜರ್ಮನಿಯಲ್ಲಿ ಆಶ್ರಯ ನೀಡಲಾಗಿತ್ತು ಹೊನೆಕರ್ ಸರ್ಕಾರದ ವತಿಯಿಂದ. ಆದ್ದರಿಂದ ಚಿಲಿಯನ್ ಜನತೆ ಅವರನ್ನು ಅತ್ಯಂತ ಗೌರವದಿಂದ ನಡೆಸಿಕೊಳ್ಳುತ್ತಿದ್ದಾರೆ.

ಅವರಲ್ಲದೆ ಮಾಜಿ ಪೂರ್ವಜರ್ಮನ್ ಬೇಹುಗಾರಿಕೆ ಸಂಸ್ಥೆಯ ಮುಖ್ಯಸ್ಥ ಮಾರ್ಕುಸ್ ಓಲ್ಫ್ ಮೇಲೂ 'ದೇಶದ್ರೋಹ'ದ ಆಪಾದನೆ ಹಾಕಲಾಗಿದೆ. ಇದೂ ರಾಜಕೀಯ ದುರುದ್ದೇಶದ ಆಪಾದನೆ ಅಲ್ಲದೆ ಬೇರೆ ಅಲ್ಲ. ಅವರ ಮೇಲೆ ಬೇಹುಗಾರಿಕೆ ನಡೆಸುವಾಗ ಸಲ್ಲದ ವಿಧಾನಗಳನ್ನು ಬಳಸಲಾಯಿತು ಎಂದು ಆಪಾದಿಸಲಾಗಿದೆ. ಎಲ್ಲಾ ಬೇಹುಗಾರಿಕೆ ಸಂಸ್ಥೆಗಳು ಒಂದೇ ರೀತಿಯ ವೈರಿಗಳ ವಿರುದ್ಧ ವಿಧಾನಗಳನ್ನು ಬಳಸುತ್ತವೆ. ತಾನು ಸೇವೆ ಸಲ್ಲಿಸುತ್ತಿದ್ದ ಸರ್ಕಾರ, ದೇಶ ಇಲ್ಲವಾದ್ದರಿಂದ ಅದು ಯಾವುದೇ ರೀತಿಯಲ್ಲಿ 'ದೇಶದ್ರೋಹ' ಎನಿಸಿಕೊಳ್ಳುವುದಿಲ್ಲ ಎಂದು ಮಾರ್ಕುಸ್ ವಕೀಲರು ವಾದ ಹೂಡಿದ್ದಾರೆ. ಆದರೆ ರಾಜಕೀಯ ದುರುದ್ದೇಶ ಪೂರಿತ ಈ ಕೇಸು 'ವಿಚಾರಣೆ' ನಡೆಸಿ ಮಾರ್ಕುಸ್ ಅವರನ್ನು ಆಪಾದಿತರೆಂದು ಶಿಕ್ಷೆ ಕೊಡುವ ಸಂಭವ ಹೆಚ್ಚು.

ಕೇಂದ್ರ ಸರಕಾರಕ್ಕೆ ಸುರ್ಜಿತ್ ಎಚ್ಚರಿಕೆ.......

ಪುಟ 1ರಿಂದ

ಭದ್ರತಾಪಡೆಗಳು, ಗುಪ್ತಚರ ಪಡೆಗಳು ಏನು ಮಾಡುತ್ತಿದ್ದವು ಎಂಬ ಪ್ರಶ್ನೆಗಳಿಗೆ ಯಾರಿದಂದಲೂ ಸಮಾಧಾನಕರ ಉತ್ತರ ದೊರೆತಿಲ್ಲ ಎಂಬ ಅಂಶದತ್ತ ಸುರ್ಜಿತ್ ಗಮನ ಸೆಳೆದರು.

ಆಗಸ್ಟ್ 1992 ರಲ್ಲಿ ಕಾಂಗ್ರೆಸ್(ಐ) ಸೇರಿದಂತೆ ಕಾಶ್ಮೀರದ ಎಲ್ಲಾ ರಾಜಕೀಯ ಶಕ್ತಿಗಳು ಪರಸ್ಪರ ಸಮಾಲೋಚನೆ, ಚರ್ಚೆ ನಡೆಸಿ ಕಾಶ್ಮೀರಿ ಜನತೆಯ ಮನಸ್ಸಿನಲ್ಲಿ ಈಗ ಒಂದು ಬದಲಾವಣೆ ಕಂಡು ಬಂದಿದೆ, ಉಗ್ರಗಾಮಿಗಳ ಚಟುವಟಿಕೆಗಳಿಂದ, ದುಡ್ಡು ಕಿತ್ತುಕೊಳ್ಳುವ ಮಹಿಳೆಯರ ಮೇಲೆ ಕೈ ಮಾಡುವ ಅವರ ಕ್ರಮಗಳಿಂದ ಬೇಸತ್ತಿದ್ದಾರೆ, ಸರಕಾರ ಈ ಅವಕಾಶವನ್ನು ಬಳಸಿಕೊಳ್ಳಬೇಕು, ಇದಕ್ಕಾಗಿ ಒಂದು ರಾಜಕೀಯ ಇತ್ಯರ್ಥಕ್ಕೆ ಮುಂದಾಗಬೇಕು ಎಂದು ತೀರ್ಮಾನಿಸಿ ಒಂದು ಸರ್ವಪಕ್ಷನಿಯೋಗ ಪ್ರಧಾನಿಗಳನ್ನು ಭೇಟಿಯಾಗಿ ಮೂರು ಅಂಶಗ[illegible] ಪ್ರಸ್ತಾಪವನ್ನು ಮುಂದಿಟ್ಟಿತು. [illegible]ತ್ರಿಗಳೂ ಆಗ ಇದಕ್ಕೆ ಸಕಾರಾತ್[illegible]ದಿಸಿದ್ದರೂ ಈಗ 14 ತಿಂಗಳು [illegible]ದರೂ ಏನೂ ಕ್ರಮ ಕೈಗೊಳ್ಳಲಿಲ್ಲ. ಪ[illegible] ಸುಧಾರಿಸುತ್ತಿದೆ ಎಂದು ಆಗಾಗ [illegible]ಗಳನ್ನು ಕೊಡಲಾಗುತ್ತಿತ್ತಷ್ಟೆ ಎಂದ ಸುರ್ಜಿತ್ ಈ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ" ಪತ್ರಿಕೆಯ ತಮ್ಮ ಲೇಖನದಲ್ಲಿ ನೆನಪಿಸಿದ್ದಾರೆ.

ಈಗ ಹಜರತ್‌ಬಲ್ ದರ್ಗಾವನ್ನು ಸುತ್ತುವರಿದ ಕ್ರಮಕ್ಕೆ ಕಾಶ್ಮೀರ ಕಣಿವೆಯಲ್ಲಿ ಕರ್ಫ್ಯೂವನ್ನು ಕೂಡಾ ಉಲ್ಲಂಘಿಸಿ ಭಾರೀ ಪ್ರತಿಭಟನೆಗಳು ವ್ಯಕ್ತಗೊಂಡಿವೆ. ಜಮ್ಮು ಪ್ರದೇಶದಲ್ಲಿ ಕೂಡಾ ಪ್ರತಿಭಟನೆ ಕಂಡುಬಂದಿದೆ.

ಪರಿಸ್ಥಿತಿ ಇನ್ನಷ್ಟು ಹದಗೆಡುವ ಅಪಾಯವಿದೆ. ವಿದ್ಯುತ್ ಮತ್ತು ನೀರು ಪೂರೈಕೆಯನ್ನು ನಿಲ್ಲಿಸುವ ಕ್ರಮ ಪರಿಸ್ಥಿತಿಯನ್ನು ಸುಧಾರಿಸಲಾರದು. ಸರ್ಕಾರ ಬುದ್ಧಿವಂತಿಕೆಯಿಂದ, ಸಂಯಮದಿಂದ ಮುಂದುವರಿಯಬೇಕು, ಯಾವುದೇ ಪ್ರಚೋದನೆಗೊಳಗಾಗಿ ಆತುರದ ಕಾರ್ಯಾಚರಣೆಗಿಳಿಯಬಾರದು, ಉಗ್ರಗಾಮಿಗಳು ಜನಬೆಂಬಲ ಗಿಟ್ಟಿಸುವ ಅವಕಾಶ ಮಾಡಿಕೊಡಬಾರದು ಎಂದು ಎಚ್ಚರಿಸಿರುವ ಸುರ್ಜಿತ್ ಇದು ಕೇಂದ್ರ ಸರ್ಕಾರದ ಮುಖಂಡತ್ವಕ್ಕೆ ಒಂದು ಕಠಿಣ ಪರೀಕ್ಷೆ, ಇದನ್ನು ಹೇಗೆ ಅವರು ಎದುರಿಸುತ್ತಾರೆ ಎಂಬುದರ ಮೇಲೆ ದೇಶದ ಭವಿಷ್ಯವೇ ನಿಂತಿದೆ ಎಂದಿದ್ದಾರೆ.

ಇತಿಹಾಸದ ಪುಟಗಳಿಂದ

ಪುಟ 2ರಿಂದ

ಭೂತವಾಗಿ ಈ ಧೋರಣೆ ಸರಿಯಾಗಿದ್ದರೂ ಮಾವೋ ವಾದಿಗಳ ನಿಲುವು "ಎಡತೀವ್ರವಾದ" ದ ಕಡೆ ಇದೆಯೆಂದು ಲೂ-ಡೆಂಗ್‌ರ ಟೀಕೆಯಾಗಿತ್ತು. ಇದೇ ಈ ಎರಡೂ ಗುಂಪಿನ ಭಿನ್ನಮತಕ್ಕೆ ಕಾರಣವಾಗಿತ್ತು.

ಆದರೆ ಮಾವೋ ನಿಧನರಾಗುವ ತನಕವೂ ಮಾವೋ ಪರವಾದಿಗಳಿಗೇ ಅಲ್ಲಿ ಬಲವಿದ್ದದ್ದು. ಇವರು ಸತ್ತನಂತರ ಚೌ-ಎನ್-ಲಾಯ್‌ರವರ ಸಹಾಯದಿಂದ ಡೆಂಗ್-ಜಿಯೋ ಪಿಂಗ್ ಮುಂದಾಳತ್ವದಲ್ಲಿ ಚೀನೀ ಕ್ರಾಂತಿಯ ಅನುಭವ ಅದಕ್ಕೆ ಮಾವೋ ಕೊಟ್ಟ ಕೊಡುಗೆ ಆಧಾರದಲ್ಲಿ ವಿಮರ್ಶೆ ಮತ್ತು ಸ್ವಯಂ ವಿಮರ್ಶೆಯನ್ನು ಪರಾಮರ್ಶಿಸಲಾಯ್ತು. ಇಂತಹ ಪುನರ್ ಪರಾಮರ್ಶೆಯಿಂದ ಚೀನಾದ ಕ್ರಾಂತಿಗೆ ಮಾವೋ ಕೊಟ್ಟ ಕಾಣಿಕೆಯನ್ನು ಎತ್ತಿ ಹಿಡಿಯಲಾಯ್ತು. ಮಾರ್ಕ್ಸ್‌ವಾದ-ಲೆನಿನ್‌ವಾದದ ಜೊತೆಗೇನೇ ಮಾವೋ ವಾದವನ್ನು ಇಂದು ಚೀನೀ ಕಮ್ಯುನಿಸ್ಟ್ ಪಕ್ಷ ಎತ್ತಿ ಹಿಡಿಯುತ್ತದೆ. ಆ ಸಂದರ್ಭದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಕಾಲಘಟ್ಟದಲ್ಲಿ ಉಜ್ವಲವಾದ ನಾಯಕತ್ವವನ್ನೂ ಕೊಟ್ಟ ಮಾವೋ ಸಮಾಜವಾದಿ ವ್ಯವಸ್ಥೆಯನ್ನು ನಿರ್ಮಿಸುವ ಕಾಲಘಟ್ಟದಲ್ಲಿ ಎಡ ಪಂಥವಾದದ ಧೋರಣೆಗೆ ಬಲಿಯಾಗಿದ್ದರೆಂಬುದು ಪುನರ್ ವಿಮರ್ಶೆಯಲ್ಲಿ ಎದ್ದು ಕಾಣುತ್ತದೆ. ಇಂತಹ ವ್ಯತ್ಯಾಸವನ್ನು ಮರೆತು ಮಾವೋರವರನ್ನು ನೋಡುವುದಾದರೆ ಚೀನಾದ ಕಮ್ಯುನಿಸ್ಟ್ ಚಳುವಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದಗಳಂತೆ ಮಾವೋವಾದವೂ ಸಹ ಸಾಧಕವಾಗಿ ಕಾಣುತ್ತದೆ.

ಇದೇ ರೀತಿಯಲ್ಲಿ (ಮಾವೋರವರನ್ನು ವಿಮರ್ಶಿಸಿದ ರೀತಿಯಲ್ಲಿ) ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಅಧಿವೇಶನದಲ್ಲಿ ಸ್ಟಾಲಿನ್ ಬಗ್ಗೆ, ಪ್ರಪಂಚದ ಬೇರೆ ಕಮ್ಯುನಿಸ್ಟ್ ಪಕ್ಷಗಳಂತೆ ಭಾರತದ ಕಮ್ಯುನಿಸ್ಟ್ ಪಕ್ಷವು ವಿಮರ್ಶೆಯನ್ನು ಮಾಡಿತು. ಸ್ಟಾಲಿನ್ ಮಾಡಿದ ತಪ್ಪುಗಳನ್ನು 20ನೇ ಸೋವಿಯತ್ ಕಾಂಗ್ರೆಸ್ ಎತ್ತಿ ತೋರಿಸಿದೆ. ಈ ವ್ಯತ್ಯಾಸಗಳಿಗೆ ಒಂದು ಕಾರಣವಿದೆ. ಸ್ಟಾಲಿನ್ ನಾಯಕತ್ವದಲ್ಲೇ ಸೋವಿಯತ್ ಯೂನಿಯನ್ ಪ್ರಪಂಚದ ಕಮ್ಯುನಿಸ್ಟ್ ಚಳುವಳಿ ಬೆಳೆದು ಬಂದದ್ದು. ಇದನ್ನು ಮರೆತು ಸ್ಟಾಲಿನ್ ಮಾಡಿದ ತಪ್ಪುಗಳನ್ನೇ ದೊಡ್ಡದಾಗಿ ಎತ್ತಿ ತೋರಿಸುವ ಕೆಲಸವನ್ನು 20ನೇ ಅಧಿವೇಶನ ಮಾಡಿದೆ ಎಂದು ಭಾರತದ ಕಮ್ಯುನಿಸ್ಟ್ ಪಕ್ಷ ಕೇಂದ್ರ ಸಮಿತಿ ಅಂದಾಜು ಮಾಡಿತು. ಚೀನಿ ಪಕ್ಷದ 8ನೇ ಅಧಿವೇಶನವು ಸ್ಟಾಲಿನ್‌ನ ನಕಾರಾತ್ಮಕ ಅಂಶಗಳ ಬಗ್ಗೆ ಸೋವಿಯತ್‌ನ 20ನೇ ಅಧಿವೇಶನದಲ್ಲಿ ಮಾಡಿದ ಅಭಿಪ್ರಾಯವನ್ನೇ ಬೆಂಬಲಿಸಿ, ಅಭಿಪ್ರಾಯಪಟ್ಟಿತು. ಈ ನಕಾರಾತ್ಮಕ ಅಂಶಗಳ ಆಧಾರದಲ್ಲಿ ಸುಧಾರಣಾವಾದದ ಹಾದಿಯನ್ನು ಸೋವಿಯತ್ ಪಕ್ಷ ಹಿಡಿದಿದೆಯೆಂದು ಚೈನಾ ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಟ್ಟಿತು. ಇದು 1960 ರಲ್ಲಿ ನಡೆದ 81 ದೇಶಗಳ ಕಮ್ಯುನಿಸ್ಟ್ ಪಕ್ಷಗಳ ವಿಶ್ವ ಸಮ್ಮೇಳನದಲ್ಲಿ ಚೀನೀ ಪಕ್ಷದ ತಂಡದ ನಾಯಕರಾಗಿ ಡೆಂಗ್- ಜಿಯೋ-ಪಿಂಗ್ ಮಾಡಿದ ಭಾಷಣದಲ್ಲಿದ್ದಿತು.

ಸಂಗ್ರಹ-ಭಾಷಾನುವಾದ

ಇ.ಕೆ.ಎಸ್. ರಾಜನ್
ಪ್ರಕಾಶ್. ಕೆ

KRNM/BGS-405 MAG(2) PRB DECR 319-78/79

ಬಿಜೆಪಿಯನ್ನು ಸೋಲಿಸಿ, ಕಾಂಗ್ರೆಸ್(ಐ)ನ್ನು ದೂರ ಮಾಡಿ

ಉತ್ತರದ ಐದು ರಾಜ್ಯಗಳ ಮತದಾರರಿಗೆ ಸಿಪಿಐ(ಎಂ) ಮನವಿ


ಉತ್ತರ ಭಾರತದ ಐದು ರಾಜ್ಯಗಳಲ್ಲಿ ಮುಂಬರುವ ಚುನಾವಣೆಗಳು ಸಾಧಾರಣಾ ಚುನಾವಣೆಗಳಲ್ಲ, ಅವು ಬಿಜೆಪಿ ರಾಜ್ಯ ಸರಕಾರಗಳ ಕೆಲಸದ ಬಗ್ಗೆ, ಬಿಜೆಪಿ ನಡೆಸಿರುವ ರಾಜಕೀಯದ ಸ್ವರೂಪದ ಬಗ್ಗೆ ಬರಲಿರುವ ತೀರ್ಪು. ಕಾಂಗ್ರೆಸ್(ಐ) ಕೇಂದ್ರಸರಕಾರದ ನೀತಿಗಳು ಹಾಗೂ ಅದು ಉಂಟು ಮಾಡಿರುವ ತೊಂದರೆಗಳ ಬಗ್ಗೆ ತೀರ್ಪು ನೀಡುವ ಅವಕಾಶ ಕೂಡಾ ಎಂದು ಈ ರಾಜ್ಯಗಳ ಮತದಾರರಿಗೆ ಸಿಪಿಐ(ಎಂ), ಎಡಪಕ್ಷಗಳು ಹಾಗೂ ಜಾತ್ಯಾತೀತ ವಿರೋಧ ಪಕ್ಷಗಳಿಗೆ ಮತ ನೀಡಲು ಸಿಪಿಐ(ಎಂ) ಕೇಂದ್ರ ಸಮಿತಿ ಮನವಿ ಮಾಡಿದೆ.

ಈ ರಾಜ್ಯಗಳಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದೆಂದರೆ ದೇಶಕ್ಕೆ ವಿಪತ್ತು ಎಂದು ಆ ಪಕ್ಷ ಅಯೋಧ್ಯೆಯ ಮಸೀದಿ ಕಟ್ಟಡವನ್ನು ಧ್ವಂಸ ಮಾಡುವಲ್ಲಿ, ನಂತರದ ದಂಗೆಗಳಲ್ಲಿ ಅದರ ಪಾತ್ರವನ್ನು ವಿವರಿಸುತ್ತಾ ಮನವಿ ಹೇಳಿದೆ. "ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವುದೆಂದರೆ ಕೋಮು ದ್ವೇಷ, ದಂಗೆಗಳು, ಶಾಂತಿ-ಸಾಮಾನ್ಯ ಜೀವನಕ್ಕೆ ಅಡ್ಡಿ. ರಾಷ್ಟ್ರೀಯ ಐಕ್ಯತೆಗೆ ಅಪಾಯ; ಬಹುಸಂಖ್ಯಾತ ಕೋಮುವಾದಕ್ಕೆ ಕುಮ್ಮಕ್ಕು, ಭಾರತವನ್ನು ಇಂತಹ ದುರವಸ್ಥೆಯಿಂದ ರಕ್ಷಿಸದೇಕು" ಎಂದು ಸಿಪಿಐ(ಎಂ) ಕಳಕಳಿಯಿಂದ ಹೇಳಿದೆ. ಬಿಜೆಪಿ ರಾಜ್ಯ ಸರಕಾರಗಳು ನರಸಿಂಹ ರಾವ್ ಸರಕಾರದ ಆರ್ಥಿಕ ನೀತಿಗಳನ್ನು ಜ್ಯಾರಿಗೆ ತಂದಂತವುಗಳು, ಕಾಂಗ್ರೆಸ್(ಐ) ಪ್ರತೀ ಹಂತದಲ್ಲೂ ರಾಜಿ ಮಾಡಿಕೊಂಡು, ತಲೆಬಾಗಿಸಿ ಕೊನೆಗೆ ಅಯೋಧ್ಯೆಯ ಸ್ಮಾರಕವನ್ನು ಕಾಪಾಡುವ ಜಾತ್ಯಾತೀತತೆಯನ್ನು ರಕ್ಷಿಸುವ ವಚನವನ್ನು ಪಾಲಿಸದೇ ಹೋಯಿತು ಎಂದು ಮನವಿ ನೆನಪಿಸಿದೆ.

"ಕಾಂಗ್ರೆಸ್‌ಗೆ ಜನಗಳ ದೆಂಬಲ ಕೇಳುವ ಹಕ್ಕೇ ಇಲ್ಲ. ಜಾತ್ಯಾತೀತತೆಯನ್ನು ದೃಢವಾಗಿ ರಕ್ಷಿಸಲಾರದ, ಜನಗಳ ಬದುಕಿಗೆ ತೊಂದರೆಯುಂಟು ಮಾಡುವ ನೀತಿಗಳ ಪಕ್ಷ ಅದು" ಎಂದು ನರಸಿಂಹರಾವ್ ಸರಕಾರದ ಆರ್ಥಿಕ ನೀತಿಗಳನ್ನು, ಪ್ರಧಾನ ಮಂತ್ರಿಗಳನ್ನು ಬಿಡದ ಭ್ರಷ್ಟಾಚಾರದ ಹಗರಣಗಳನ್ನು ನೆನಪಿಸುತ್ತಾ ಸಿಪಿಐ(ಎಂ) ಮನವಿ ಹೇಳಿದೆ.

ಸಿಪಿಐ(ಎಂ) ನಿರಂತರವಾಗಿ ಜನಗಳ ನಡುವೆ ಕೆಲಸ ಮಾಡುತ್ತಾ ಆರ್ಥಿಕ ನೀತಿಗಳ ವಿರುದ್ಧ ಹೋರಾಟ ನಡೆಸಿ ಕೋಮುವಾದಿ ಅಪಾಯವನ್ನು ಎದುರಿಸಲು ಎಲ್ಲಾ ವಿರೋಧಿ ಜಾತ್ಯಾತೀತ ಪಕ್ಷಗಳನ್ನು ಒಂದುಗೂಡಿಸಲು ಪ್ರಯತ್ನಿಸಿದೆ. ಈ ಪ್ರಯತ್ನದಲ್ಲಿ ಪೂರ್ಣ ಯಶಸ್ಸು ದೊರೆತಿರದಿದ್ದರೂ ಆ ಹೋರಾಟವನ್ನು ಪಕ್ಷ ಮುಂದುವರೆಸುತ್ತದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ ಈಗಿನ ಕಾಲಘಟ್ಟದಲ್ಲಿ ಎಡ ಶಕ್ತಿಗಳನ್ನು ಬಲಪಡಿಸುವುದು ಅತ್ಯಗತ್ಯ ಎಂದಿದೆ.

"ಸಿಪಿಐ(ಎಂ) ಮತ್ತು ಎಡ ಅಭ್ಯರ್ಥಿಗಳಿಗೆ ಮತ ನೀಡುವುದೆಂದರೆ ವಿಧಾನಸಭೆಗಳಲ್ಲಿ ಜನಗಳ ಹಿತಾಸಕ್ತಿಗಳಿಗೆ ನಿರಂತರ ದನಿ ನೀಡಲು ಅವಕಾಶ ಮಾಡಿಕೊಟ್ಟಂತೆ; ಜಾತ್ಯಾತೀತತೆ, ರಾಷ್ಟ್ರೀಯ ಐಕ್ಯತೆ, ಸಾಮಾಜಿಕ ನ್ಯಾಯ ಹಾಗೂ ಮಹಿಳಾ ಸಮಾನತೆಗೆ ಬದ್ಧರಾದ ಚುನಾಯಿತ ಪ್ರತಿನಿಧಿಗಳನ್ನು ಕಳಿಸಿದಂತೆ. ಅದರರ್ಥ ಬಿಜೆಪಿಯನ್ನು ಸೋಲಿಸಲು, ಕೇಂದ್ರದ ಜನ-ವಿರೋಧಿ ಧೋರಣೆಗಳ ವಿರುದ್ಧ ದನಿಯೆತ್ತುವ ಒಂದು ಶಕ್ತಿಯನ್ನು ಆರಿಸಲಾಗಿದೆ ಎಂದು." ಹೀಗೆ ವರ್ಣಿಸಿರುವ ಮನವಿ ಸಿಪಿಐ(ಎಂ) ಅಭ್ಯರ್ಥಿಗಳು ಸ್ಪರ್ಧಿಸುವಲ್ಲಿ ಸಿಪಿಐ(ಎಂ)ಗೆ ಉಳಿದೆಡೆ ಸಿಪಿಐ ಹಾಗೂ ಜಾತ್ಯಾತೀತ ವಿರೋಧ ಪಕ್ಷಗಳಿಗೆ ಮತ ನಿಡಬೇಕೆಂದು ಕೇಳಿಕೊಂಡಿದೆ.



ಮಹಿಳೆಯರ ಮಾನಭಂಗಕ್ಕೆ ಮುಕ್ತ ಅವಕಾಶ ನೀಡುವ ತೀರ್ಪು

ಸುಪ್ರೀ ಕೋರ್ಟ್ ತೀರ್ಪಿನ ಬಗ್ಗೆ ಮಹಿಳಾ ಸಂಘಟನೆಯ ಪ್ರತಿಭಟನೆ

ಕರ್ನಾಟಕ ಉಚ್ಚ ನ್ಯಾಯಾಲಯ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ ಇಬ್ಬರು ಅಪರಾಧಿಗಳಿಗೆ ವಿಧಿಸಿದ ಏಳು ವರ್ಷಗಳ ಶಿಕ್ಷೆಯನ್ನು ನಾಲ್ಕು ವರ್ಷಗಳಿಗೆ ಇಳಿಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ದೇಶಾದ್ಯಂತ ಇದರ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆ ನಡೆಸಬೇಕೆಂದು ತನ್ನ ಎಲ್ಲಾ ಘಟಕಗಳಿಗೆ ಅದು ಕರೆ ನೀಡಿದೆ. ಅಕ್ಟೋಬರ್ 21ರಂದು ಬೆಳಿಗ್ಗೆ 11.30ಕ್ಕೆ ಸುಪ್ರಿಂ ಕೋರ್ಟ್‌ನೆದುರು ಮತ ಪ್ರದರ್ಶನದೊಂದಿಗೆ ಇದು ಆರಂಭವಾಗಲಿದೆ.

"ಸರ್ವೋಚ್ಚ ನ್ಯಾಯಾಲಯ ಈ ರೀತಿ ತೀರ್ಪು ನೀಡಿರುವುದು ಇದೇ ಮೊದಲ ಬಾರಿಯಲ್ಲ. ಬಲಾತ್ಕಾರದ ಅಪರಾಧಗಳಿಗೆ ಶಿಕ್ಷೆಯನ್ನು ಕಮ್ಮಿಮಾಡುವುದು ಯೋಗ್ಯ ಎಂದು ಅದೇಕೋ ಅದು ಯೋಚಿಸುವಂತಿದೆ. ಆದರೆ ಪ್ರಸ್ತುತ ಕೇಸಿನಲ್ಲಂತೂ ಮಾನ್ಯ ನ್ಯಾಯಾಧೀಶರುಗಳು, ಕೊಟ್ಟ ಕಾರಣ ಯಾರೂ ನಂಬಲಾಗದಂತದ್ದು.'ಕಾಮೋದ್ರೇಕ ತಡೆದುಕೊಳ್ಳಲಾಗದೆ' ನಡೆಸಿದ ಕೃತ್ಯ ಎಂದು ಅತ್ಯಾಚಾರಿಗಳಿಗೆ ಕ್ಷಮೆತೋರಿ ದೇಶದ ಅತ್ಯುಚ್ಚ ನ್ಯಾಯಾಲಯದ ನ್ಯಾಯಾಧೀಶರು ಮಹಿಳೆಯರ ಮಾನಭಂಗಕ್ಕೆ ಮುಕ್ತ ಪರವಾನಗಿ ನೀಡಿದಂತಾಗಿದೆ. ಇದು ಆಘಾತಕಾರಿ" ಎಂದು ಎಐಡಿಡಬ್ಲ್ಯುಎ ನೀಡಿದ ಪತ್ರಿಕಾ ಹೇಳಿಕೆ ತಿಳಿಸಿದೆ.

ಅತ್ಯಾಚಾರಿಗಳು 'ಕಾಮೋದ್ರೇಕಕ್ಕೆ ಬಲಿಯಾದವರು' ಆಗಿಬಿಟ್ಟರೆ, ಚಾಕುತೋರಿಸಿ ಅವರು ಅತ್ಯಾಚಾರ ನಡೆಸಿದ ಮಹಿಳೆ ಮಾನಭಂಗಕ್ಕೆ ತಾನೇ ಕಾರಣಳಾಗುತ್ತಾಳೆ. ಏಕೆಂದರೆ ಅವಳು ಆ ಇಬ್ಬರು ಗಂಡಸರನ್ನು ನಂಬಿ ಅವರೊಡನೆ "ಒಂದೇ ಕೋಣೆಯಲ್ಲಿ ಇರಲು ಒಪ್ಪಿ"ದ್ದರಿಂದ ತನ್ನ ಮಾನಭಂಗಕ್ಕೆ ತಾನೇ ಕಾರಣಳು. ಇದೊಂದು ವಿಚಿತ್ರ ತರ್ಕ" ಎಂದು ಮುಂದುವರಿಯುತ್ತಾ ಈ ಪತ್ರಿಕಾ ಹೇಳಿಕೆ ದೇಸರ ವ್ಯಕ್ತಪಡಿಸಿದೆ.

ಈ ತೀರ್ಪು ಉಳಿದರೆ ಮುಂದೆ ಇದೊಂದು ಉದಾಹರಣೆಯಾಗಿಬಿಡುತ್ತದೆ. ಇದನ್ನು ತೋರಿಸಿ ಇತರ ಅಪರಾಧಿಗಳನ್ನು ಬಿಟ್ಟುಬಿಡಲಾಗುತ್ತದೆ. ಮಹಿಳೆಯರ ವಿರುದ್ಧ ಅಪರಾಧಕ್ಕೆ ಒಳಗಾದವರಲ್ಲಿ ಕೇವಲ 3 ಶೇ. ಮಾತ್ರ ಶಿಕ್ಷೆಗೆ ಒಳಪಡುವಂತಹ ಸಮಯದಲ್ಲಿ ಇಂತಹ ಒಂದು ತೀರ್ಪು ಮಹಿಳೆಯರಿಗೆ ಮಾತ್ರವಲ್ಲ, ಮಾನವ ಘನತೆಯ ಬಗ್ಗೆ ಆತಂಕ ಪಡುವ ಎಲ್ಲರಿಗೂ ವಿನಾಶಕಾರಿ ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿದೆ.

ಅಂಗನವಾಡಿ ಯೋಜನೆಗಳ ಖಾಸಗೀಕರಣ ಬೇಡ

ಯೋಜನಾ ಆಯೋಗದ ನಿರ್ದೇಶಕರಿಗೆ ಒತ್ತಾಯ

ಅಂಗನವಾಡಿ ಯೋಜನೆಗಳನ್ನು ಸರಕಾರಿಯೇತರ ಸಂಘಟನೆಗಳಿಗೆ ವಹಿಸಿಕೊಡಲಾಗುತ್ತದೆ ಎಂಬ ಸುದ್ದಿಯ ಬಗ್ಗೆ ಅಂಗನವಾಡಿ ಮಹಿಳೆಯರ ಸಂಯುಕ್ತ ಸಂಘರ್ಷ ಸಮಿತಿಯಲ್ಲಿರುವ ವಿವಿಧ ಕಾರ್ಮಿಕ ಸಂಘಗಳ ಒಂದು ಪ್ರತಿನಿಧಿ ಮಂಡಳಿ ಯೋಜನಾ ಆಯೋಗದ ನಿರ್ದೇಶಕರನ್ನು ಭೇಟಿ ಮಾಡಿ ತೀವ್ರ ಆತಂಕವನ್ನು ವ್ಯಕ್ತಪಡಿಸಿತು.

ಐ.ಸಿ.ಡಿ.ಎಸ್. ಯೋಜನೆಗಳು ಈಗಾಗಲೇ ಪೋಷಣಾತ್ಮಕ ಆಹಾರದ ಅಭಾವ, ತಿಂಗಳ ಗೌರವಧನ ಪಾವತಿಯಾಗದಿರುವುದು ಇತ್ಯಾದಿ ಭ್ರಷ್ಟ ನಡವಳಿಕೆಗಳಿಂದ ಪೀಡಿತವಾಗಿವೆ. ಅಂಗನವಾಡಿ ಯೋಜನೆಗಳನ್ನು ಖಾಸಗೀಕರಿಸಿದರೆ ಅವಕ್ಕೂ ಅದೇ ಗತಿ ಬರುತ್ತದೆ ಎಂದು ಆಯೋಗ ತಿಳಿಸಿತು.

ನಿಯೋಗದ ಸದಸ್ಯರ ವಾದಗಳನ್ನು ತಾಳ್ಮೆಯಿಂದ ಕೇಳಿದ ನಿರ್ದೇಶಕರು ಅಂಗನವಾಡಿ ಮಹಿಳೆಯರೇ ಸ್ಥಳೀಯ ಮಟ್ಟದಲ್ಲಿ ಈ ಯೋಜನೆಗಳನ್ನು ತಮ್ಮ ಕೈಗೆ ತೆಗೆದುಕೊಂಡರೆ 10-15 ವರ್ಷಗಳಲ್ಲಿ ಪರಿಸ್ಥಿತಿ ಸುಧಾರಿಸಬಹುದು ಎಂದರು. ಈ ಯೋಜನೆಗಳು ಸರಕಾರದ ಕೈಯಲ್ಲೇ ಇರಬೇಕು, ಅವುಗಳ ಕಾರ್ಯನಿರ್ವಹಣೆಯಲ್ಲಿ ತೀವ್ರ ಸುಧಾರಣೆ ತರಬೇಕು ಎಂದು ನಿಯೋಗದ ಸದಸ್ಯರು ಒತ್ತಾಯಿಸಿದರು.

ಸಿಐಟಿಯುನ ವಿಮಲಾ ರಣದಿವೆ ಮತ್ತು ಪ್ರಮಿಳಾ ಪಂಢೆ, ಎ.ಐ.ಟಿ.ಯು.ಸಿ.ಯ ಕೆ.ಎಲ್. ಮಹೇಂದ್ರ, ಹೆಚ್.ಎಂ.ಎಸ್.ನ ಕಿರಣ್ ಅರೋರಾ ಹಾಗೂ ಕಮಲಾ ಶರ್ಮ ಮತ್ತು ಎಸ್.ಎಫ್.ಟಿ.ಯು.ವ ಬಿ.ಕೆ. ಪ್ರಸಾದ್ ಮತ್ತು ರಾಜಕುಮಾರಿ ಈ ನಿಯೋಗದ ಸದಸ್ಯರಾಗಿದ್ದರು.

ಸಿಐಟಿಯು 8ನೇ ಸಮ್ಮೇಳನ ಪಾಟ್ನಾದಲ್ಲಿ

ಸಿಐಟಿಯುನ 8ನೇ ಅಖಿಲ ಭಾರತ ಸಮ್ಮೇಳನ ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಮುಂದಿನ ವರ್ಷದ ಮಾರ್ಚ್ 8 ರಿಂದ 12 ರವರೆಗೆ ನಡೆಯಲಿದೆ. ಇದರಲ್ಲಿ ದೇಶದೆಲ್ಲೆಡೆಯಿಂದ 2,500 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅದರ ಮೊದಲು ದುಡಿಯುವ ಮಹಿಳೆಯರ ಅಖಿಲ ಭಾರತ ಸಮಾವೇಶ ನಡೆಯಲಿದೆ. ಅಕ್ಟೋಬರ್ 19 ರಂದು ನವದೆಹಲಿಯಲ್ಲಿ ಸಭೆ ಸೇರಿದ ಪೂರ್ಣ ಕಾರ್ಯದರ್ಶಿ ಮಂಡಳಿ ಸಭೆ ಈ ನಿರ್ಣಯವನ್ನು ಕೈಗೊಂಡಿದೆ. 8ನೇ ಸಮ್ಮೇಳನದ ಎಲ್ಲಾ ವಿವರಗಳ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಕಾಂ. ಇ. ಬಾಲನಂದನ್ ಅಧ್ಯಕ್ಷತೆಯಲ್ಲಿ ನಡೆದ ಸಭೆ ಡಿಸೆಂಬರ್ 7,1993 ರಂದು ಕೈಗಾರಿಕಾ ಸಂಬಂಧಗಳ ಮಸೂದೆಯ ವಿರುದ್ಧ ದೇಶವ್ಯಾಪಿ ಮತಪ್ರದರ್ಶನ, ಧರಣೆ, ರ್‍ಯಾಲಿಗಳನ್ನು ನಡೆಸಬೇಕೆಂದು ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಅಂಗೀಕರಿಸಿದ ಕಾರ್ಯಕ್ರಮವನ್ನು ಅನುಮೋದಿಸಿತು. ಡಂಕೆಲ್ ಪ್ರಸ್ತಾಪಗಳ ವಿರುದ್ಧ ಸಾಮೂಹಿಕ ಸಂಘಟನೆಗಳ ವೇದಿಕೆ ಅಂಗೀಕರಿಸಿದ ಕಾರ್ಯಕ್ರಮವನ್ನು ಸಿಐಟಿಯು ಕಾರ್ಯದರ್ಶಿ ಮಂಡಳಿಯ ಈ ಸಭೆ ಅನುಮೋದಿಸಿದೆ.

ಬೋನಸ್‌ನ ಮೇಲಿನ ಮಿತಿಗಳನ್ನು ತೆಗೆಯುವ ಬಗ್ಗೆ ಸರಕಾರ ಇನ್ನೂ ಯಾವುದೇ ನಿರ್ಣಯವನ್ನು ಕೈಗೊಳ್ಳದಿರುವುದನ್ನು ಖಂಡಿಸಿದ ಸಭೆ ತಕ್ಷಣ ಈ ಬಗ್ಗೆ ನಿರ್ಣಯ ಕೈಗೊಳ್ಳದಿದ್ದರೆ ಕಾರ್ಮಿಕ ಸಂಘಗಳು ಒಂದು ಐಕ್ಯ ಹೋರಾಟಕ್ಕಿಳಿಯುತ್ತವೆ ಎಂದು ಎಚ್ಚರಿಸಿದೆ.

ಹಣಕಾಸು ಸಂಸ್ಥೆಗಳ ನೌಕರರು, ನಿವೃತ್ತಿಗಳು ಮೂರನೇ ನಿವೃತ್ತಿ ಸೌಲಭ್ಯವಾಗಿ ಪೆನ್ಶನ್ ಹಾಗೂ ವೇತನ ಪರಿಷ್ಕರಣ ಒತ್ತಾಯಿಸಿ ನವಂಬರ್ ಎರಡರಂದು ನಡೆಸಲು ನಿರ್ಧರಿಸುವ ಅನಿರ್ದಿಷ್ಟಕಾಲದ ಮುಷ್ಕರ ಹಾಗೂ ಬಿಹಾರ ವಿದ್ಯುಚ್ಛಕ್ತಿ ನೌಕರರು ಆರಂಭಿಸಿರುವ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ದೆಂಬಲ ವ್ಯಕ್ತಪಡಿಸಲಾಯಿತು.

ಸಭೆಯ ಆರಂಭದಲಿ ಇತ್ತೀಚಿನ ತಿಂಗಳುಗಳಲ್ಲಿ ಮರಣಹೊಂದಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಹಾಗೂ ಮಹಾರಾಷ್ಟ್ರದ ಭೀಕರ ಭೂಕಂಪದಲ್ಲಿ ಪ್ರಾಣಕಳಕೊಂಡ ಸಾವಿರಾರು ಮಂದಿಗೆ ಸಂತಾಪ ವ್ಯಕ್ತಪಡಿಸಲಾಯಿತು. ಪರಿಹಾರ ನಿಧಿಗೆ ಸಿಐಟಿಯು ಸದಸ್ಯರು ಉದಾರವಾಗಿ ಕಾಣಿಕೆ ನೀಡುತ್ತಿದ್ದಾರೆ. ಸಿಐಟಿಯುವಿನ ಮಹಾರಾಷ್ಟ್ರ ಸಮಿತಿ ಭೂಕಂಪ ಪೀಡಿತರ ಮಕ್ಕಳಿಗಾಗಿ ಒಂದು ಶಾಲೆ ಹಾಗೂ ಆಸ್ಪತ್ರೆ ಕಟ್ಟಿಸಲು ನಿರ್ಧರಿಸಿದ್ದು ಎಲ್ಲಾ ರಾಜ್ಯ ಘಟಕಗಳು ಮಹಾರಾಷ್ಟ್ರ ರಾಜ್ಯ ಸಮಿತಿಗೆ ಈ ನಿಟ್ಟಿನಲ್ಲಿ ಎಲ್ಲಾ ನೆರವು ನೀಡಬೇಕೆಂದು ಕರೆ ನೀಡಿದೆ.

ಸೆಪ್ಟೆಂಬರ್ 9ರ ಯಶಸ್ವಿ ಭಾರತ್ ಬಂದ್ ಹಾಗೂ ರಾಷ್ಟ್ರೀಯ ಏಕತಾ ಆಂದೋಲನದಲ್ಲಿ ಕಾರ್ಮಿಕರ ಭಾಗವಹಿಸುವಿಕೆಯ ವಿಮರ್ಶೆಯನ್ನು ಸಭೆ ನಡೆಸಿತು.

ಸಿಐಟಿಯು ಕಾರ್ಯಕಾರಿ ಸಮಿತಿಯ ಮುಂದಿನ ಸಭೆ ಡಿಸೆಂಬರ್ 13-15 ರವರೆಗೆ ಗುವಾಹಟಿಯಲ್ಲಿ ನಡೆಸಲು ನಿರ್ಧರಿಸಲಾಯಿತು.

ಭೂಮಿ ಬಾಯಿ ಬಿಟ್ಟಾಗ........

ಪುಟ 5ರಿಂದ

ಅಂದರೆ ಚೀನಾದಲ್ಲಿ. 1976 ರ ಫೆಬ್ರವರಿ ತಿಂಗಳಲ್ಲಿ ಲಿಯೊನಿಂಗ್ ಪ್ರಾಂತ್ಯದಲ್ಲಿ ಘಟಿಸಿದ (7.3 ರಿಕ್ಟರ್ ಬಲದ) ಭಾರಿ ಭೂಕಂಪವನ್ನು ಪೂರ್ವಭಾವಿಯಾಗಿ ಘೋಷಿಸಲಾಯಿತು. ಐತಿಹಾಸಿಕ ದಾಖಲೆಗಳ ವಿವರವಾದ ಅಧ್ಯಯನದಿಂದ ಇದನ್ನು ಮೊದಲೇ ಊಹಿಸಿದ್ದ ಚೀನಾದ ಭೂವೈಜ್ಞಾನಿಕರು 1973 ರಿಂದಲೇ ಈ ಅಧ್ಯಯನ ಆರಂಭಿಸಿದರು. ಇದಕ್ಕಾಗಿ ಹತ್ತು ಹಲವು ವೈಜ್ಞಾನಿಕ ಉಪಕರಣಗಳು, ಹಾಗೂ ಇತರ ಸಾಂಪ್ರದಾಯಿಕ ವಿಧಾನಗಳನ್ನು ಬಳಸಲಾಯಿತು. ಭಾರಿ ಪ್ರಮಾಣದಲ್ಲಿ ಈ ಬಗ್ಗೆ ಪ್ರಚಾರ ಮಾಡಲಾಯಿತು. ಫೆಬ್ರವರಿ ಮೊದಲ ವಾರದಿಂದಲೇ ಜನಗಳು ಮನೆಗಳ ಹೊರಗೆ ಬಯಲಿನಲ್ಲಿ ಇರಲಾರಂಭಿಸುವಂತೆ ಸರ್ಕಾರ ನೋಡಿಕೊಂಡಿತು. ರಾತ್ರಿ ಜನರು ಎಚ್ಚರದಿಂದಿರಲೆಂದು ಹಲವು ಬಯಲು ಸಿನೇಮಾ ಮಂದಿರಗಳನ್ನು ತೆರೆಯಲಾಯಿತು. ಇದರಿಂದ ಆದ ಜೀವ ಹಾನಿಯನ್ನು ತೀವ್ರವಾಗಿ ಕಡಿತಗೊಳಿಸಲಾಯಿತು. ಇದು ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷ ಹಾಗೂ ಜನತೆಯ ನಡುವಿನ ಗಾಢ ಸಂಬಂಧ, ಇಡೀ ಸಮಾಜದ ಕಲ್ಯಾಣದ ದೃಷ್ಟಿಯಿಂದ ಮಹತ್ತರವೆಂದು ಬಗೆಯುವ ಸಮಾಜವಾದಿ ವ್ಯವಸ್ಥೆಯಿಂದ ಸಾಧ್ಯವಾಯಿತು ಎಂಬುದನ್ನು ಇಲ್ಲಿ ಗಮನಿಸಬೇಕು. ಆದರೂ ಭೂಕಂಪ ಮುನ್ಸೂಚನೆಗೆ ನಿರ್ದಿಷ್ಟ ವಿಧಾನ ರೂಪಿಸಲಾಗಿದೆ ಎಂದು ಹೇಳುವಂತಿಲ್ಲ ಎಂದು ಚೀನಿ ವಿಜ್ಞಾನಿಗಳು ಹೇಳಿದ್ದಾರೆ. ಚೀನಾದಲ್ಲಿ ಸುಮಾರು ಹತ್ತು ಸಾವಿರ ಭೂಕಂಪ ಶಾಸ್ತ್ರಜ್ಞರು ಹಾಗೂ ಭೂ ವಿಜ್ಞಾನಿಗಳು ಈ ಅಧ್ಯಯನದಲ್ಲಿ ತೊಡಗಿದ್ದಾರಂತೆ. 1976 ರ ಜುಲೈನಲ್ಲಿ ಟಾಂಗ್ ಶಾನ್ ಪ್ರಾಂತ್ಯದಲ್ಲಿ ಸಂಭವಿಸಿದ ಭೂಕಂಪದ ಮುನ್ಸೂಚನೆ ಸಾಧ್ಯವಾಗದೆ 7 ಲಕ್ಷ ಜನ ಇದರಲ್ಲಿ ಮಡಿದರು. ಆದ್ದರಿಂದ ಸಮಸ್ಯೆಯು ತೀರಾ ಸರಳವಾದ್ದು ಅಲ್ಲ. ಆದರೆ ಭಾರತದಲ್ಲಿ ಈ ಬಗ್ಗೆ ಸಮಗ್ರ ಅಧ್ಯಯನ ಹಾಗೂ ಇಂತಹ ದುರಂತದ ನಿರ್ವಹಣೆ ಹೇಗೆ ಎಂಬ ಯೋಜನೆ ಬಗ್ಗೆ ಇನ್ನೂ ಸ್ಪಷ್ಟ ಅರಿವಿಲ್ಲ. ಈಶಾನ್ಯ ಭಾರತದ ಭೂಕಂಪ-ಪೀಡಿತ ಕ್ಷೇತ್ರದಲ್ಲಿ ಸರ್ಕಾರ ಸ್ಥಾಪಿಸಿರುವ 68 ಭೂಕಂಪದ ಅಧ್ಯಯನ ಕೇಂದ್ರಗಳು ಇಂತಹ ಮೊದಲ ಪ್ರಯತ್ನ. ಇಂತಹ ಪ್ರಯತ್ನದಲ್ಲಿ ಜನರನ್ನು ತೊಡಗಿಸುವ ಬಗ್ಗೆ ತೀವ್ರ ಪ್ರಯತ್ನ ನಡೆಯಬೇಕು.

ಇನ್ನೊಂದು ಭೂಕಂಪದ ದುರಂತ ಕಡಿಮೆ ಮಾಡುವ ಉಪಾಯವೆಂದರೆ ಭೂಕಂಪ ನಿರೋಧಕ ಕಟ್ಟಡಗಳ ರಚನೆ, ಬಹುಮಹಡಿ ದೊಡ್ಡ ಕಟ್ಟಡಗಳಿಗೂ, ಗ್ರಾಮೀಣ ಪ್ರದೇಶಕ್ಕೆ ಸರಿಯಾಗಿರುವ ಸಣ್ಣ ಮನೆಗಳಿಗೂ ಇಂತಹ ವಿನ್ಯಾಸಗಳು ಈಗಾಗಲೇ ಲಭ್ಯವಿವೆ. ಇಂತಹ ವಿನ್ಯಾಸಗಳನ್ನು ದೊಡ್ಡ ಪ್ರಮಾಣದಲ್ಲಿ ಪ್ರಚಾರ ಪಡಿಸಿ, ಜನ ಬಳಸುವಂತೆ ಯೋಜಿತ ರೀತಿಯಲ್ಲಿ ಮಾಡಬೇಕು. ಅಗತ್ಯಬಿದ್ದರೆ ಕಾನೂನು, ವಿಧಿ ವಿಧಾನಗಳನ್ನು ಈ ಬಗ್ಗೆ ಬಳಸಬೇಕು. ಇಂತಹ ಕ್ರಮಗಳನ್ನು ಜಪಾನ್‌ನಲ್ಲಿ ಭೂಕಂಪ ಪೀಡಿತ ಅಮೇರಿಕದ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ಜಪಾನ್ ಅತ್ಯಂತ ಭೂಕಂಪ ಪೀಡಿತ ಪ್ರದೇಶ. ಅಲ್ಲಿ ವಿಶೇಷ ವಿನ್ಯಾಸದಿಂದ ತಯಾರಿಸಿದ ಹಲವಾರು ಬಹುಮಹಡಿ ಕಟ್ಟಡಗಳು ತೀವ್ರ ಭೂಕಂಪವನ್ನು ತಡೆದು ನಿಂತಿವೆ. ಇದು ಖಂಡಿತ ಸಾಧ್ಯವಾಗುವ ಕೆಲಸ. ಅಸಮಾನ ಸಮಾಜದಲ್ಲಿ ಇಂತಹ ವಿಶೇಷ ವಿನ್ಯಾಸ ಮನೆಗಳು ಬಡವರಿಗೆ ಲಭ್ಯವಿಲ್ಲದಿರುವ ಸಾಧ್ಯತೆ ಹೆಚ್ಚು. ಅದಕ್ಕಾಗಿ ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಇದು ಮಾರುಕಟ್ಟೆ-ಕೇಂದ್ರಿತ ಸಮಾಜದಲ್ಲಿ ಸಾಧ್ಯವಿಲ್ಲ. ಯೋಜಿತ ಬೆಳವಣಿಗೆ ಹೊಂದಿರುವ ಸಮಾಜದಲ್ಲಿ ಮಾತ್ರ ಸಾಧ್ಯ.